ಅಪರಂಜಿ

ತಿಳಿನಗೆಯ ಕಾರಂಜಿ

ನವೆಂಬರ್–2026

ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ

ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಬಿಡಿ ಪ್ರತಿ: ರೂ. 10/–

NANKI
CONVENTION HALL

Premium WEDDING VENUE

Elevate your events at Nanki Convention Hall.

A stylish and comfortable venue perfect for Weddings, Receptions, Conferences.

Accessibility

- 1 km from Bus Stand
- 5 km from Airport
- 4 km from Railway Station

Airport Road
Hubli - Karnataka

+91 94482 83709

www.nankiconventionhall.com

M P BIRLA INSTITUTE OF MANAGEMENT

Associate Bharatiya Vidya Bhavan

APPROVED BY AICTE & AFFILIATED TO
DR. MANMOHAN SINGH BENGALURU CITY UNIVERSITY

DUAL SPECIALISATIONS OF YOUR CHOICE
Marketing/Finance/HRM/
Business Analytics

TWO YEAR FULL TIME MBA DEGREE AT BENGALURU

ADMISSION OPEN

2026-2028

A distinguished standalone B-School in Bengaluru situated in the heart of the city.

WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.

SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.

ADMISSION PROCESS

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.

For Admission Contact:
+91 99022 52842 / 99022 52981

www.mpbim.com
contact@mpbim.com

M P Birla Institute of Management
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ – 44

ಸಂಚಿಕೆ – 02

ನವೆಂಬರ್–2026

ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 10/–

ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಈ ಸಂಚಿಕೆಯಲ್ಲಿ...

ಕಿಡಿ	ಪ್ರಕಾಶ್	03
ಅವಿಸ್ಮರಣೀಯ ನಗೆಗಾರರು–18	ಶಿವಕುಮಾರ್	04
ಪುಟ್ಟರಾಜಕುಮಾರ–4	ಬಿ.ಎಸ್. ಶೈಲಜಾ	07
ಮುಂದೂಡು. ಕಾಮ್	ಶ್ರೀಧರ ಬಾಣಾವರ	12
ಹೈ ಪ್ರೊಫೈಲ್ ಮದುವೆ	ಗುಂಡುರಾವ್ ದೇಸಾಯಿ	15
ತುಂತುರು	ದಂನಆ	19
ನಾದೋಪಾಸಕರ.....	ಸಂಜಯ ಹಾವನೂರ	20
ವ್ಯಾನು ಬಾರದೆ	ಎಚ್. ಡುಂಡಿರಾಜ್	26
ಕೈಲಾಶ್.....ಹಿಡಿದ....	ಜ್ಯೋತಿ ರಾಜೇಶ್	27
ವೈದ್ಯರಲ್ಲಿ ರಸನಿಮಿಷಗಳು	ಡಾ. ಓಂಪ್ರಕಾಶ್	28
ಆ ಕಾಲವೊಂದಿತ್ತು	ಶಿವಕುಮಾರ್	29
ಬೆಳ್ಳಗಾದ ಕೂದಲು.......	ಎನ್.ವಿ.ರಘುರಾಮ್	33
ನನ್ನ ದೇಶದ.....	ಹಳದೀಪುರ ವಾಸುದೇವರಾವ್	35
ಮೂಖರ್ಜಿಯ ಕಥೆ	ಪುಷ್ಪಲತಾ ಟಿ ಜಿ	37
ಅರಾಸೆಯ ಒಸಗೆ	ಅ.ರಾ.ಸೇ	39

ವ್ಯಂಗ್ಯ ಚಿತ್ರಗಳು : ಒಳಪುಟಗಳು : ಚಂದ್ರನಾಥ್ ಆಚಾರ್ಯ

ಅಶೋಕ್ ಹೆಮ್ಮಿಗೆ, ರಘುಪತಿ ಶೃಂಗೇರಿ

ಡಿ.ಟಿ.ಪಿ. : ರವಿಕುಮಾರ್. ವಿ, ಯರಪನಹಳ್ಳಿ

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
Email:koravanjiaparanji@gmail.com, Web : https://aparanjimag.in ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

For Online payment of Subscription: Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010



ಅಪರಂಜಿ ಕಿಡಿ

ಪ್ರಕಾಶ್

" ಪೋಲೀಸರಿಂದ ಕಿರುಕುಳ "

–ಶೀರ್ಷಿಕೆ

ಬೇಲಿಯೇ ಎದ್ದು.......

* * *

2027ರ ಅಂತ್ಯಕ್ಕೆ "ಭಿಕ್ಷುಕ ಮುಕ್ತ ಬೆಂಗಳೂರು"

–ದಿನಪತ್ರಿಕೆ

ಸರ್ಕಾರದ ಪ್ರಯತ್ನಗಳು ಮಾನವೀಯತೆಯಿಂದ
ತುಳುಕಲಿ ಎಂದು ಅಪರಂಜಿ ಪ್ರಾರ್ಥಿಸುತ್ತಾಳೆ. !!

* * *

ಇ.ಡಿ. ಕಸ್ಟಡಿಗೆ ಓಜೋನ್ ಪ್ರವರ್ತಕರು

–ದಿನಪತ್ರಿಕೆ

ಪಾಪ ಓಜೋನ್ ಪದರ ಅವರಿಗೆ ರಕ್ಷಣೆ ಕೊಡಲಿಲ್ಲ. !!

* * *

ನಗೋಯಾಗೆ ಸಯೋನರಾ ಹೇಳಿ ತನರಿಗೆ
ಹಿಂತಿರುಗುತ್ತಿರುವ ಕ್ರೀಡಾಪಟುಗಳಿಗೆ
ಅಪರಂಜಿಯ ಶುಭಾಶಯಗಳು !!

* * *

ನೈಸ್ ಹಗರಣದ ತನಿಖೆ ಅಬಾಧಿತ–ಹೈಕೋರ್ಟ್ ಆದೇಶಕ್ಕೆ
ತಡೆ ನೀಡಲು ಸುಪ್ರೀಮ್ ಕೋರ್ಟ್ ನಕಾರ !

–ದಿನಪತ್ರಿಕೆ

ವಿರೋಧಾಭಾಸದ ಪರಮಾವಧಿ ಎನ್ನಬಹುದೇ ?!

* * *

ನಕಲಿ ಸುಪ್ರೀಮ್ ಕೋರ್ಟ್ ಆದೇಶ :
ಅಪರಾಧಿಯ ಬಿಡುಗಡೆ. ಡಿ.ಐ.ಜಿ. ಸೆರೆ.

–ಪತ್ರಿಕೆ

ವಿಕೃತ ಅನುಕಂಪ ಎಂಬುದಕ್ಕೆ ಕರಾಳ ಉದಾಹರಣೆ !!

* * *

ಭಾರತದ ಮಹಿಳಾ ಕ್ರಿಕೆಟ್ ತಂಡ ಇಷ್ಟು ಸುಂದರವಾಗಿ
ಬೆಳೆಯುತ್ತೆ ಅಂತ ನಾನು ಅಂದುಕೊಂಡಿರಲಿಲ್ಲ ಎಂಹು
ಅಪರಂಜಿ ಹೆಮ್ಮೆ ಪಟ್ಟಳಂತೆ.!!

* * *

ಕಮಲಾ ರಾಮಸ್ವಾಮಿ

✍ ಶಿವಕುಮಾರ್

ಅಪರಂಜಿಯ ಪ್ರಾರಂಭದ ದಿನಗಳಿಂದ ಪತ್ರಿಕೆಗೆ ನಗೆ ಲೇಖನಗಳನ್ನು ಬರೆಯಲು ತೊಡಗಿ, ಸುಮಾರು ಎರಡು ದಶಕಗಳಷ್ಟು ಅವಧಿಯಲ್ಲಿ ಅನೇಕ ಲೇಖನಗಳನ್ನು ನೀಡಿ ಕನ್ನಡದ ನಗೆ ರಸಿಕರನ್ನು ರಂಜಿಸಿದ ಶ್ರೀಮತಿ ಕಮಲಾ ರಾಮಸ್ವಾಮಿಯವರು ಬಹುಮುಖ ಪ್ರತಿಭೆಯ ಬರಹಗಾರ್ತಿ. ಇವರ ಸಾಹಿತ್ಯ ಕೃಷಿ ಹಾಸ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಕಮಲಾರವರ ಆಸಕ್ತಿ ವೈವಿಧ್ಯಮಯ. ಕ್ಷೇತ್ರಗಳಿಗೆ ಹರಡಿದೆ. ಮಕ್ಕಳಿಗಾಗಿ ಬರೆದ ಪುಸ್ತಕಗಳಾದ "ಡಯಾಜಿನೀಸ್ ಮತ್ತು ಗುಲಾಮ", "ಗುಲಾಬಿ ರಿಬ್ಬನ್", "ಕೋಗಿಲೆ ಕಿರೀಟ" ಮುಂತಾದ ಪುಸ್ತಕಗಳು ಶಿಶು ಸಾಹಿತ್ಯದ ಉತ್ತಮ ನಿದರ್ಶನಗಳು.

ಮಹಿಳೆಯರಿಗೆ ವ್ಯವಹಾರ ಜ್ಞಾನವನ್ನು ಒದಗಿಸುವ ಸಲುವಾಗಿ ಇವರು ಅನೇಕ ಪುಸ್ತಕಗಳನ್ನು ಬರೆದರು, "ಹಣಕಾಸಿನ ವ್ಯವಹಾರಕ್ಕೆ ಬ್ಯಾಂಕ್", "ಬಿಡುವಿನ ವೇಳೆಯ ಸದುಪಯೋಗ ಹೇಗೆ?," "ಅಂಚೆ ಸೇವೆ", "ರಕ್ತದ ಬ್ಯಾಂಕ್ ಕಣ್ಣಿನ ಬ್ಯಾಂಕ್" ಇವೇ ಮುಂತಾದ ಮಾಹಿತಿ ಕೈಪಿಡಿಗಳು ಇವರ ಒಂದು ಮುಖವಾದರೆ, ಪಾಕಶಾಸ್ತ್ರದ ಪುಸ್ತಕಗಳಾದ "ಉತ್ತರ ಭಾರತದ ಅಡುಗೆಗಳು," "ಅನಾಯಾಸದ ಅಡಿಗೆ." ಮುಂತಾದ ಹೊತ್ತಗೆಗಳು ಗೃಹಿಣಿಯರಿಗೆ ಉಪಯುಕ್ತವೆನ್ನಬಹುದಾದ ಪುಸ್ತಕಗಳಾಗಿವೆ.

ಕಮಲಕ್ಕ ನನ್ನ ಎರಡನೆಯ ಹಿರಿಯ ಸೋದರಿ. ಇವರಿಗೆ ನಗು ಮನೋಭಾವ ಹುಟ್ಟಿನಿಂದಲೇ ಇದ್ದಂತೆ ಕಾಣುತ್ತಿತ್ತು. ಎಲ್ಲಿ ಯಾವ ಗುಂಪಿನಲ್ಲಿ ನಗೆಯ ಕಿಲಕಿಲ ಕೇಳಿಬರುತ್ತಿತ್ತೋ ಅಲ್ಲಿ ಕಮಲ ಇರುವುದು ಖಂಡಿತ ಎನ್ನುವಷ್ಟರಮಟ್ಟಿಗೆ ಕಮಲಳ ಖ್ಯಾತಿ ಹರಡಿತ್ತು. ನಮ್ಮ ತಂದೆ ರಾ.ಶಿ. ಯವರ ಸಾಹಿತ್ಯಾಭಿರುಚಿ ಸಹಜವಾಗಿಯೇ ಇವರಿಗೂ ಹರಿದುಬಂದಿತ್ತು. ಈಕೆ ಕಾಲೇಜಿನಲ್ಲಿ ಓದುತ್ತಿದ್ದಾಗಲೇ, ಎಂ.ಆರ್ ಲಕ್ಷಮ್ಮ ಹೊರತರುತ್ತಿದ್ದ ಸೋದರಿ ವಾರಪತ್ರಿಕೆಗೆ ಬರಹಗಳನ್ನು ನೀಡಲು ಪ್ರಾರಂಭಿಸಿದ್ದರು. ಅನಂತರ ಬೆಟಗೇರಿ ಕೃಷ್ಣಶರ್ಮ (ಆನಂದಕಂದ) ಇವರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ ಧಾರವಾಡದ "ಜಯಂತಿ" ಎಂಬ ಕನ್ನಡ ಮಾಸಪತ್ರಿಕೆಗೆ ಕಮಲಾರವರು, "ಜೇಡ್ ದೇವತೆ" ಎಂಬ ನೀಳ್ಗಥೆಯೊಂದನ್ನು ಬರೆದಿದ್ದರು.

ಕಮಲಾರವರ ನಗೆ ಬರಹಗಳ ಸಂಕಲನ "ನಲಿವುಗರಿ" ಮೂವತ್ತನಾಲ್ಕು ನಗೆಲೇಖನಗಳನ್ನೊಳಗೊಂಡ ಈ ಪುಸ್ತಕಕ್ಕೆ ಖ್ಯಾತ ನಗೆಸಾಹಿತಿ ಶ್ರೀಮತಿ ಟಿ.ಸುನಂದಮ್ಮ ಚೆಂದವಾದ ಮುನ್ನುಡಿಯೊಂದನ್ನು ಬರೆದುಕೊಟ್ಟಿದ್ದರು. ಕಮಲಾ ರಾಮಸ್ವಾಮಿಯವರ ಬರಹಗಳ ಬಗ್ಗೆ ಬಗ್ಗೆ ಟಿ.ಸುನಂದಮ್ಮ ಹೀಗೆನ್ನುತ್ತಾರೆ.

ಹಾಸ್ಯ ಲೇಖನಗಳ "ನಲಿವುಗರಿ" ಶ್ರೀಮತಿ ಕಮಲಾ ರಾಮಸ್ವಾಮಿಯವರ ಹಾಸ್ಯ ಲೇಖನಗಳ ಮೊದಲ ಸಂಕಲನ. ಸುಂದರ ನಾಮಧೇಯದ ಈ 'ಗರಿ' ಯಲ್ಲಿ ಮೂವತ್ತೇಳು ರೇಕುಗಳಿವೆ.

ಕೆಲವು ಪುಟ್ಟವು. ಮತ್ತಷ್ಟು ಉದ್ದ ಬೆಳದವು. ನವಿಲುಗರಿಯಲ್ಲಿ ನಾಲ್ಕಾರು ಬಣ್ಣಗಳಿದ್ದರೆ 'ನಲಿವುಗರಿ' ಯಲ್ಲಿ ಹತ್ತಾರು ಬಣ್ಣಗಳು. ತಿಳಿಹಾಸ್ಯದ ಸೊಗಸು. ವಿಡಂಬನೆಯ ಮೊನಚು. ವ್ಯವಹಾರದ ಒಗಚು, ಸಂಸ್ಕೃತಿಯ ಸಿಹಿ ! ವ್ಯಂಗ್ಯದ ಚುಚ್ಚಿಲ್ಲದ ಸರಳ ಹಾಸ್ಯ, ಮನರಂಜಿಸಿ , ಓದುಗರ ಮುಗುಳುನಗೆ ಅರಳು ನಗೆಗಳನ್ನು ಮೂಡಿಸುತ್ತದೆ.

ಉತ್ತರ ಭಾರತದಲ್ಲಿ ಬಹಳಕಾಲ ಇದ್ದ ಲೇಖಕಿ, ಬೇರೆ ಬೇರೆ ಪ್ರಾಂತ್ಯಗಳ ಜನರ ಒಡನಾಟ ಮಾಡಿದ್ದಾರೆ. ಅವರ ಆಚಾರ, ಆಹಾರಗಳ ಪರಿಚಯದಿಂದಾಗಿ ಕಚಗುಳಿ ಇಡುವ ಅನೇಕ ಲೇಖನಗಳು : 'ಕ್ರಂಪಲ್ ಬೇಕ್ ಕುಕೀಸ್', 'ಸಹಾ', 'ಚೋಲೆ', 'ಬೆಂಡೆಕಾಯಿ ಸೂಫ್ಲೆ' ಇಂಥವು. ಚೋಲೆ ಎಕ್ಸ್‌ಪರ್ಟ್ ಹರ್‌ದೀಪ್ ಕೌರ್ ಮೀನಾ ಬಜಾರಕ್ಕೆ ಚೋಲೆ ತರಲು ತಡವಾದಾಗ ಹೊರಬಿದ್ದ ಗುಟ್ಟು 'ನನ್ನ ಗಂಡನೇ ಮಾಡೋದು' ಎಂದದ್ದು. ಸಲ್ವಾರ್ ಕಮೀಜದ ಪಾಕಪ್ರವೀಣೆ ಮಾಡಿದ ಲೋಳೆ ಬೆಂಡೇಕಾಯಿ ಗೊಜ್ಜು, ಬೆಂಡೆಕಾಯಿ ಸೂಫ್ಲೆ ಆಗುತ್ತದೆ. ಜೆಕೋಸ್ಲೋವಾಕಿಯಾ ಗೆಳೆಯ ಕೊಟ್ಟ ಭಾರೀ 'ವೆಜಟೇರಿಯನ್' ಊಟದಲ್ಲಿನ ಗರಿ ಗರಿ ಉಪ್ಪೇರಿಯ ಮೂಲ ಕೇಳಿದಾಗ ಹೊರಬಂದ ಸತ್ಯವನ್ನು ಓದಿಯೇ ಸಂತಸಿಸಬೇಕು. ರಾಜಭೋಜನ ನಿರೀಕ್ಷಿಸಿದಲ್ಲಿ ಸಿಕ್ಕಿದ್ದು ಬೆಳ್ಳಿಲೋಟದಲ್ಲಿ ಬೇವಿನ ರಸ. ಭಾರಿ ಊಟದಲ್ಲಿ ಸಗಣಿ ಬೆರೆಸಿದಂತಹ ಉಂಡೆ, ಬೆಣಚುಕಲ್ಲಾದ ಮಿಠಾಯಿ !

"ಯಾತ್ರಾರ್ಥಿ" "ಕರೆಂಟ್ ಕೈ ಕೊಟ್ಟಾಗ" "ಕಾಲಾಯ ತಸ್ಮೈ ನಮಃ" ಇವೆಲ್ಲಾ ಹಗುರಾದ ವಿಡಂಬನೆಗಳು. ನಾಯಕಿಯ ಕತ್ತು ಉಳುಕಿ, ಫಿಸಿಯೋ ಥೆರಪಿಗಾಗಿ ವೈದ್ಯರಲ್ಲಿಗೆ ಹೋಗಲು ಏರಿದ ಬಿ.ಟಿ.ಎಸ್. ಬಸ್ಸಿನಲ್ಲಿ ಪಯಣಿಸುವಾಗ, ಅಲ್ಲಲ್ಲಿ ಬದಲಾಯಿಸಿ, ಅದುರಾಡಿ, ಡಿಕ್ಕಿ ಹೊಡೆದು ಇಳಿದಾಗ, ಕತ್ತುನೋವು ಮಾಯ ! ಆರ್ಡರ್ ಕೊಟ್ಟ ಹೋಳಿಗೆ ಪ್ಯಾಕೆಟ್ ಬಿಚ್ಚಿದಾಗ ಒಳಗಿದ್ದದ್ದು ಹಳೇ ಚಪ್ಪಲಿ ಜೋಡಿಗಳು. ಒಬ್ಬಟ್ಟಿನ ಸುಬ್ಬಮ್ಮನ ಸಬ್ಸ್ಟಿಟ್ಯೂಟ್ ನಾಗರಾಜ ತಯಾರಿಸಿದ ತೆಂಗಿನಕಾಯಿ ಬೆಲ್ಲದ ಪೇಸ್ಟು 'ಹೂರಣ ಪುರಾಣ'. ಶಸ್ತ್ರ ಚಿಕಿತ್ಸೆಯಾದ ಹುಡುಗಿ ಮೊದಲು ಕೇಳುವುದು ತನ್ನನ್ನು ಎಂದುಕೊಂಡವರು, ತಾಯಿ, ಪಾಪು, ಪ್ರಜ್ಞೆ ತಿಳಿದಾಗ ಅವಳ ಫಸ್ಟ್ ಲವ್, ಅನೆಸ್ತೀಸಿಯಾಕ್ಕೆ ತೆಗೆದಿದ್ದ ಕೃತಕ ಹಲ್ಲು. ಇಂತಹ ತಿಳಿಹಾಸ್ಯ ಚಿತ್ರಣಗಳು ಈ ಕೃತಿಯಲ್ಲಿವೆ. ಸುಸ್ಮಿತಾ ಸೇನ್ – ಶೇಷನ್ ಹೆಸರುಗಳ ಬೆರಕೆ "ಸೆನ್ಸೇಷನ್", "ಟೆಂಡರ್ ಬೈ ದ ನೈಟ್" ಚಿತ್ರದ ಹೆಸರಿನಲ್ಲಿನ ಟೆಂಡರ್, "ಕ್ರೇನ್" ಈ ಪದಗಳನ್ನು ತಮ್ಮ ವೃತ್ತಿಗೆ ಅರ್ಥೈಸಿಕೊಂಡ ಇಂಜಿನಿಯರುಗಳು, ಶ್ಲೇಷೋಕ್ತಿಯ ಉದಾಹರಣೆಗಳು.

ಇತ್ತೀಚೆಗೆ ಲೇಖಕಿಯರು ಹಾಸ್ಯಕ್ಷೇತ್ರಗ ಕಡೆಗೆ ಗಮನ ಹರಿಸಿರುವುದರಿಂದ ಹಾಸ್ಯ ಸಾಹಿತ್ಯದ ಕೊರತೆ ಕಡಿಮೆಯಾಗುತ್ತಿರುವುದು ಆಶಾದಾಯಕ ಬೆಳವಣಿಗೆ. ..."

ಕಮಲಾರವರ ನಗೆಶೈಲಿಯನ್ನು ಪರಿಚಯಿಸುವ ಉದ್ದೇಶದಿಂದ "ನಲಿವುಗರಿ" ಸಂಕಲನದಿಂದ ಆಯ್ದ "ರಕ್ತಪಾತ" ಎಂಬ ಲೇಖನವನ್ನು ಈ ಕೆಳಗೆ ನೀಡಿರುವೆ.

ರಕ್ತಪಾತ

ಮದುವೆ ದಿಬ್ಬಣ ಹೊತ್ತು ಹೊರಟಿದ್ದ ಬಸ್ಸು ಗಕ್ಕನೆ ನಿಂತಿತು.

"ಯಾಕೆ? ಏನಾಯ್ತು ?" ಎಲ್ಲರ ಉದ್ಗಾರ.

"ಟೆರರಿಸ್ಟ್ ಬಂದ್ರಾ ಅಜ್ಜಿ" ಐದು ವರ್ಷದ ಮೊಮ್ಮಗ ತೊಡೆಯಿಂದ ಜಿಗಿದು ಕೇಳಿದ.

"ಥೂ! ಯಾವಾಗ್ಲೂ ಇಂಥಾ ಮಾತೇ ಈ ಶನಿ" ಅವರಮ್ಮ ಬೈದಳು. ಲಾಕರ್ ನಲ್ಲಿ ಇದ್ದಬದ್ದ ಒಡವೇನೆಲ್ಲಾ ಪರ್ಸ್‌ನಲ್ಲಿ ತುಂಬಿಕೊಂಡು ಬಂದಿದ್ಳು. ಭಯ ಇರುಲ್ವೇ ?

"ಮಗೂನ್ನ ಯಾಕೆ ಗದ್ರಿಸ್ತಿ.? ಕೃಷ್ಣನ ಹಾಗಿರೋ ಈ ಕಂದಮ್ಮನ್ನ ಬೈಯ್ಯೋಕೆ ಮನ್ಸಾದ್ರೂ ಹೇಗೆ ಬಂತೇ ?" ಕೆಂಚಮ್ಮ ಹಿಂದಿನ ಸೀಟಿನಿಂದ ನುಡಿದರು.

ಬಸ್ಸಿನಿಂದ ಅನಂತು, ರಂಗಣ್ಣ, ಕಂಠಿ ಎಲ್ಲ ಇಳಿದರು. ಬೀಗರ ಕಡೆಯಿಂದ ಬಂದಿದ್ದ ನಂಜುಂಡಯ್ಯನವರೂ ಸಹ ಗಾಭರಿಯಿಂದ ಕೆಳಗಿಳಿದರು.

"ಪೋಲೀಸ್ ಜೀಪು, ಕಾರು ಹಿಂದೇನೇ ಬಂದು ಡ್ರೈವರ್‌ಗೆ ನಿಲ್ಸಕ್ಕೆ ಹೇಳಿದ್ರಂತೆ. ಅದಕ್ಕೇ ಆತ ನಿಲ್ಸಿದ." ಯಾರೋ ಹೇಳಿದ್ರು. ಹಿಂದೆಯೇ "ವಯ್ ವಯ್" ಸೈರನ್ ಕೇಳಿಸ್ತು. "ಏನು ಗ್ರಹಚಾರವಪ್ಪಾ" ನಂಜುಂಡ–ಯ್ಯನವರು ಚಡಪಡಿಸಿದರು.

ಕಾರಿನಿಂದ ಇಳಿದ ಪೋಲೀಸ್ ಅಧಿಕಾರಿ ಅಲ್ಲೇ ನಿಂತಿದ್ದ ಅನಂತುವಿನ ಭುಜದ ಮೇಲೆ ಕೈಹಾಕಿದ. "ಅಲ್ವೋ, ಚೆನ್ನರಾ–ಯಪಟ್ಟಣದಿಂದ ಫಾಲೋ ಮಾಡಿಕೊಂಡು ಬಂದೆ. ಮಗನ ಮದ್ವೆಗೆ ಬರೋಕ್ಕಾಗಲ್ಲ. ಸ್ಪೆಷಲ್ ಡ್ಯೂಟಿ, ಮಹಾ ಮಸ್ತಕಾ–ಭಿಷೇಕ.ರಜಾ ಸಿಗಲ್ಲ ಕಣೋ, ಇಲ್ಲೇ ಎಲ್ಲನ್ನೂ ಮೀಟ್ ಮಾಡೋಣ ಅಂತ ಹಿಂದೇನೇ ಬಂದೆ." ಬಂದವನು ಪುರುಷೋತ್ತಮ, ಅನಂತುವಿನ ಬಾಲ್ಯ ಸ್ನೇಹಿತ. "ಸದ್ಯ, ಇನ್ನೇನೂ ಗಲಾಟೆ ಇಲ್ಲವಲ್ಲ. ದೇವರ ದಯೆ !" ಕೆಂಚಮ್ಮ ಕೂತ ಕಡೆಯಿಂದಲೇ ಕಾಣದ ದೇವರಿಗೆ ಕೈ ಜೋಡಿಸಿದ್ರು. ಮೊಮ್ಮಗನ ಮದ್ವೆ ನೋಡುವ ಆಸೆ ಅವರಿಗೆ. ಪೋಲೀಸ್ ಜೀಪು, ಕಾರು, ನಾಲ್ಕೈದು ಪೋಲೀಸ್ ಪ್ಯಾದೆಗಳನ್ನು ನೋಡಿದ ಮೊಮ್ಮಗನಿಗೆ ಗಾಬರಿ ಆಯ್ತು ಅಂತ ಕಾಣುತ್ತೆ. ತೊಡೆಯೇರಿ, ಕುಳಿತ. ಪಿಳಿ ಪಿಳಿ ಕಣ್ಣುಬಿಟ್ಟು ಕಿಟಕಿ ಆಚೆ ನೋಡ್ತಾ ಇದ್ದ.

"ಅಲ್ವೋ, ಹಾಗೆ ಷೂಟ್ ಮಾಡ್ತೀನಿ, ಹೀಗೆ ಕತ್ತರಿಸಿ ಬಿಡ್ತೀನಿ ಅಂತ ಅಮ್ಮನ ಮುಂದೆ ಕೊಚ್ಕೋತಾ ಇದ್ದೆ. ಈಗ್ಯಾಕೆ ಅಜ್ಜಿ ತೊಡೆಮೇಲೆ ಕೂತೆ ?" ಮಗಳು ಛೇಡಿಸಿದ್ಲು.

"ಸುಮ್ನಿರೇ ಸಾಕು! ಅರೀದ ಕಂದಮ್ಮನ ಮೇಲೆ ನಿನ್ನ ರೋಪು ! ಎಲ್ಲರ್ಗೂ ಗಾಭ್ರಿಯಾಯ್ತು. ಪಾಪ ! ಅಂದ ಹಾಗೆ ಯಾವ ಟೆರರಿಸ್ಟೋ , ಇನ್ನೇನು ರಕ್ತಪಾತವೋ ಅಂತ..." ಕೆಂಚಮ್ಮ ಮುಗಿಸುವಷ್ಟರಲ್ಲಿ ಮೊಮ್ಮಗ ಕೇಳಿದ.

"ರಕ್ತಪಾತ ಅಂದ್ರೇನು ಅಜ್ಜಿ?"

"ರಕ್ತ ನೀರಿನ ಹಾಗೆ ಚಿಮ್ಮಿ ಹರಿದರೆ ರಕ್ತಪಾತ ಅಂತಾರೆ. ಜೋಗ್ ನಲ್ಲಿ ಬೀಳುವ ನೀರಿಗೆ "ಜಲಪಾತ" ಅನ್ನುಲ್ವೇ ಹಾಗೆ."

"ರಕ್ತಪಾತ ಯಾವಾಗ ಆಗುತ್ತೆ ಅಜ್ಜಿ ?"

"ಯುದ್ಧ, ಕಾಳಗ ಆದಾಗ್ಲೆಲ್ಲಾ ಆಗುತ್ತಪ್ಪ. ಒಬ್ಬರನ್ನೊಬ್ರು ಹೊಡೆದುಕೊಂಡಾಗ ಆಗುತ್ತೆ. ಕಲಿಯುಗ ಪುಟ್ಟಾ ! ಈಗಂತೂ ಬೀದಿ ಬೀದೀಲಿ ಕಾರಣ ಇಲ್ದೆ ಆಗೋದಕ್ಕೆ ಶುರು ಆಗಿದೆ. ಬೊಂಬಾಯಿ ಬಾಂಬ್ ಗದ್ದಲ ನೋಡಿದ್ಯಾ ?" ಕೆಂಚಮ್ಮಜ್ಜಿ ಶುರು ಮಾಡಿದ್ರು.

"ಕಲಿಯುಗ ಅಂದ್ರೇನು?"

"ನಾವಿರೋದೆ ಈ ಕಲಿಯುಗ. ಹಿಂದೆ ಇದ್ದದ್ದು ಕೃತಯುಗ. ತ್ರೇತಾಯುಗ ಮತ್ತು ದ್ವಾಪರ ಯುಗ. " ಕೆಂಚಮ್ಮಜ್ಜಿ ವಿವರಿಸತೊಡಗಿದರು. ಎಲ್ಲರಿಗೂ ಎಳೆನೀರು ಕೊಡಿಸಿದ ಪುರುಷೋತ್ತಮ ಶುಭ ಕೋರಿ ನಮ್ಮನ್ನು ಗೊರೂರಿಗೆ ಬೀಳ್ಕೊಟ್ಟರು.

ಮೊಮ್ಮಗ ಕೆಂಚಮ್ಮಜ್ಜಿ ತೊಡೆ ಏರಿದ.

"ಕೃತಯುಗ ಅಂದ್ರಲ್ಲಾ ಆವಾಗೇನಾಯ್ತು ಅಜ್ಜಿ ?"

"ಆಗ್ಲೇ ಆಗಿದ್ದು ಪ್ರಹ್ಲಾದನ ಕಥೆ. ನೀನು ಹಿರಣ್ಯಾಕ್ಷ – ಹಿರಣ್ಯಕಶಿಪು ಕಥೆ ಕೇಳಿಲ್ವೇ ?"

"ಹೂಂ ಗೊತ್ತಜ್ಜಿ. ಅದೇ ನರಸಿಂಹಾವತಾರದ ಕಥೆ. "

"ಆಮೇಲೆ ತ್ರೇತಾಯುಗ, ರಾಮರಾಜ್ಯ, ಜನಕ ಮಹಾರಾಜನಂತಹ ಜ್ಞಾನಿ, ಪಿತೃಭಕ್ತಿ ಪರಿಪಾಲಕ ರಾಮ, ಪತಿವ್ರತೆ ಸೀತೆ – ಗೊತ್ತಿಲ್ವೇ ಕಂದಾ ರಾಮಾಯಣ"

"ಗೊತ್ತು, ಗೊತ್ತು. ಟಿವಿಲೂ ನೋಡಿದ್ವಿ."

"ಆಮೇಲೆ ದ್ವಾಪರ. ಮಹಾಭಾರತದ ಕಥೆ. ಅರ್ಜುನ, ಭೀಮ, ಕೃಷ್ಣ, ಕುರುವಂಶದ ದುರ್ಯೋಧನ ..."

"ಅದೂ ಟಿ..ವಿ.ಲಿ ಬಂದಿತ್ತು ನೋಡ್ದೆ."

"ಬಲು ಜಾಣ ಮರಿ. ಎಲ್ಲಾ ಗೊತ್ತಲ್ಲಾಮ್ಮಾ ನಿಂಗೆ" ದೃಷ್ಟಿ ತೆಗೆದು ನೆಟಿಗೆ ಮುರಿದರು. ಅಜ್ಜಿ.

"ಹಾಗಾದ್ರೆ ಯಾವಾಗ್ಲೂ ನಡೆದದ್ದೇ ಈ ರಕ್ತಪಾತ. ಆಗ ರಾಕ್ಷಸರು, ದೇವತೆಗಳು ಕಪಿಗಳು ಅಂತೆಲ್ಲಾ ಅಂದ್ರು. ಕುರುಕ್ಷೇತ್ರದಲ್ಲಿ ಈಗ್ಲೂ ಮಣ್ಣು ಕೆಂಪಗಿದೆ ಅಂತಾರೆ. ರಕ್ತದ ಕೋಡಿ ಹರಿದು. ಯಾವಾಗ್ಲೂ ಇದ್ದದ್ದೇ ಇದು. ಇನ್ನು ಕಲಿಯುಗ ಏನು ಪಾಪ ಮಾಡಿತ್ತು ರಕ್ತದ ಕೋಡಿ ಹರೀದೇ ಇರೋದಕ್ಕೆ ?" ಮುನ್ನ ತಿರುಗಿ ಬಿದ್ದ. ಎಲ್ಲಾ ಕೇಳಿಸಿಕೊಂಡು, ಡಿ.ವಿ.ಜಿ.ಯವರ ನೆನಪು ಬಂತು.

"ಹಳೆಯ ಭಕ್ತಿ ಶ್ರದ್ಧೆಯಳಿಸಿ ಹೋಗಿದೆ ಮಾಸಿ
ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ
ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ
ತಳಮಳಿಸುತಿದೆ ಲೋಕ – ಮಂಕುತಿಮ್ಮ ॥

ಓದುಗರಿಗೆ ರಾಜ್ಯೋತ್ಸವದ ಉಡುಗೊರೆ

ಖ್ಯಾತ ವ್ಯಂಗ್ಯಚಿತ್ರಕಾರರೂ, ಹಿರಿಯರೂ ಆದ ಮಾನ್ಯ ಶ್ರೀ ಚಂದ್ರನಾಥ ಆಚಾರ್ಯ ಅವರು ಈ ಸಂಚಿಕೆಗೆ ವ್ಯಂಗ್ಯಚಿತ್ರಗಳನ್ನು ನೀಡಿ, ಪತ್ರಿಕೆಯನ್ನು ಶ್ರೀಮಂತಗೊಳಿಸಿದ್ದಾರೆ. ಎಂಭತ್ತರ ದಶಕದ ಅಪರಂಜಿಯ ಪ್ರಾರಂಭದ ದಿನಗಳಲ್ಲಿ, ಅಪರಂಜಿಯ ವರ್ಣಚಿತ್ರದ (ಲೋಗೋ)ಕರ್ತೃ ಚಂದ್ರನಾಥರೇ ಎಂಬ ಅಂಶವನ್ನು ಅಪರಂಜಿ ಕೃತಜ್ಞತೆಯಿಂದ ನೆನೆಯುತ್ತಾಳೆ. ಇನ್ನು ಮುಂದೆಯೂ ಮಾನ್ಯರ ಚಿತ್ರಗಳು ಅಪರಂಜಿಯನ್ನು ಅಲಂಕರಿಸುವಂತಾಗಲಿ ಎಂಬುದೇ ನಮ್ಮ ಹಾರೈಕೆ.

ಪುಟ್ಟ ರಾಜಕುಮಾರ–4

ಭಾವಾನುವಾದ: ಬಿ.ಸ್.ಶೈಲಜಾ

ಆರು

ಓ ಪುಟ್ಟ ರಾಜಕುಮಾರ! ನಿನ್ನ ಜೀವನದ ರಹಸ್ಯ ಮತ್ತು ದು:ಖದ ಅಂದಾಜು ನನಗೆ ದಿನದಿನವೂ ಚುಟುಕಾಗಿ ಸಿಗುತ್ತಿತ್ತು. ನಿನ್ನ ಜೀವನದ ಏಕೈಕ ಮನರಂಜನೆ ಎಂದರೆ ಸೂರ್ಯಾಸ್ತವನ್ನು ನೋಡುವುದು ಎಂದು ಹೇಳಿದ್ದೆ. ಇದರ ಬಗ್ಗೆ ಹೊಸ ವಿಷಯ ತಿಳಿದದ್ದು ನಾಲ್ಕನೆಯ ದಿನ. ನೀನಂದ ಮಾತುಗಳು ಹೀಗಿದ್ದವು.

"ನನಗೆ ಸೂರ್ಯಾಸ್ತಗಳನ್ನು ನೋಡುವುದೆಂದರೆ ತುಂಬಾ ಇಷ್ಟ. ನಡಿ ಹೋಗೋಣ. ಸೂರ್ಯಾಸ್ತ ನೋಡೋಣ"

"ಆದರೆ ನಾವಿನ್ನೂ ಕಾಯಬೇಕು"

"ಕಾಯಬೇಕಾ? ಯಾಕೆ?"

"ಸೂರ್ಯಾಸ್ತಕ್ಕೆ ಕಾಯಬೇಕು. ಅದರ ಸಮಯ ಬರಬೇಕಲ್ಲಾ"

ನಿನ್ನ ಮುಖದ ಮೇಲೆ ಆಶ್ಚರ್ಯ ಕಂಡಿತ್ತು. ಆಮೇಲೆ ಜೋರಾಗಿ ನಕ್ಕುಬಿಟ್ಟೆ.

"ನಾನು ನನ್ನ ಮನೆಯಲ್ಲಿದ್ದೇನೆ ಎಂದುಕೊಂಡು ಬಿಟ್ಟಿದ್ದೆ" ಎಂದೆ.

ಆಹಾ! ಅದು ಹೀಗೆ. ಅಮೆರಿಕದಲ್ಲಿ ಮಧ್ಯಾಹ್ನ ಆಗಿದ್ದಾಗ ಫ್ರಾನ್ಸ್‌ನಲ್ಲಿ ಸೂರ್ಯಾಸ್ತವಾಗುತ್ತಿರುತ್ತದೆ ಎಂದು ಎಲ್ಲರಿಗೂ ಗೊತ್ತು. ಅಮೆರಿಕದಿಂದ ಫ್ರಾನ್ಸ್‌ಗೆ ಒಂದೇ ನಿಮಿಷದಲ್ಲಿ ಹಾರಿ ಬರುವುದು ಸಾಧ್ಯವಾದರೆ, ಹಗಲಿನಿಂದ ಸೂರ್ಯಾಸ್ತಕ್ಕೆ ನೇರವಾಗಿ ಜಾರಬಹುದು. ಆದರೆ ಫ್ರಾನ್ಸ್ ಸಾಕಷ್ಟು ದೂರದಲ್ಲಿದೆ. ಆದರೆ, ನನ್ನ ಪುಟ್ಟ ರಾಜಕುಮಾರ, ನಿನ್ನ ಗ್ರಹದಲ್ಲಿ ನಿನ್ನ ಕುರ್ಚಿಯಲ್ಲಿ ನಾಲ್ಕಾರು ಹೆಜ್ಜೆಗಳಷ್ಟು ಎಳೆದರೆ ಸಾಕು. ಸಂಜೆಯಾಗುತ್ತದೆ. ಸೂರ್ಯಾಸ್ತ ನೋಡಲು ಸಿಗುತ್ತದೆ.

ನೀನೊಮ್ಮೆ ಹೇಳಿದ್ದೆ "ನಾನು ಒಂದೇ ದಿನ 44 ಸೂರ್ಯಾಸ್ತಗಳನ್ನು ನೋಡಿದ್ದೆ". ಆಮೇಲೆ ನಿಧಾನವಾಗಿ ಹೇಳಿದ್ದೆ.

"ಸೂರ್ಯಾಸ್ತ ಅಂದರೆ ತುಂಬಾ ಇಷ್ಟ–ಅದರಲ್ಲೂ ದು:ಖವಾಗಿ ಬೇಜಾರಾಗಿದ್ದಾಗ"

ಆಗ ನಾನು ಕೇಳಿದ್ದೆ "ಹಾಗಾದರೆ ನಿನಗೆ ಆಗ ತುಂಬಾ ದು:ಖವಾಗಿತ್ತೇ? 44 ಸೂರ್ಯಾಸ್ತಗಳನ್ನು ನೋಡಿದ ದಿನ?"

ಆದರೆ ಏನೂ ಉತ್ತರ ಬರಲಿಲ್ಲ.

ಏಳು

ಅದು ಐದನೆಯ ದಿನ. ಪುನ: ಕುರಿಯ ಕಾರಣದಿಂದಲೇ ಪುಟ್ಟ ರಾಜಕುಮಾರನ ಇನ್ನೊಂದು ರಹಸ್ಯ ನನಗೆ ತಿಳಿಯಿತು. ಇದ್ದಕ್ಕಿದ್ದ ಹಾಗೆ ಅವನು ಯಾವುದೋ ಯೋಚನೆಯೊಳಗಿನಿಂದ ಹೊರಬಂದಂತೆ ಕೇಳಿದ ಪ್ರಶ್ನೆಯೇ ಇದಕ್ಕೆ ಮೂಲ.

"ಈ ಕುರಿ....ಇದು ಚಿಕ್ಕ ಗಿಡಗಳನ್ನು ತಿನ್ನುವುದಾದರೆ, ಹೂವುಗಳನ್ನೂ ತಿನ್ನುತ್ತದೆಯಾ?"

"ಹೌದು. ತನಗೆ ಸಿಗುವ ಎಲ್ಲದನ್ನೂ ಅದು ತಿನ್ನುತ್ತದೆ"

"ಹೂಗಳಿಗೆ ಮುಳ್ಳುಗಳಿದ್ದರೆ?"

"ಹೌದು ಮುಳ್ಳಿರುವ ಹೂಗಳನ್ನು ಅದು ತಿನ್ನುತ್ತದೆ"

"ಹಾಗಾದರೆ ಆ ಮುಳ್ಳಿನಿಂದ ಏನು ಪ್ರಯೋಜನ?"

ಇದರ ಉತ್ತರ ನನಗೆ ಗೊತ್ತಿಲ್ಲ. ಆ ಕ್ಷಣದಲ್ಲಿ ನಾನು ಒಂದು ಬೋಲ್ಟ್ ಅನ್ನು ಬಿಚ್ಚುವುದರಲ್ಲಿ ತಲ್ಲೀನನಾಗಿದ್ದೆ. ಅದು ನನ್ನ ಎಂಜಿನ್ ಒಳಗೆ ಸಿಕ್ಕಿ ಹಾಕಿಕೊಂಡಿತ್ತು. ನನ್ನ ವಿಮಾನದ ಪರಿಸ್ಥಿತಿ ತುಂಬಾ ಗಂಭೀರವಾದದ್ದು ಎಂದಾಗಲೇ ನನಗೆ ಮನವರಿಕೆ ಆಗಿತ್ತು. ಸ್ವಲ್ಪವೇ ಕುಡಿಯುವ ನೀರು ಮಾತ್ರ ನನ್ನ ಬಳಿ ಇತ್ತು. ಆ ಬಗ್ಗೆಯೂ ನನಗೆ ಆತಂಕವಾಗಿತ್ತು.

"ಮುಳ್ಳುಗಳಿಂದ ಏನು ಪ್ರಯೋಜನ?" ರಾಜಕುಮಾರ ಪುನ: ಕೇಳಿದ. ಅವನು ಹಾಗೇ. ಉತ್ತರ ಸಿಗುವವರೆಗೂ ಬಿಡುವವನಲ್ಲ. ನನಗೆ ಈ ಬೋಲ್ಟಿನಿಂದಾಗಿ ತಲೆ ಕೆಟ್ಟಿತ್ತು. ಹಾಗಾಗಿ ಏನೋ ತೋಚಿದ ಉತ್ತರ ಹೇಳಿದೆ.

"ಮುಳ್ಳುಗಳಿಂದ ಏನೂ ಪ್ರಯೋಜನವಿಲ್ಲ. ಸುಮ್ಮನೆ ತೊಂದರೆ ಕೊಡುವುದಷ್ಟೇ ಅವುಗಳ ಕೆಲಸ"

"ಓ!" ಎಂದು ಉದ್ಗಾರ ತೆಗೆದ. ಪುನ: ಮೌನಕ್ಕೆ ಶರಣಾದ. ಆಮೇಲೆ ಪುನ: ವಾದಕ್ಕಿಳಿದ. ನನ್ನನ್ನು ಜರೆಯುವಂತೆ.

"ನೀನು ಹೇಳಿದ್ದನ್ನು ನಾನು ನಂಬೊಲ್ಲ. ಹೂವುಗಳು ಬಹಳ ಮುಗ್ಧ ಜೀವಿಗಳು. ನಾಜೂಕು ಪ್ರವೃತ್ತಿಯವು. ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಮುಳ್ಳುಗಳೇ ಅವುಗಳ ಆಯುಧ".

ನಾನು ಉತ್ತರಿಸಲಿಲ್ಲ. ಈ ಬೋಲ್ಟ್ ಇನ್ನೂ ಕೆಲಸ ಮಾಡದಿದ್ದರೆ ಅದನ್ನು ಸುತ್ತಿಗೆಯಿಂದಲೇ ಹೊಡೆಯಬೇಕಾಗುತ್ತದೆ ಎಂಬುದಷ್ಟೇ ನನ್ನ ಆ ಕ್ಷಣದ ಚಿಂತೆಯಾಗಿತ್ತು. ಅಷ್ಟರಲ್ಲಿ ಇನ್ನೊಂದು ಪ್ರಶ್ನೆ.

"ನಿಮ್ಮ ನಂಬಿಕೆಯ ಪ್ರಕಾರ ನಿಜವಾಗಿಯೂ ಈ ಹೂವುಗಳೆಂದರೆ....."

"ಸಾಕು-ಸಾಕು" ಎಂದು ನಾನು ಕೂಗಿದೆ "ನಾನು ಏನನ್ನೂ ನಂಬುವುದಿಲ್ಲ. ನನಗೆ ತೋಚಿದ ಉತ್ತರ ಹೇಳಿದೆ. ನಾನು ಈ ಮುಖ್ಯವಾದ ಕೆಲಸ ಮಾಡಿದ್ದೇನೆ ಅನ್ನೋದು ನಿನಗೆ ಕಾಣ್ತಿದೆಯಲ್ಲಾ...."

ಅವನು ದಿಗ್ಭ್ರಮೆಗೊಳನಾದವನಂತೆ ನನ್ನನ್ನೇ ದಿಟ್ಟಿಸಿ ನೋಡಿದ

"ಮುಖ್ಯವಾದ ಕೆಲಸ!"

ನನ್ನ ಕೈಲಿ ಸುತ್ತಿಗೆ, ಕೈ ಬೆರಳುಗಳಿಗೆಲ್ಲಾ ಗ್ರೀಸ್, ಮತ್ತೆ ನಾನು ಬಗ್ಗಿ ಬಗ್ಗಿ ನೋಡುತ್ತಿರುವ ಎಂಜಿನ್ನ ವಿಕಾರ ರೂಪ-ಇದನ್ನೆಲ್ಲಾ ಅವನು ನೋಡುತ್ತಲೇ ಇದ್ದ.

“ನೀನು ಈಗ ದೊಡ್ಡವರಂತೆಯೇ ಮಾತನಾಡುತ್ತಿದ್ದೀ” ಎಂದ

ಆ ಮಾತಿನಿಂದ ನನಗೆ ಸ್ವಲ್ಪ ನಾಚಿಕೆ ಎನ್ನಿಸಿತು. ಅವನ ಆಪಾದನೆ ಮುಂದುವರೆಯಿತು.

“ನೀನು ಎಲ್ಲ ವಿಷಯದಲ್ಲೂ ಗಡಿಬಿಡಿ ಮಾಡುತ್ತೀ. ಎಲ್ಲ ತಪ್ಪು ತಿಳಿವಳಿಕೆ....”

ಅವನಿಗೆ ತುಂಬಾ ಕೋಪ ಬಂದಿತ್ತು. ಅವನ ಚಿನ್ನದ ಬಣ್ಣದ ಮುಂಗುರಳನ್ನು ಬೀಸುವಂತೆ ತಲೆ ಹೊರಳಿಸಿದ.

“ಅಲ್ಲೊಂದು ಗ್ರಹದಲ್ಲಿ ಒಬ್ಬ ಕೆಂಪು ಮನುಷ್ಯ ಇದ್ದಾನೆ. ಅವನು ಯಾವ ಹೂವನ್ನೂ ಮೂಸಿ ನೋಡಿಲ್ಲ. ನಕ್ಷತ್ರವನ್ನೂ ನೋಡಿಲ್ಲ. ಯಾರನ್ನೂ ಪ್ರೀತಿಸಿಲ್ಲ. ಅವನು ಜೀವನದುದ್ದಕ್ಕೂ ಮಾಡಿರೋದು ಅಂದರೆ ಬರೀ ಕೂಡೋ ಲೆಕ್ಕ. ಇನ್ನೇನೂ ಇಲ್ಲ. ದಿನದುದ್ದಕ್ಕೂ ಅವನು ಹೇಳೋದು ಒಂದೇ ಮಾತ್ರ–ನೀನು ಈಗ ಹೇಳಿದೆಯಲ್ಲಾ ಅದೇ–ನಾನು ಮುಖ್ಯವಾದ ಕೆಲಸ ಮಾಡ್ತಾ ಇದ್ದೀನಿ–ಅಂತ ಅವನಿಗೆ ಬಹಳ ಜಂಬ, ಅವನು ಮನುಷ್ಯಾನೇ ಅಲ್ಲ ಒಂದು ನಾಯಿ ಕೊಡೆ ಅಷ್ಟೇ”

“ಏನು? ಏನು ಹೇಳಿದೆ?

“ನಾಯಿಕೊಡೆ ಅಂದೆ” ಅವನು ಕೋಪದಿಂದ ಬುಸುಗುಟ್ಟುತ್ತಿದ್ದ.



“ಹೂವುಗಳು ಲಕ್ಷಾಂತರ ವರ್ಷಗಳಿಂದ ಮುಳ್ಳುಗಳನ್ನು ಬೆಳೆಸಿಕೊಂಡು ಬಂದಿವೆ. ಲಕ್ಷಾಂತರ ವರ್ಷಗಳಿಂದ ಕುರಿಗಳು ಅವುಗಳನ್ನು ತಿನ್ನುತ್ತಾನೇ ಇವೆ. ಹೀಗೆ ತಮಗೆ ಏನೂ ಉಪಯೋಗವಿಲ್ಲದ ಮುಳ್ಳನ್ನು ಹೂವುಗಳು ಏಕೆ ಬೆಳೆಸುತ್ತವೆ ಅಂತ ತಿಳಿಕೋಬೇಕಾದ್ದು ಮುಖ್ಯ ವಿಷಯ ಅಲ್ಲವಾ? ಕುರಿಗಳು ಮತ್ತು ಹೂಗಳ ನಡುವಿನ ಈ ಯುದ್ಧ ಯಾಕೆ ಅಂತ ತಿಳಕೊಳ್ಳೋದು ಮುಖ್ಯ ವಿಷಯ ಅಲ್ಲವಾ? ಆ ಕೆಂಪು ಮನುಷ್ಯನ ಕೂಡೋ ಲೆಕ್ಕಕ್ಕಿಂತ ಇದು ಮುಖ್ಯ ಅಲ್ಲವಾ? ನನ್ನ ಗ್ರಹದಲ್ಲಿ ಇರೋ ಒಂದೇ ಒಂದು ಹೂವು–ಅದು ಇನ್ನೆಲ್ಲೂ ಇಲ್ಲ. ಅದನ್ನು ಈ ಸಣ್ಣ ಕುರಿ ಕಚಕ್ ಅಂತ ತಿಂದು ಮುಗಿಸಿಬಿಡೋದು, ಮುಖ್ಯವಾದ ವಿಷಯ ಅಲ್ಲವಾ? ಆ ಕುರಿಗೆ ತಾನೇನು ಮಾಡ್ತಿದೀನ್ ಅಂಬೋ ಪರಿವೇನೂ ಇಲ್ಲ. ಇವೆಲ್ಲಾ ಮುಖ್ಯವಾದ ವಿಷಯಗಳು ಅಲ್ಲ–ಹೌದಾ?”

ಅವನ ಮುಖ ಕೆಂಪಗಾಗಿತ್ತು; ಮಾತು ಮಾತಿಗೂ ಇನ್ನಷ್ಟು ಕೆಂಪಾಗುತ್ತಿತ್ತು.

“ಯಾರಿಗಾದರೂ ಒಂದು ಹೂವು ಇಷ್ಟ ಆಯಿತು ಅಂದರೆ ಅದರಲ್ಲೂ ಅದು ಲಕ್ಷಾಂತರ ನಕ್ಷತ್ರಗಳಲ್ಲಿ ಒಂದೇ ಒಂದು ನಕ್ಷತ್ರದ್ದು ಅಂದರೆ, ಅವನಿಗೆ ಅದಕ್ಕಿಂತ ಬೇರೆ ಸಂತೋಷ ಇಲ್ಲ. ಸಂತೋಷದಿಂದ ಅಲ್ಲೆಲ್ಲೋ ನನ್ನ ಹೂವು ಇದೆ ಅಂತ ಅವನು ನಕ್ಷತ್ರಗಳನ್ನು ನೋಡ್ತಾ ಇರಬಹುದು. ಆದರೆ ಈ ಕುರಿ ಹೂವನ್ನು ತಿಂದು ಹಾಕಿಬಿಟ್ಟರೆ, ಎಲ್ಲ ನಕ್ಷತ್ರಗಳೂ ಮಾಯವಾದ ಹಾಗೇ. ಕತ್ತಲಾಗುತ್ತೆ .. ಇದ್ಯಾವುದೂ ನಿಮಗೆ ಮುಖ್ಯ ಅಲ್ಲ.”

ಅವನಿಗೆ ಇನ್ನೂ ಮುಂದುವರೆಸೋಕ್ಕೆ ಆಗಲಿಲ್ಲ. ದು:ಖದಿಂದ ಕಣ್ಣೀರು ಉಕ್ಕಿ ಉಕ್ಕಿ ಬಂದು ಗಂಟಲು ಕಟ್ಟಿತು.

ಆಗಲೇ ಕತ್ತಲಾಗುತ್ತಿತ್ತು. ನನ್ನ ಸುತ್ತಿಗೆ ಇತ್ಯಾದಿಗಳನ್ನು ಕೆಳಗೆ ಹಾಕಿದೆ. ಈಗ ನನಗೆ ಸುತ್ತಿಗೆ, ಬೋಲ್ಟ್, ಬಾಯಾರಿಕೆ ಅಥವಾ ಸಾವು–ಇವ್ಯಾವುದಾದರೂ ಬೇಕೆ? ಒಂದೇ ಒಂದು ನಕ್ಷತ್ರದ ಒಂದೇ ಒಂದು ಭೂಮಿ ನನ್ನ ಗ್ರಹ. ಇದರ ಮೇಲೆ ಬೇರೇ ಗ್ರಹದ ಪುಟ್ಟ ರಾಜಕುಮಾರ ಅಳುತ್ತಿದ್ದಾನೆ. ಅವನನ್ನು ಸಂತೈಸಬೇಕು. ನಾನು ಅವನನ್ನೇ ತೋಳುಗಳಲ್ಲಿ ಎತ್ತಿಕೊಂಡೆ. ಕೂಡಿಸಿದೆ. "ನಿನ್ನ ಹೂವಿಗೆ ಯಾವ ಆತಂಕವೂ ಇಲ್ಲ. ಆ ಕುರಿಯ ಮುಖಕ್ಕೆ ಒಂದು ಬುಟ್ಟಿ ಕೊಡುತ್ತೇನೆ. ನಿನ್ನ ಗಿಡದ ಸುತ್ತ ಒಂದು ಬೇಲಿ ಹಾಕಿಕೊಡುತ್ತೇನೆ."

ಇನ್ನೂ ಏನೇನೋ ಹೇಳಬೇಕು ಎನ್ನಿಸಿತು. ನನಗೆ ವಿಚಿತ್ರವಾದ ಅನುಭವವಾಗುತ್ತಿತ್ತು. ಅವನನ್ನು ಹೇಗೆ ಸಾಂತ್ವನಗೊಳಿಸಬೇಕು? ಹೇಗೆ ಅವನ ಕೈ ಕೈ ಹಿಡಿದು ಓಡಾಡಬೇಕು? ಅವನನ್ನು ಪುನಃ ಸಂಭಾಷಣೆಗೆ ಹೇಗೆ ತೊಡಗಿಸಿಕೊಳ್ಳಬೇಕು?

ಕಣ್ಣೀರಿನ ಪ್ರಪಂಚ ಬಹಳ ನಿಗೂಢ.

ಎಂಟು

ಈ ಹೂವಿನ ಬಗ್ಗೆ ನನಗೆ ಚೆನ್ನಾಗಿ ಅರ್ಥವಾಗತೊಡಗಿತು. ಪುಟ್ಟ ರಾಜಕುಮಾರನ ಗ್ರಹದಲ್ಲಿ ಹೂಗಳು ಬಹಳ ಸರಳವಾಗಿದ್ದವು. ಒಂದೇ ಸುತ್ತಿನ ದಳಗಳು ಜಾಸ್ತಿ ಜಾಗವನ್ನು ಆಕ್ರಮಿಸುತ್ತಿರಲಿಲ್ಲ. ಅವುಗಳಿಂದ ಯಾರಿಗೂ ತೊಂದರೆ ಇರಲಿಲ್ಲ. ಹುಲ್ಲು ಹಾಸಿನ ನಡುವೆ ಬೆಳಿಗ್ಗೆ ಅರಳುವುವು. ಸಂಜೆಗೆ ಶಾಂತವಾಗಿ ಮುದುಡಿಕೊಳ್ಳುವುವು. ಬಹುಶ: ಎಲ್ಲಿಂದಲೋ ಹಾರಿ ಬಂದ ಬೀಜ ಇರಬೇಕು. ಯಾರಿಗೂ ಗೊತ್ತಿಲ್ಲ. ಆ ಬೀಜದ ಮೊಳಕೆ ಇತರ ಹೂ ಗಿಡಗಳಂತೆ ಇರಲಿಲ್ಲ. ಪುಟ್ಟ ರಾಜುಕುಮಾರ ಅದಕ್ಕೆ ವಿಶೇಷ ಗಮನ ಕೊಟ್ಟ. ಅದು ಹೊಸ ಬಗೆಯ ಬಾವೋಬಾಬ್ ಆಗಿರಬಹುದಲ್ಲ!

ಆದರೆ ಆ ಪುಟ್ಟ ಗಿಡ ಬೆಳೆಯುವುದು ನಿಲ್ಲಿಸಿತು. ಹೂವು ಬಿಡಲು ಆರಂಭಿಸಿತು. ಆ ದೊಡ್ಡ ಗಾತ್ರದ ಮೊಗ್ಗನ್ನು ನೋಡಿ ಪುಟ್ಟ ರಾಜಕುಮಾರ ಇದರಿಂದ ಏನೋ ಪವಾಡ ನಡೆಯಲಿದೆ ಎಂದೂಹಿಸಿದ. ಆ ಹೂವಿಗೆ ತನ್ನ ಸುತ್ತಲಿನ ಹಸುರು ಬಣ್ಣ ತೃಪ್ತಿ ತಂದಿರಲಿಲ್ಲ. ಅದು ತನ್ನದೇ ಬಣ್ಣಗಳನ್ನು ವಿಶೇಷವಾಗಿ ಆರಿಸಿಕೊಂಡಿತು. ಅದು ನಿಧಾನವಾಗಿ ಬಣ್ಣದಳೆಯಿತು. ಒಂದೊಂದೇ ಪಕಳೆಗಳನ್ನು ಬಿಡಿಸಿ ತೋರಿಸತೊಡಗಿತು. ಅದು ಈ ಉಳಿದ ಹೂವುಗಳಂತೆ (ಉದಾ: ಗಸಗಸೆ) ಮುದುಡಿಹೋಗಲು ಸಿದ್ಧವಾಗಿರಲಿಲ್ಲ. ಪೂರ್ಣವಾಗಿ ಅರಳಿದ ಅದು ಸೌಂದರ್ಯದ ಖನಿಯೇ ಆಯಿತು. ಅದು ದಿನಗಟ್ಟಲೆ ತನ್ನ ಸೌಂದರ್ಯವನ್ನು ಪ್ರದರ್ಶಿಸಿತು. ಒಂದು ಸುಂದರ ಮುಂಜಾನೆ ಅದು ತನ್ನೆಲ್ಲಾ ಒನಪು ವೈಯಾರಗಳನ್ನು ಪ್ರದರ್ಶಿಸಿ ಉದ್ಭವಗೊಂಡಿತು. ತನ್ನೆಲ್ಲಾ ಸಿದ್ಧತೆಗಳನ್ನೂ ಜಾಗರೂಕತೆಯಿಂದ ಮುಗಿಸಿಕೊಂಡಿದ್ದ ಅದು (ಅವಳು) ಮೈ ಮುರಿದು ಆಕಳಿಸಿದಳು. "ಆಹಾ! ನಾನೀಗ ಎಚ್ಚರಗೊಂಡಿದ್ದೇನೆ. ನನ್ನ ದಳಗಳು ಇನ್ನೂ ಹೊಂದಿಕೊಂಡಿಲ್ಲ, ದಯವಿಟ್ಟು ಕ್ಷಮಿಸು" ಎಂದುಲಿದಳು.

ಆದರೆ ಆ ಪುಟ್ಟ ರಾಜಕುಮಾರನಿಗೆ ತನ್ನ ಮೆಚ್ಚುಗೆಯನ್ನು ವ್ಯಕ್ತ ಪಡಿಸಲು ವ್ಯವಧಾನವಿರಲಿಲ್ಲ.

“ನೀನೆಷ್ಟು ಸುಂದರವಾಗಿದ್ದೀ” ಎಂದ.

“ಅಲ್ಲವೇ ಮತ್ತೆ?” ಎಂದಳು ಆ ಹೂವು, “ಆ ಸೂರ್ಯನ ಜೊತೆಯಲ್ಲೇ ಹುಟ್ಟಿದವಳು ನಾನು”. ಅವಳು ಬಹಳ ಸಂಕೋಚ ಸ್ವಭಾವದವಳೇನೂ ಅಲ್ಲ ಎಂದು ರಾಜಕುಮಾರನಿಗೆ ತಿಳಿಯಿತು. ಹೊಯ್ದಾಡುತ್ತಾ ಅದ್ಭುತವಾಗಿ ಕಂಡಳು.

“ಇದೀಗ ಉಪಾಹಾರದ ಸಮಯ.” ಎಂದಳವಳು “ನನ್ನ ಕೋರಿಕೆಗಳು ಏನು ಎಂದು ನಿನಗೆ ತಿಳಿಯುತ್ತವೆ ಎಂದುಕೊಂಡಿದ್ದೇನೆ” ಎಂದಳು.

ಮಂತ್ರಮುಗ್ಧನಾಗಿ ನಿಂತಿದ್ದ ರಾಜಕುಮಾರ ಒಳಗೋಡಿದ. ನೀರಿನ ಪಾತ್ರೆಯನ್ನೇ ತಂದು ನೀರುಣಿಸಿದ. ಅವಳು ಅವನನ್ನೇ ಸತಾಯಿಸಲು ಆರಂಭಿಸಿದಳು. ಅವಳ ಗರ್ವಕ್ಕೆ ಕಾರಣ ಏನು ಎಂದು ತಿಳಿದಿದ್ದರೆ ಕಷ್ಟವಾಗುತ್ತಿತ್ತು.

ಕೃತಕ ಬುದ್ಧಿಮತ್ತೆ ವಿಶೇಷಾಂಕ – ಜನವರಿ 2027

ಈಗಂತೂ ಎಲ್ಲಿ ನೋಡಿದರೂ ಎ.ಐ. (ಆರ್ಟಿಫಿಸಿಯಲ್ ಇಂಟೆಲಿಜೆನ್ಸ್) ನ ಮಾತೇ ಕೇಳಿಬರುತ್ತಿದೆ. ಕೆಲಸ ಕಳೆದುಕೊಳ್ಳುವ ಆತಂಕವನ್ನು ಸೃಷ್ಟಿಸುವ, ಮಾನವನ ಬಹುಕಾಲದ ಸಮಸ್ಯೆಗಳನ್ನು ಕ್ಷಣಾರ್ಧದಲ್ಲಿ ಪರಿಹರಿಸುವ ಚಾತುರ್ಯವನ್ನು ಹೊಂದಿರುವ, ಒಟ್ಟಿನಲ್ಲಿ ನಮ್ಮ ಜೀವನಶೈಲಿಯನ್ನೇ ಬುಡಮೇಲು ಮಾಡಬಲ್ಲ ಈ ಹೊಸ ಆವಿಷ್ಕಾರವು ನಮ್ಮ ಅಪರಂಜಿ ಬರಹಗಾರರ ಕೊಂಕು ನೋಟಕ್ಕೆ ಸುಗ್ರಾಸವಾಗಬಲ್ಲುದು. ಈ ಕುರಿತು ನಿಮ್ಮ ಲೇಖನವೊಂದನ್ನು ಬರೆದು ಕಳಿಸಿ. ಬರಹಗಳು ಡಿಸೆಂಬರ್ ಹತ್ತರ ಒಳಗೆ ನಮ್ಮ ಕೈ ಸೇರುವಂತಾಗಲಿ.

ಸಂಪಾದಕ–ಅಪರಂಜಿ ಮಾಸಪತ್ರಿಕೆ.

ಮುಂದೂಡು. ಕಾಮ್ (Postpone.Com)

ಸಹೃದಯ ಓದುಗರು ಈಗಲೇ ಓದಿ...ಮುಂದೂಡಬೇಡಿ!!!

✍ ಶ್ರೀಧರ ಬಾಣಾವರ

ಮಾಡಬೇಕಾದ ಕೆಲಸಗಳನ್ನು ಮುಂದೂಡಲು, ಅಷ್ಟೇ ಏಕೆ ಮುಂದೂಡುತ್ತಲೇ ಇರಲು ಸಬೂಬುಗಳು ಬೇಕಾಗುತ್ತವೆ. ಕನ್ನಡದಲ್ಲಿ ಸಬೂಬು ಎಂದರೆ ನೆಪ, ಕುಂಟುನೆಪ ಅಥವಾ ಸುಳ್ಳು ಕಾರಣ ಎಂದು ಅರ್ಥ. ತಪ್ಪುಗಳನ್ನು ಮುಚ್ಚಿಕೊಳ್ಳಲು ಅಥವಾ ಕೆಲಸದಿಂದ ನುಣುಚಿಕೊಳ್ಳಲು ಹೇಳುವ ಸುಳ್ಳು ಸಮರ್ಥನೆಯನ್ನು ಸಬೂಬು ಎನ್ನುತ್ತಾರೆ. ನನ್ನ ಸಾಕಷ್ಟು ಓದು, ಜೀವನಾನುಭವ, ಇಂದಿನ ವಿದ್ಯಮಾನಗಳ ಅಧ್ಯಯನ ಇವುಗಳ ಆಧಾರದ ಮೇಲೆ ಸಾಕಷ್ಟು ಸಂದರ್ಭಗಳಲ್ಲಿ, ಇಂತಹ ಅನೇಕ ಸಬೂಬುಗಳನ್ನು ಸೃಷ್ಟಿಸಿ, ಹಲವಾರು ಯಾಕೆ, ಹೆಚ್ಚಿನ ಮುಖ್ಯ ಕೆಲಸಗಳನ್ನು ಮುಂದೂಡಿದ್ದೇನೆ, ಮುಂದೂಡುತ್ತಲೇ ಇದ್ದೇನೆ. ನನ್ನ ವೃತ್ತಿಜೀವನದ ಸೋಲು ಗೆಲುವುಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವ ಕೆಲಸ ಮಾಡುತ್ತಿದ್ದೇನೆ. ಇದನ್ನು ಕನ್ಸಲ್ಟನ್ಸಿ ಎಂದು ಕರೆಯಬಹುದಾದರೆ, ಅದೇ ಯೋಚನೆಯಲ್ಲಿ ನಾನು ಸೃಷ್ಟಿಸಿ ಕೊಂಡಿರುವ ಸಬೂಬುಗಳ ಭಂಡಾರವನ್ನು ಹಂಚಿಕೊಳ್ಳಲು *ಮುಂದೂಡು.ಕಾಮ್* ಎಂಬ ಕನ್ಸಲ್ಟನ್ಸಿ ಜಾಲತಾಣವನ್ನು ಸೃಷ್ಟಿಸಿಕೊಂಡಿದ್ದೇನೆ. ಇದು ಸರ್ವಜನಿಕರಿಗೆ ಮುಕ್ತವಾಗಿ ಮುಂದೆ ದೊರಕಲಿದೆ. ತಾವು ಮುಂದೂಡಬೇಕಾದ ಕೆಲಸಗಳ ವಿವರ, ಅವಧಿ, ಕಾರಣ ಮುಂತಾದವುಗಳ ವಿವರ ಕೊಟ್ಟರೆ ಈ ಜಾಲತಾಣದ ಮೂಲಕ ಸಬೂಬುಗಳ ಪಟ್ಟಿಯೊಂದನ್ನು ಒದಗಿಸಲು ಸಿದ್ಧ. ಮುಂದೆ ಕಂಚು, ರಜತ, ('ಸಾಧಾರಣ' 18–22 ಕ್ಯಾರಟ್, 'ಅಪರಂಜಿ'–24 ಕ್ಯಾರಟ್, ಎರಡು ಆಯ್ಕೆಗಳಿವೆ) ಪ್ಲಾಟಿನಂ ಮುಂತಾದ ವರ್ಗೀಕೃತ ಸೇವೆಗಳು ದೊರಕಲಿವೆ. ಸಧ್ಯಕ್ಕೆ 'ತಗಡು'(ಫ್ರೀ ಆದ್ದರಿಂದ) ಆಯ್ಕೆ ಮಾತ್ರಾ ಲಭ್ಯವಿದೆ.

ಈ ಸೇವೆ ಪ್ರಾರಂಭಿಸಲು ನನಗೆ ಸ್ಫೂರ್ತಿ ನೀಡಿದ್ದು ಒಂದು ಜನಪ್ರಿಯ ಕವಿತೆ. ಈ ಕವಿತೆ ನಿಮಗೆಲ್ಲರಿಗೂ ಚಿರಪರಿಚಿತ. ಕವಿತೆ ಹೀಗೆ ಬಳಸಿಕೊಳ್ಳಲು ಮೊದಲಿಗೆ ಗೌರವಾನ್ವಿತ ಕವಿಯ ಕ್ಷಮೆ ಕೋರುತ್ತೇನೆ. ಈ ಕವಿತೆಯಲ್ಲಿ ಕಾಣಿಸಿಕೊಳ್ಳುವ ಹೆಣ್ಣುಮಗಳು ತನ್ನ ತವರು ಮನೆಯಲ್ಲಿ ತನ್ನ ಪುಟ್ಟ ಕೂಸಿನೊಂದಿಗಿದ್ದಾಳೆ. ಸಧ್ಯದಲ್ಲೇ ಮೈಸೂರಿನಲ್ಲಿರುವ ಗಂಡನ ಮನೆಗೆ ಹೊರಡಬೇಕಾಗಿದೆ. ಅದನ್ನು ಸ್ವಾಭಾವಿಕ ಕಾರಣಗಳಿಂದ ಮುಂದೂಡುವ ಪ್ರಯತ್ನ ನಡೆದಿದೆ. ಅಲ್ಪಾವಧಿ, ಮಧ್ಯಮಾವಧಿ ಸಬೂಬುಗಳು ಇವಳ ಬತ್ತಳಿಕೆಯಲ್ಲಿವೆ. ದಿನವೂ ಗಂಡನೂರಿಗೆ ಹೋಗುವ ರೈಲಿನ ಅರಿವಿದೆ. ನಾಳೆ ಮಂಗಳವಾರ, ಮರುದಿನದ ನವಮಿಯ ಸಾಂಪ್ರದಾಯಿಕ ಅಲ್ಪಾವಧಿ ಸಬೂಬುಗಳನ್ನು ಅರಿಕೆ ಮಾಡಿಕೊಳ್ಳುತ್ತಿದ್ದಾಳೆ. ಈ ನೆಪಗಳು ಅನುಕೂಲವಾದರೆ, ಹಲವು ಮಧ್ಯಮಾವಧಿ ಕಾರಣಗಳನ್ನೂ ಯೋಚಿಸಿಕೊಂಡಿದ್ದಾಳೆ. ತಿಂಗಳ ನಂತರ ಇರುವ ತಂಗಿಯ ಮದುವೆ, ಪುಟ್ಟ ಕಂದನ ಆರೈಕೆಗೆ ಇನ್ನೂ ಬೇಕಾಗಬಹುದಾದ ತವರಿನ ಕೈ ಹಿಡಿತ (ಹ್ಯಾಂಡ್ ಹೋಲ್ಡಿಂಗ್), ಎಂದೂ ಮುಗಿಯದ ತಾಯ ಕೈಅಡುಗೆಯ ರುಚಿಯ ಆಕರ್ಷಣೆ ಇವೆಲ್ಲವನ್ನೂ ಪ್ರಯೋಗಿಸಬಹುದಾದರೂ ಗಂಡನ ಮನೆಯ ಆಕರ್ಷಣೆ, ಅನಿವಾರ್ಯತೆಯ ಮುಂದೆ ಸ್ವಲ್ಪ ಹಿಂಜರಿಕೆ ಇದೆ. ಮುಂದೇನಾಯಿತೆಂದು ಕವಿ ಹೇಳಿದಂತೆ ಕಾಣಲ್ಲ.

ಈ ಕವನದ ಉದಾಹರಣೆ ನನ್ನ ಜಾಲತಾಣದ ಪ್ರಚಾರಕ್ಕೆ ಮೊದಲು ಏಕೆ ಉಪಯೋಗಿಸಿಕೊಳ್ಳುತ್ತಿದ್ದೇನೆಂದರೆ, ಇಂತಹ ಸಣ್ಣ ಪುಟ್ಟ ಗೃಹಕೃತ್ಯದ, ಸಾಂಸಾರಿಕ ಅವಶ್ಯಕತೆಗಳಿಗೂ ಇಲ್ಲಿ ಸಬೂಬುಗಳು ತಯಾರಿವೆ.

ಬಹು ಮುಖ್ಯವಾಗಿ ಇಂದಿನ ವಿದ್ಯಮಾನಗಳ ಕಡೆಯೂ ಗಮನ ಹರಿಸಲಾಗಿದೆ. ರಾಜಕೀಯವಾಗಿ,ಮಂತ್ರಿ ಮಂಡಲಗಳ ರಚನೆ, ಪ್ರಾತಿನಿಧ್ಯ, ಖಾತೆಗಳ ಹಂಚಿಕೆ, ಹುದ್ದರಿಗಳ ಬದಲಾವಣೆ ಮುಂತಾದ ಗುರುತರ ಕರ್ಯಗಳನ್ನು ಅನಿವಾರ್ಯವಾಗಿ ದಿನ, ವಾರ, ತಿಂಗಳು, ರ್ಷಗಳು ಮುಂದೂಡಬೇಕಾದ ಪರಿಸ್ಥಿತಿ ನಮ್ಮ ರಾಜಕೀಯ ಪಕ್ಷಗಳಿಗೆ ಅನಿವರ್ಯವಾಗಿದೆ. ಈ ಕರ್ಯಗಳನ್ನು ಮುಂದೂಡುತ್ತಲೇ ಇರದೆ ಇದ್ದರೆ ಉಂಟಾಗಬಹುದಾದ ರಾಜೀನಾಮೆ, ಪಕ್ಷಾಂತರ ಮುಂತಾದ ಕ್ಷೋಭೆಗಳನ್ನು ಈಗಲೇ ಎದುರಿಸುವುದು ಹೇಗೆ? ವಾರ, ಪಕ್ಷ, ತಿಂಗಳುಗಳ ನಂತರ ಬರಲಿರುವ ಹಬ್ಬಗಳು, ಎಲ್ಲೋ ನಡೆಯಲಿರುವ ಚುನಾವಣೆಗಳು ಇವೆಲ್ಲವೂ ಈಗಾಗಲೇ ಜಗಿದು ಚಪ್ಪರಿಸಲಾದ ಸಬೂಬುಗಳಾಗಿರುವುದರಿಂದ ಇವುಗಳನ್ನು ಮೀರಿದವುಗಳನ್ನು ಕಂಡುಹಿಡಿಯಲು ನಮ್ಮ ಏಕಸದಸ್ಯ ತಂಡ ನಿರಂತರ ಸಂಶೋಧನೆಯಲ್ಲಿ ತೊಡಗಿದೆ.

ಆಡಳಿತ ವಹಿಸಿಕೊಂಡ ತಕ್ಷಣ ಒಳ್ಳೇ ದಿನಗಳನ್ನು ತರುತ್ತೇವೆಂದು ಹೇಳಿ ಸಾಧ್ಯವಾಗದಿದ್ದಾಗ ಸ್ವಾತಂತ್ರದ ಅಮೃತ ಕಾಲ, ನೂರನೇ ರ್ಷ ಇವುಗಳನ್ನು ಗುರಿಗಳಾಗಿ ಬದಲಾಯಿಸಿಕೊಂಡು ಅದನ್ನೇ ಜನ ಹತ್ತು ಹನ್ನೆರಡು ವರ್ಷ ನಂಬುವಂತಹ ಸಬೂಬುಗಳನ್ನು ಸೃಷ್ಟಿಸಿ, ಸಂಬಂಧಪಟ್ಟವರಿಗೆ ಕೊಟ್ಟ ಕಾರಣರ್ತರು ನಾವೇ ಎಂದು ಹೇಳಿಕೊಳ್ಳಲು ನಮ್ಮ , ಅವರ ನಡುವಿನ ಒಡಂಬಡಿಕೆಯ ಪ್ರಕಾರ ನಮಗೆ ಅಧಿಕಾರ ವಿಲ್ಲ. ರಾಜ್ಯಗಳಂತಹ ಸಣ್ಣ ಗ್ರಾಹಕರಿಗೆ ಇನ್ನು ಎರಡು ರ್ಷಗಳ ಚುನಾವಣೆಯ ಗುರಿಯನ್ನು ತಮ್ಮ ಪ್ರಗತಿಯ ಹಿನ್ನಡೆಗೆ ಸಬೂಬಾಗಿ ಸೂಚಿಸಿರುವುದು ನಾವೇ ಎಂದು ಹೇಳಿಕೊಳ್ಳಲು ಕಾಯುತ್ತಿದ್ದೇವೆ.

ಇನ್ನು ಸಣ್ಣಪುಟ್ಟ ಗೃಹಕೃತ್ಯದ ಚಟುವಟಿಕೆಗಳ ಬಗೆಗಿನ ಮುಂದೂಡುವಿಕೆಯ ಸಬೂಬುಗಳು ನಮ್ಮದೇ ಪ್ರತ್ಯಕ್ಷ ಅನುಭವದಿಂದ ರೂಪಿತಗೊಂಡಿವೆ. ಅವುಗಳು ಕಡಿಮೆ ದರದಲ್ಲಿ ಲಭ್ಯವಾಗಲಿವೆ. ಹಲವು ನಮ್ಮದೇ ಪರಿಧಿಯಲ್ಲಿ ಮುಂದೂಡಲಾಗುತ್ತಿರುವ ಚಟುವಟಿಕೆಗಳ ಉದಾಹರಣೆಗಳು ಇಲ್ಲಿವೆ: ಬ್ರಾಕೆಟ್ ನಲ್ಲಿ ನಮ್ಮ ಸಾಧನೆ ಅಂದರೆ ಮುಂದೂಡಲಾಗಿರುವ ಕಾಲ ಸೂಚಿಸಲಾಗಿದೆ.

1. ಮುಂದಿನ ಭವಿಷ್ಯಕ್ಕೆ ಹೂಡಿಕೆ ಪ್ರಾರಂಭಿಸುವುದು, ಕರ್ಜಿನ ಮೇಲೆ ಹಿಡಿತ ಸಾಧಿಸುವುದು (ಹತ್ತು ವರ್ಷದಿಂದ ಮುಂದೂಡಲಾಗುತ್ತಿದೆ)

2. ಮನೆಗೆ ಸುಣ್ಣ ಬಣ್ಣ, ರಿಪೇರಿ(ಐದಾರು ವರ್ಷಗಳಿಂದ)

3. ವಿದೇಶ ಯಾತ್ರೆ (ದೇಶೀಯದ್ದೆಲ್ಲಾ ಮುಗಿದ ಮೇಲೆ: ಇದನ್ನೇ ಎರಡು ವರ್ಷದಿಂದ ಮುಂದೂಡುತ್ತಿದ್ದೇವೆ.)

4. ಹಲವು ಅನಪೇಕ್ಷಿತ ಹವ್ಯಾಸ ತ್ಯಜಿಸುವಿಕೆ(ನಾಳೆಯಿಂದ–ಹಿಂದೆ ಬಾಗಿಲಮೇಲೆ ಬರೆಯುತ್ತಿದ್ದ "ನಾಳೆ ಬಾ" ನೆನಪಿಸಿಕೊಳ್ಳಿ)



5. ವಾಕಿಂಗ್ ಮೊದಲಾದ ಅಪೇಕ್ಷಿತ ಹವ್ಯಾಸಗಳ ಪ್ರಾರಂಭ (ನಾಳೆಯಿಂದ, ಇಲ್ಲವೇ, ಮಳೆ, ಛಳಿ, ಬಿಸಿಲು ಅನುಕೂಲವಾದಾಗ)

ಇದೀಗ ಬಂದ ಸುದ್ದಿಯೊಂದು(09–09–2026) ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಬ್ಯಾಂಕ್ ನೌಕರರ ಪಿಂಚಣಿ ಹೆಚ್ಚಿಸಲು ಕೋರಿಕೊಂಡಿರುವ ಕೇಸ್ ಸುಪ್ರೀಂ ಕೋರ್ಟ್‌ನಲ್ಲಿ ಇಂದು ಸಹಾ ಮುಂದೂಡಲ್ಪಟ್ಟಿದೆಯಂತೆ. ಇದರ ವಿಶೇಷವೆಂದರೆ ಎಂ ಸಿ ಸಿಂಗ್ಲಾ ಎಂಬ ವ್ಯಕ್ತಿ, 2008 ರಿಂದ 2012ರವರೆಗೆ ಹೈಕೋರ್ಟಿನಲ್ಲಿ ಹೋರಾಡಿ ಸೋತು 2016 ರಿಂದ ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ. ಐವತ್ತಕ್ಕೂ ಹೆಚ್ಚು ಬಾರಿ ಕೋರ್ಟ್ ಇದರ ತೀರ್ಮಾನವನ್ನು ಮುಂದೂಡುತ್ತಲೇ ಇದೆ. ನಮ್ಮ ನ್ಯಾಂಯಾಂಗ ವ್ಯವಸ್ಥೆಯಲ್ಲಿ ಇದೇನು ವಿಶೇಷ ಅಲ್ಲಾ ಅಂತೀರಾ? ವಿಶೇಷ ಇರೋದು ಇಲ್ಲಿ. ಅರ್ಜಿದಾರ ಈಗ ಜೀವಂತವಾಗಿಲ್ಲದಿದ್ದರೂ ಸಂಬಂಧಿಸಿದವರು ಕೇಸನ್ನು ಮುಂದುವರೆಸಿದ್ದಾರೆ. ಕೋರ್ಟ್‌ನ ಈ ಮುಂದೂಡುವಿಕೆಯ ಪರಿಣಾಮ ಪಿಂಚಣಿ ಹೆಚ್ಚಳಕ್ಕೆ ಕಾದು ಕಾದು ಸುಮಾರು ಎರಡೂ ಕಾಲು ಲಕ್ಷ ಪಿಂಚಿಣಿದಾರರು ಕೇಸಿನ ಅವಧಿಯಲ್ಲಿ ಮೃತಪಟ್ಟಿದ್ದಾರೆ. ಇದು ಸ್ಫೂರ್ತಿಯಾಗಬಾರದ ಮುಂದೂಡುವಿಕೆಯ ಪ್ರಕರಣ.

ಅಯ್ಯೋ, ಈ ಲೇಖನ, ದಸರಾಕ್ಕೋ ದೀಪಾವಳಿಗೋ ಅಪರಂಜಿಗೆ ಕಳಿಸೋಣಾ ಅಂತ ಮುಂದೂಡುವ ಯೋಚನೆಯಲ್ಲಿದ್ದೆ....ಕೈ ಜಾರಿತು. ಮುಂದೂಡಲಾಗಲಿಲ್ಲವೇ! ■

ಹೈ ಪ್ರೊಫೈಲ್ ಮದುವೆ

✍ ಗುಂಡುರಾವ್ ದೇಸಾಯಿ

ಪದ್ದುನ ಮಗ ದೊಡ್ಡವನಾಗಿದ್ದ. ದೊಡ್ಡವನಾದಂತೆ ದೊಡ್ಡವರ ಗೆಳೆತನ ಮಾಡಿದ್ದ. ದೊಡ್ಡವರ ಗೆಳೆತನ ಮಾಡಿದ್ದಕ್ಕಾಗಿ ಮಗನೇ ಪದ್ದುಗ ಸ್ಟೇಟಸ್ ಮೆಂಟೆನ್ ಮಾಡಲಿಕ್ಕೆ ಒತ್ತಡ ಹಾಕುತ್ತಿದ್ದ. ಹಿಡಿತದಲ್ಲಿ ಬದುಕುತ್ತಿದ್ದವ ಪದ್ದುನ, ಮಗ ಪಚ್ಚು ಹಿಡಿತಾನೆ ತಪ್ಪಿಸಿದ್ದ. "ಏನ್ರಿ ಡ್ಯಾಡ್! ನೀವು ಯಾವ ಜಮಾನದಾಗ ಇದ್ದೀರಿ. ಒಳ್ಳೆ ಹಳ್ಳಿ ಮಂದಿ ಹಾಗೆ ಮಾಡತೀರಿ" ಎಂದು ಬೈದು ಅಧುನಿಕಕ್ಕೆ ಒಗ್ಗುವ ಎಲ್ಲಾ ವಸ್ತುಗಳನ್ನು 'ಸಾಲಮಾಡಿಯಾದ್ರೂ ತುಪ್ಪ ತಿನ್ನು' ಎನ್ನುವಂತೆ ಕಂತಿನ ಮೇಲೆ ಎಲ್ಲಾ ಐಶಾರಾಮಿ ವಸ್ತುಗಳು ಮನೆಯಲ್ಲಿ ಸೇರಿಸಿದ್ದ. ಜೊತೆಗೆ ಅವನ ದೊಡ್ಡದ ಮೊತ್ತದ ಬೈಕನ್ನು ಕಾಡಿಬೇಡಿ ತೆಗೆದುಕೊಂಡಿದ್ದ. "ಕಡಿಮೆ ಮೈಲೇಜ್ ಕೊಡುವ ಈ ಬೈಕ್ ಯಾಕೊ?" ಎಂದು ಕೇಳಿದಾಗ "ಮೆಂಟೆನ್ ಮೆಂಟೆನ್ ಮಾಡಬೇಕು ಡ್ಯಾಡ್, ಇಲ್ಲದಿದ್ರೆ ಈ ಸಿಟಿಯಲ್ಲಿ ನಮ್ಮನ್ನ ಯಾರೂ ಕ್ಯಾರೆ ಅನ್ನೊಲ್ಲ" ಎಂದಾಗ ಬೈಯಲಿಕ್ಕೆ ಹೊರಟಿದ್ದ ಪದ್ದುನ ತಡೆದು ಪಮ್ಮಿ 'ಸಾಕು ಸುಮ್ನೀರಿ, ಬರೀ ಆ ಹುಡುಗಗ ನಿರಾಶೆ ಮಾಡ್ತಿರಿ' ಎಂದು ಕೊಂಕು ನುಡಿದು ಬಾಯಿ ಮುಚ್ಚಿಸಿದ್ದಳು.

ಒಮ್ಮೆ ಪಚ್ಚುನ ಗೆಳೆಯನ ಅಣ್ಣನ ಮದುವೆ ಇತ್ತು. ಮನೆಗೆ ಬಂದ ಗೆಳೆಯನ ಅಪ್ಪ ಅಮ್ಮ, ಅಹ್ವಾನ ಪತ್ರಿಕೆ ಕೊಟ್ಟು ಸಾವಿರಾರು ರೂಪಾಯಿಯ ಗಿಫ್ಟ್ ನೀಡಿ ಹೋದರು. ಇತ್ತೀಚಿಗೆ ಮೊದಲೇ ಗಿಫ್ಟ್ ನೀಡುವುದು ಕಡ್ಡಾಯವಾಗಿ ಬರಲೇ ಬೇಕು ಎನ್ನುವ ಸಂದೇಶದೊಂದಿಗೆ. ಆದರೆ ಪದ್ದು ಬಿಟ್ಟರೂ ಮಗ ಬಿಡಬೇಕಲ್ಲ. ಎಲ್ಲಾ ಕಾರ್ಯಕ್ರಮಕ್ಕೆ ಬರಬೇಕು, ಹಿಂದಿನ ದಿನ ಎಲ್ಲರಿಗೂ ಸ್ಟಾರ್ ಹೋಟೆಲ್‌ನಲ್ಲಿ ವಸತಿ ಎಂದು ಹೇಳಿದ್ದರು. "ಇದ್ದ ಊರಲ್ಲೆ ಮನೆ ಇರಬೇಕಾದರೆ ಹೋಟೆಲ್ ಯಾಕ್ರಿ?" ಎಂದು ಕೇಳಿದರೆ ಮಗ ಕಣ್ಣು ತಿರಿವಿದ್ದ. ಅವರು ನಕ್ಕು 'ಬನ್ನಿ ಬನ್ನಿ' ಎಂದು ವ್ಯಂಗ್ಯ ನೋಟ ಬೀರಿ ಹೋಗಿದ್ದರು. ನಂತರ ಪಚ್ಚು ದೊಡ್ಡ ರಾದ್ಧಾಂತ ಮಾಡಿದ್ದ 'ನನ್ನ ಸ್ಟೇಟಸ್ ಎಲ್ಲಾ ಹಾಳು ಮಾಡಿದ್ರಿ' ಎಂದು.

ಅವರು ಐದು ಸಾವಿರ ರೂಪಾಯಿ ಅಡ್ವಾನ್ಸ್ ರಿಟರ್ನ ಗಿಫ್ಟ್ ಕೊಟ್ಟು ಹೋಗಿರಬೇಕಾದರೆ 'ನಾವೇನು ಕೊಡೊದು?' ಎಂದು ಯೋಚಿಸುತ್ತಿರಬೇಕಾದರೆ ಪಚ್ಚು ದೊಡ್ಡ ಬ್ಯಾಗನೊಂದಿಗೆ ಮನೆಗೆ ಬಂದ. "ಏನೋ ಹೋಗಿದ್ದು ಕಾಲೇಜಿಗೆ, ಊರಿಂದ ಬಂದಂಗೆ ಕಾಣುತ್ತಿದೆ" ಎಂದ ಪದ್ದು. "ಅಪ್ಪಾ ಕಾಲೇಜಿಗೆ ಹೋಗಿಯೆ ಇಲ್ಲ, ನಮ್ಮ ಗೆಳೆಯನ ಮನೆಗೆ ಹೋಗಿದ್ದೆ. ಅವರು ಏನು ಕೊಡಿಸಿದ್ದಾರೆ ನೋಡಿ" ಎಂದು ಬ್ಯಾಗ್ ತೆಗೆದು ಒಂದೊಂದ ಹೊರಗ ತೆಗೆಲಿಕ್ಕೆ ಹತ್ತಿದ. ಇದು ಹಳದಿ ದಿನದ ಡ್ರೆಸ್, ಇದು ಮದುವೆ ಹಿಂದಿನ ದಿನದ ಡ್ರೆಸ್, ಇದು ಜಾಕೆಟ್, ಇದು ಇಂಪೋರ್ಟ ಸೂಟ್ ಎಲ್ಲಾ ಸೇರಿ ಎಷ್ಟಾಗಿರಬೇಕು ಹೇಳಿ" ಎಂದ ಮಗ.

ಪದ್ದು "ಆರೇಳು ಸಾವಿರ" ಎಂದ.

"ಎಷ್ಟು ಚೀಪ್ ಆಗಿ ಯೋಚಿಸ್ತಿರಲ್ಲ ಡ್ಯಾಡಿ, ಐವತ್ತಾರು ಸಾವಿರ" ಎಂದಾಗ ಪದ್ದುಗ ಹಾರ್ಟಅಟ್ಯಾಕ ಆದಂಗಾಯಿತು, 'ಉಡುಗೊರೆ ಏನು ಕೊಡಬೇಕು' ಎನ್ನುವ ಚಿಂತೆಯಲ್ಲಿದ್ದ ಪದ್ದುಗೆ.

"ಅಯ್ಯೊ ಬಂಗಾರ, ಎಂತಹ ಗೆಳೆಯರ ದೋಸ್ತಿ ಮಾಡಿರುವೆ. ನನ್ನ ಚಿನ್ನ" ಎಂದು ಪಮ್ಮಿ ಮುದ್ದಾಡಿದಳು.

"ನೋಡು ಅಪ್ಪಾಜಿ ಅವರ ಮನೆಯ ಎಲ್ಲಾ ಕಾರ್ಯಕ್ರಮಕ್ಕ ಬರಲೇಬೇಕು. ಹಾಗಾಗಿ ನೀವೆಲ್ಲಾ ಎರಡು ಮೂರು ಜೊತೆ ಡ್ರೆಸ್ ಹೊಲಿಸಿ, ಅಮ್ಮಾ ನೀವು ಸೀರೆ" ಎಂದ ಪಚ್ಚು.

"ಹೇ. . . ಮಗನೇ ಎಂತಹ ಚಲೋ ವಿಷಯ ಹೇಳಿದೆ ನೋಡು. ಅವರಿಂದಾಗಿ ಹೊಸ

ಸೀರೆ ತೆಗೆದುಕೊಳ್ಳೊ ಹಾಗಾಯಿತು" ಎಂದು ಲಟ್ಟಗಿ ಮುರಿದಳು.

"ಲಗ್ನ ಇರೋದು ಅವರ ಮನೆಯಲ್ಲಿ, ನಮ್ಮ ಮನೆಯಲ್ಲಿ ಅಲ್ಲ. ನಾವ್ಯಾಕೆ ತೆಗೆದುಕೊಳ್ಳಬೇಕು, ಯಾಕೆ ಕೊಡಿಸಬೇಕು" ಎಂದ ಪದ್ದು

"ಕಾಲ ಬದಲಾದರೂ ನೀವು ಬದಲಾಗವಲ್ರಿ, ಇದು ಹೈಪ್ರೊಫೈಲ್ ಮದಿವಿ. ಅದರ ತಕ್ಕಂತ ನಾವು ಇರಬೇಕು, ಮೆಂಟೇನ್ ಮಾಡಬೇಕು" ಎಂದಳು ಪಮ್ಮಿ.

"ನನಗೆ ಆಗೊಲ್ಲಪ್ಪ, ನಾನು ಬರುವುದಿಲ್ಲ"

"ಡ್ಯಾಡಿ, ನೀವು ಬರಲೇಬೇಕು. ನನ್ನ ಸ್ಟೇಟಸ್ ಏನಾಗಬೇಕು. ಬರತೀರಿ ಅಂದ್ರ ಬರತೀರಿ ಅಷ್ಟ" ಎಂದು ಆರ್ಡರ್ ಮಾಡಿದ ಪಚ್ಚು.

"ಅಲ್ಲೊ ಹುಲಿ ಬಣ್ಣಕ್ಕ ನರಿ ಮೈ ಸುಟ್ಟುಕೊಂಡ ಹಾಗೆ ಇದು ಆಗತದ ನೋಡಪಾ. ನಾನು ಉಡುಗೊರೆ ಏನು ಕೊಡಬೇಕು ಅಂತ ಚಿಂತೆ ಮಾಡತಿರಬೇಕಾದರೆ, ನೀನು ಅದು ಇದು ಅಂದ್ರ ಎಲ್ಲಿ ತರಲಿ" ಎಂದ ಪದ್ದು.

"ಹೇಗಾದ್ರೂ ಮೊನ್ನೆ ಲೋನ್ ಮಾಡಿರಲ್ಲ, ಪ್ಲಾಟ್ ತೊಗೊಬೇಕು ಅಂತ. ಅದರಲ್ಲಿಯೆ ತರೋಣ" ಎಂದು ಸಲಹೆ ನೀಡಿದಳು ಪಮ್ಮಿ.

"ಅಲ್ಲೇ, ಮಗನಿಗೆ ತಿಳಿಸಿ ಹೇಳೊದು ಬಿಟ್ಟು ನೀನು ಅವನ ಹಾಗೆ ಕುಣಿತಿಯಲ್ಲೆ?"
'ನೀವು ಅಂತ ಕೊಡಿಸೊದಿಲ್ಲ, ಮಗನ ಕಾರಣದಿಂದಾದ್ರೂ ಚಲೋ ಚಲೋ ಸೀರಿ ಸಿಗತಾವ' ಅಂತ ಮನದಲ್ಲಿ ಅಂದುಕೊಳ್ಳುತ್ತಿರುವಾಗಲೇ "ಗೊತ್ತಾಯ್ತು ಗೊತ್ತಾಯ್ತು ಮನಸಲ್ಲಿ ಮಂಡಿಗೆ ಮಾಡಿಕೊಳ್ಳುತ್ತಿರುವುದು, ನಾನು ಮಾತ್ರ ಬರೊದಿಲ್ಲ. ಹತ್ತು ಸಾವಿರದಲ್ಲಿ ಎಲ್ಲಾ ತರಬೇಕು" ಎಂದು ಹುಕುಂ ಮಾಡಿದ.

"ಬರಿ ಹತ್ತುಸಾವಿರನಾ? ಡ್ಯಾಡಿರಿ ನೀವು ಯಾವ ಕಾಲದಲ್ಲಿದ್ದೀರಿ?" ಎನ್ನುತ್ತಿರುವಾಗಲೇ "ನಡಿ ಪಚ್ಚು, ಅವರದು ಕ್ರೆಡಿಟ್ ಕಾರ್ಡ ತೆಗೆದಕೊಂಡಿದ್ದೀನಿ, ತರೋಣ" ಎಂದು ಪಮ್ಮಿ ಮಗನೊಂದಿಗೆ ನಡೆದೆ ಬಿಟ್ಟಳು.

ರಾತ್ರಿ ಬರುವಷ್ಟರಲ್ಲಿ ಹತ್ತಾಗಿತ್ತು. 'ಅಡುಗೆ ಮಾಡಿ ಇಡಿ' ಎಂದು ಪಮ್ಮಿ ಹೇಳಿದ್ದರಿಂದ ಊಟಕ್ಕೆ ಸಿದ್ಧಮಾಡಿ ಪದ್ದು ಮಗ ಮಡದಿಗಾಗಿ ಕಾಯುತ್ತಿದ್ದ. ಮನೆಗೆ ಬರುತ್ತಿದ್ದಂತೆ 'ಬರ್ರಿ' ಅಂತ ಕರೆದು 'ನೋಡಿ ನಿಮಗೆ ಏನೇನು ತಂದೀವಿ, ನನಗೆ ಏನು ತೊಗೊಂಡೀನಿ, ಪಚ್ಚುವು ಏನೇನಿವೆ ನೋಡಿ' ಎಂದು ತೋರಿಸುತ್ತಿದ್ದಳು. ಪದ್ದು ಬಿಲ್ ಗಾಗಿ ತಡಕಾಡುತ್ತಿದ್ದ. ನೋಡ್ರಿ ಅಪ್ಪಾ, ನಾನು ಕುರ್ತಾ ಒಂದೆ ತೆಗೆದುಕೊಂಡಿರುವೆ , ನಿಮ್ಮವು ಅಮ್ಮನವು ಎಲ್ಲಾ ಸೇರಿ ಅರವತ್ತು ಸಾವಿರ ಆಗಿವೆ ಅಷ್ಟೆ" ಎಂದ.

"ಅರವತ್ತು ಸಾವಿರ! ಅಷ್ಟನಾ?" ಎಂದ ಪದ್ದು.

"ಅಷ್ಟ ಅಂತ ಕೇಳ್ತಿರಲ್ರಿ. ಇವರ ಇನ್ನೊಬ್ಬರ ಫ್ರೆಂಡ್ ಫ್ಯಾಮಿಲಿ ಬಂದಿತ್ತು. ಅವರು ತೆಗೆದುಕೊಂಡಿದ್ದು ನೋಡಿದ್ರ ಎದಿನ ಹೊಡಿತಿರಿ. ಬರೋಬ್ಬರಿ ಒಂದು ಲಕ್ಷ ಮಾಡಿದ್ರು ಬಿಲ್ಲು" ಎಂದಳು ಪಮ್ಮಿ.

"ನಡ್ರಿ ನಡ್ರಿ ಊಟ ಮಾಡೋಣ" ಎಂದ ಪದ್ದು

"ಪಪ್ಪಾ ನನ್ನ ಗೆಳೆಯನ ಅಪ್ಪಾಜಿ ಬಂದಿದ್ರಲ್ಲ ಅವರು ಅಲ್ಲೆ ಎಲ್ಲರಿಗೂ ಊಟ ಮಾಡಿಸಿದ್ರು" ಎಂದ.

"ಹೌದ್ರಿ ಎಂತಹ ಹೋಟೆಲ್? ಅಬ್ಬಾ! ಒಂದೂ ದಿನವಾದರೂ ಕರೆದುಕೊಂಡು ಹೋಗಿರೇನು ನೀವು? ಭಾರಿ ಇತ್ತು ಊಟ"

"ಅಲ್ಲೆ, ಬರತೀವಿ ಅಡುಗೆ ಮಾಡಿ ಇಡು" ಎಂದೆ

"ನೀವೆ ಊಟ ಮಾಡಿ ಪದ್ದು, ಸ್ವಾರಿ" ಎಂದಳು ಪಮ್ಮಿ.

ಕ್ರೆಡಿಟ್ ಕಾರ್ಡ ಭಯ, ನಿದ್ದೆ ಬರಲಿಲ್ಲ, ಊಟ ಎಲ್ಲಿ ಸೇರಬೇಕು.

ಮರುದಿನ ಕಾಲೇಜಿನಿಂದ ಬಂದ ಮಗ "ಅಪ್ಪಾ ಅಮ್ಮಾ ನೀವು ಡ್ಯಾನ್ಸ್ ಕಲಿಬೇಕು" ಎಂದ.

"ಹೊ. . . ಮಗನೇ ನನ್ನ ಬಾಲ್ಯದ ಎಲ್ಲಾ ಆಸೆ ಈಡೇರಿಸಕತಿದಿ ನೋಡು. ನಾನು ರೆಡಿ, ಜಿಮ್ ಗಿಮ್ ಕಲಿಬೇಕೇನೊ" ಎಂದಳು ಪಮ್ಮಿ.

"ಅಮ್ಮಾ, ಇದು ಮದುವೆಗಾಗಿ ಡ್ಯಾನ್ಸ್, ಗುದ್ದಾಡೊದಕ್ಕೆ ಅಲ್ಲ" ಎಂದ ಪಚ್ಚು.

"ನನಗೆ ಡ್ಯಾನ್ಸ್–ಗಿನ್ಸ್ ಆಗಲ್ಲ" ಎಂದೆ.

"ಆಗಲ್ಲ ಅಂದ್ರ ನಡೆಯೊಲ್ಲ ಅಪ್ಪಾಜಿ. ಹೈ ಪ್ರೊಫೈಲ್ ಮದುವೆ. ಅಲ್ಲೆ ಗ್ರುಪ್ ಆಗಿ ಕಲಸ್ತಾರೆ ಬನ್ನಿ" ಎಂದ.

ಪದ್ದು "ಒಲ್ಲೆ" ಎಂದ.

"ನಿಮಗೆ ಮನೆಗೆ ಕೋರಿಯೊಗ್ರಾಫರ್‌ನ ಕರಸ್ತೀನಿ ಅದಕ್ಕೆ ಎಕ್ಸ್ಟ್ರಾ ಫಿ ಆಗುತ್ತದ" ಎಂದ.

"ಅವರು ಕೊಡ್ತಾರ ಫೀ?" ಎಂದ.

"ಅಲ್ಲೆ ಬಂದ್ರೆ ಅವರದು ಇಲ್ಲಿಗೆ ಬಂದ್ರೆ ನಿಮ್ಮದು"

"ಆಯ್ತು ಆಯ್ತು ಏನು ಕುಣಸ್ತಿಯೋ ನೀನೆ ಕುಣುಸು" ಎಂದ ಸಿಟ್ಟಿನಿಂದ.

"ಡ್ಯಾಡ್ ಏನಂತ ಮಾತಾಡತೀರಿ?"

"ಹಾಗಲ್ಲೊ, ನೀನೆ ಹೇಳಿಕೊಡು, ಈಗ ಖರ್ಚು ಜಾಸ್ತಿ ಆಗಿದೆ" ಎಂದಾಗ ಪಚ್ಚು ಒಂದೆ ಮಾತಿಗೆ ಒಪ್ಪಿಕೊಂಡ.

ಪದ್ದು ಯಾವುದೊ ಕೆಲಸ ಬಂದು ಮದುವೆ ಮೊದಲಿನ ಕಾರ್ಯಕ್ರಮಗಳಿಗೆ ಹೋಗಲಿಲ್ಲ ಆದರೆ ಹೋಗಿದ್ದ ಪಮ್ಮಿ ಸುಮ್ಮನೇ ಬಿಡುವಳೆ. "ಏನ್ರಿ ಮಿಸ್ ಮಾಡಿಕೊಂಡಿರಿ. ಎಂತಹ ಟ್ರೀಟ್. ಜೀವನಾದಾಗ ನೋಡಲಾರದಂತಂದ್ದು. ಎಂತಹಾ ಊಟಾ ಛೆ ತಿನ್ನಲಾರದಂತದ್ದು" ಎಂದು ಹೇಳುವಾಗ ಮನದ ಮೂಲೆಯಲ್ಲಿ ನಾನು ಸುಮ್ಮನೆ ಮಿಸ್ ಮಾಡಿಕೊಂಡೆ" ಎಂದು ಪದ್ದುಗ ಅನಿಸುತ್ತಿದಾದರೂ ತೋರಗೊಡಲಿಲ್ಲ. "ಆಯ್ತು ನಾಳೆ ಸಂಜೆ ಹೋಗುವುದಿದೆಯಲ್ಲ"ಎಂದಾಗ "ಅಲ್ಲಿ ಎಂತಹಾ ವೈಭವ ಇದೆಯೋ?. ಮಗನೇ ಪಚ್ಚು ನಿನ್ನಿನ್ನಿಂದಾನೆ ಎಲ್ಲಾ ನೋಡೊಕೆ ಆಗಿದ್ದು. ಇಂತಹವರ ದೋಸ್ತಿ ಮಾಡಪ್ಪಾ" ಎಂದು ಹಾರೈಸಿದಳು. "ನೋಡ್ರಿ ನಾಳೆ ಆ ಹೋಟೆಲ್ ಒಳಗ ಹೋಗಬೇಕಾದರೂ ಎಂಟ್ರೆನ್ಸ್ ಪಾಸ್ ಕೊಟ್ಟಾರ, ಹೆಂಗೆಂಗೊ ಹೊಗಂಗಿಲ್ಲರಿ " ಎಂದು ಪಚ್ಚು ಎಚ್ಚರಿಸಿದ.

ಮರುದಿನ ಎಲ್ಲರೂ ರೆಡಿ ಆದರೂ ಪದ್ದು ರೆಡಿ ಆಗಿರಲಿಲ್ಲ. ಪಮ್ಮಿ ಒತ್ತಾಯಮಾಡಿ ರೆಡಿ ಮಾಡಿದಳು. ಮಗ ಪಚ್ಚು ಆಗಲೇ ಹೋಗಿದ್ದ. ಅವನೇ ಒಂದು ಕಾರ್ ಕಳುಹಿಸಿದ. ಎಂಟ್ರಿ ಆದ ಕೂಡಲೇ ಗಾರ್ಡ ಪಾಸ್ ಕೇಳಿದ, ಅವನು ಗಾರ್ಡ ತರಹ ಇರಲಿಲ್ಲ. ಕೆಳಗೆ ಇಳಿದು ಹೊರಟ ಮೇಲೆ ಸ್ವಾಗತಕ್ಕಾಗಿ ಹೊಟೆಲ್ ನವರು ನಿಂತಿದ್ದರು. ಲಗ್ನದ ಮನೆಯವರು ಇರಲಿಲ್ಲ. ಎಲ್ಲರನ್ನು

ಒಳಗೆ ಬಿಟ್ಟರೂ ಕಾಮನ್ ಡ್ರಸ್ ಹಾಕಿಕೊಂಡು ಬಂದಿದ್ದ ಪದ್ದುನ ತಡೆದರು. 'ಹೇ. . . ಅವರು ನಮ್ಮ ಮನೆಯವರು, ಬನ್ನಿ' ಎಂದು ಪಮ್ಮಿ ಬಯ್ಯಕೋತ ಎಳೆದುಕೊಂಡು ಹೋದಳು.

ಕಾರ್ಡ್‌ನಲ್ಲಿ ಮೊದಲೆ ವಿವರಣೆ ಕೊಟ್ಟಾಗಿತ್ತು. ಇಷ್ಟು ಗಂಟೆಗೆ ಸೇರಬೇಕು, ಇಷ್ಟು ಗಂಟೆಗೆ ಟಿಫಿನ್, ಎಂಗೇಜ್ ಮೆಂಟ್. ಎಲ್ಲರೂ ರೂಮಿಗೆ ಹೋದರು. ಫೈವ್ ಸ್ಟಾರ್ ಹೊಟೆಲ್ ಎಂದರೆ ಕೇಳಬೇಕಾ? "ನಿಮ್ಮ ಲೈಫನಲ್ಲಿ ಒಮ್ಮೆಯಾದರೂ ಇಂತಹ ಹೊಟೆಲ್ ಗೆ ಕರೆದುಕೊಂಡು ಬಂದಿರೇನ್ರಿ' ಎಂದು ತಿವಿಯುತ್ತಲೇ ಇದ್ದಳು. ಹಾಲ್ ಗೆ ಹೋದಾಗ ಮದುವೆ ಮನೆಯ ಎಲ್ಲಾ ಐಷಾರಾಮಿ ಇತ್ತು ಆದರೆ ಮದುವೆಯ ಕಳೆ ಇರಲಿಲ್ಲ. ಗಂಭೀರತೆ ಮನೆ ಮಾಡಿತ್ತು. ಯಾರ ಮೊಗದಲ್ಲೂ ನಗುವಿನ ಅಲೆ ಇರಲಿಲ್ಲ. ಎಲ್ಲರೂ ತಮ್ಮ ಅಂತಸ್ತಿನಲ್ಲಿ ಕಣ್ಮುಚ್ಚಿ ಕುಳಿತವರೆ ಆಗಿದ್ದರು. ಅಷ್ಟೆ ಮಾತುಗಳು. ಸತ್ತವರ ಮನೆಯಲ್ಲಾದರೂ ನಗುವ ಸಂದರ್ಭಗಳು ಇರುತ್ತವೆ ಆದರೆ ನಗುವ ಮದುವೆಯಲ್ಲಿ ಅದು ಇರಲಿಲ್ಲ. ಪದ್ದುಗೆ ಪರಿಚಯದವರು ಅಷ್ಟಾಗಿ ಇರದ ಕಾರಣ ಒಬ್ಬನೆ ಕುಳಿತಿದ್ದಕ್ಕೆ ಹೋಟೆಲ್‌ನವರು ಎರಡು ಮೂರು ಬಾರಿ ಬಂದು ಇವನು ಹೌದೊ ಅಲ್ಲೊ ಎಂದು ಕನ್ ಫರ್ಮ ಮಾಡಿಕೊಂಡು ಹೋದರು.

ಒಂದು ಗಂಟೆ ಕಳೆಯುವುದೇ ಕಷ್ಟವಾಯಿತು. ನೀರಸ ವಾತಾವರಣ, ನಗುವನ್ನು ಒತ್ತಾಯಪೂರ್ವಕವಾಗಿ ತಂದುಕೊಂಡು ಮಾತಾಡುತ್ತಿದ್ದ ಮುಖಗಳು ಅಲ್ಲಿ ಕಾಣುತ್ತಿದ್ದವು. ಹಿರಿಯರೊಬ್ಬರು ಕುಳಿತ ಕಡೆ ಪದ್ದು 'ಅವರನ್ನಾದರೂ ಮಾತಾಡಿಸೋಣ' ಎಂದು ಪದ್ದು ಮಾತಾಡಿಸತೊಡಗಿದ. ಹತ್ತು ಮಾತಾಡಿದ ಮೇಲೆ ಅವರು ಬೆರಳಿನಿಂದ ಸೈಲೆಂಟ್ ಇರುವಂತೆ ಸೂಚಿಸಿದ ಹಾಗಾಯಿತು. ಅಲ್ಲಿಂದ ಪದ್ದು ಎದ್ದ. ನಿಶ್ಚಿತಾರ್ಥ ಕಾರ್ಯಕ್ರಮ ಮುಗಿಯಿತು. ಫಂಕ್ಷನ್ ಹಾಲ್ ಎಲ್ಲಾ ಗಂಭೀರ. ಎಲ್ಲೂ ನಗುವಿನ ಅಲೆ ಇಲ್ಲ. ಅಲ್ಲಲ್ಲಿ ಗುಜುಗುಜು ಮಾತುಗಳು ಅಷ್ಟೆ. ಮದುಮಕ್ಕಳು ಆಗಾಗಾ ಒತ್ತಾಯದ ಸ್ಮೈಲ್ ಮಾಡುತ್ತಿದರಷ್ಟೆ. ನಂತರ ಊಟವಾಯಿತು. ನಾನಾ ವೆರೈಟಿಗಳು. ಎಷ್ಟು ತಿಂದರೂ ಹೊಟ್ಟೆತುಂಬಿದ ಮೇಲೆ 'ಹುಗ್ಗಿ ಕೂಡಾ ಮುಳ್ಳು ಮುಳ್ಳು' ಅಲ್ಲವೇ? ಪದ್ದುಗೂ ಹಾಗಾಯಿತು. ಪಮ್ಮಿ ಭರ್ಜರಿ ಹೊಡೆಯುತ್ತಿದ್ದಳು ಹೆಂಗಸರ ಜೊತೆ ಮಾತಾಡುತ್ತಾ. ಪದ್ದು ಏಕಾಂಗಿ. ಅನಂತರ ಡ್ಯಾನ್ಸ್ ಶೋ. ಎಲ್ಲರೂ ಮಾಡಿದರು, ಮಾತಾಡದ ಮುದುಕನೂ ಮಾಡಿದ, ಎಲ್ಲರೂ ಮಾಡಿಯಾದ ಮೇಲೆ ಪದ್ದು ಫ್ಯಾಮಿಲಿ ಪಾಳಿ ಬಂತು. ಪದ್ದು ಮಗ ಕಲಿಸಿದ ಸ್ಟೆಪ್ ನಾಚುತ್ತಾ ಹಾಕಿದ,. ಪಮ್ಮಿ ಓವರ್ ಬಿಲ್ಡಪ್ ಕೊಡುವ ಭರದಲ್ಲಿ ದಪ್ಪನೆ ಬಿದ್ದಳು. ಪರಿಸ್ಥಿತಿ ಅರಿತು ಪದ್ದು ಕೂಡಲೆ ಎಬ್ಬಿಸಿದ. ಅದುವರೆಗೂ ನಗದವರು ನಗಲಾರಂಭಿಸಿದರು. ಈಡೀ ವಾತಾವರಣ ಬದಲಾಯಿತು. ಎಲ್ಲರೂ ಇವರನ್ನು ನೋಡುವವರೆ. ಮಗನು ಸಿಟ್ಟಾದ. ಪದ್ದು, ಪಮ್ಮಿನ ಮೆಲ್ಲನೇ ಕರೆದುಕೊಂಡು ನಡೆದ. ಸ್ವಲಿಂಗ ಬರುತ್ತಿರುವಂತೆ ಕಂಡಿತು, ಎತ್ತಿಕೊಂಡು ತಮ್ಮ ರೂಮಿಗೆ ಕರೆದೊಯ್ದು. ಮಗ ಬರುತ್ತೇನಂದನಾದರೂ ನೀನು ಮ್ಯಾನೇಜ್ ಮಾಡು ಎಂದು ಹೇಳಿ ಹೊರಟ ಅವನು ರೂಮಿನತನಕ ಬಂದು ಬಿಟ್ಟು ಹೋದ. ಪದ್ದು ಪಮ್ಮಿಗೆ ಮಸಾಜ್ ಮಾಡಿ ಐಸ್ ಕ್ಯೂಬ್‌ಹಿಡಿದ. ಸ್ವಲ್ಪ ಸಮಯದ ನಂತರ ನೋವು ಕಡಿಮೆಯಾಯಿತು. 'ಹೋಗೋಣನೇ?' ಎಂದು ಕೇಳಿದ. 'ಬೇಡಾ ಬಿಡಿ, ಇಲ್ಲೆ ಇರೋಣ' ಎಂದಳು ಪಮ್ಮಿ. 'ಏನು ಮಾಡೋದು?' ಎಂದಾಗ ಗಲ್ಲತಿವಿದಳು.

ಹೈಪ್ರೊಫೈಲ್ ಮದುವೆ ಖುಷಿಕೊಡದಿದ್ದರೂ ಪದ್ದು ಪಮ್ಮಿಗೆ ಗೆಲವು ಕೊಟ್ಟಿತು. ಮರುದಿನ ಮದುವೆ ನಂತರ ಮದುಮಕ್ಕಳ ಅಪ್ಪ ಅಮ್ಮ 'ನೋವು ಮಾಡಿಕೊಂಡು ನೀವು ಗೆಲುವಾಗಿದ್ದೀರಿ? ಹೇಗೆ ಸಾಧ್ಯ?" ಎಂದಾಗ "ಮನೆಯವರು ಎಲ್ಲಾ ನೋವನ್ನು ಮಾಯಾಮಾಡಿಬಿಟ್ಟರು" ಎಂದು ನಕ್ಕಳು. "ಏನು ಸರ್ ಅಂತಹದೇನು ಮಾಡಿದಿರಿ ನಮಗೂ ಹೇಳಿಕೊಡಿ?" ಎಂದು ಮದುಮಗನ ತಾಯಿ ಕೇಳಿದಾಗ ಪಮ್ಮಿಯ ಮುಖ ಪೆಚ್ಚಾಗಿತ್ತು.

■

ದಂನಆ

- ನೀನೂ ತಲೆ ಎತ್ತಿ ನಡೆಯಬಹುದು ಜೀವನದಲ್ಲಿ ಹೌದು, ಮರೆತುಬಿಡು ಒಂದು ದಿನ ನಿನ್ನ ಮೊಬೈಲನು ಮನೆಯಲಿ.
- ಸುಳ್ಳು ರಂಜಿಸಿದಷ್ಟು ಸುಲಭವಾಗಿ ಸತ್ಯ ರಂಜಿಸಲು ಸಾಧ್ಯವೆ?
- ಆಬ್ಸೆನ್ಸ್ ವಿಲ್ ಟೆಲ್ ಯು ದಿ ಇಂಪಾರ್ಟೆನ್ಸ್ ಆಫ್ ಪ್ರೆಸನ್ಸ್.
- ಐಸ್ ಕ್ರೀಂ ಮಾರುವವನಿಗೆ ತೊಂದರೆ ಕೊಡುವ ಅದೇ ಮಳೆ ಛತ್ರಿ ಮಾರುವವನಿಗೆ ಸಹಾಯ ಮಾಡುತ್ತದೆ.
- ಡಾಗ್ ವಿತ್ ಎ ಬೋನ್ ಕೆನಾಟ್ ಬಾರ್ಕ್.
- ಮಾಡಬಹುದಾಗ ಮಾಡದಿದ್ದರೆ ಮಾಡಲೇ ಬೇಕಾದಾಗ ಮಾಡಲಾಗುವುದಿಲ್ಲ.
- ಅನುಭವದ ಏಟು ಬಿದ್ದಾಗ ಸಿಗುವ ಬುದ್ಧಿವಂತಿಕೆ ಜಗತ್ತಿನ ಯಾವ ದೊಡ್ಡ ಪುಸ್ತಕದಲ್ಲೂ ಸಿಗುವುದಿಲ್ಲ.
- ಇಫ್ ಯು ಕೆನಾಟ್ ಬಿ ಬೆಟರ್ ದ್ಯಾನ್ ದಿ ಬೆಸ್ಟ್ ಅಟ್ ಲೀಸ್ಟ್ ಬಿ ಡಿಫರೆಂಟ್ ಫ್ರಂ ದಿ ರೆಸ್ಟ್.
- ನಾವು ಯಾರಿಗೂ ಬೇಡದವರಾಗಬಾರದು. ನಾವು ಯಾರಿಂದಲೂ ಬೇಡದವರಾಗಬೇಕು.
- ಕೇರ್‌ಲೆಸ್ ಆಗಿರುವುದು ಮಾತುಗಳಲ್ಲ, ಅವುಗಳನ್ನು ಹೇಳುವ ಬಾಯಿ.
- ದಿ ಸೀಕ್ರೆಟ್ ಆಫ್ ಎ ಹ್ಯಾಪಿ ಮ್ಯಾರೇಜ್ ರಿಮೈನ್ಸ್ ಎ ಸೀಕ್ರೆಟ್.
- ಚಿನ್ನವನ್ನು ಚಿನ್ನವೆಂದು ಸಾಬೀತುಪಡಿಸುವಂತಹ ಪರೀಕ್ಷೆ ಕಲ್ಲಿದ್ದಲಿಗೆ ಅಗತ್ಯವಿಲ್ಲ. ಒಳ್ಳೆಯವರಿಗೆ ಮಾತ್ರ ಪರೀಕ್ಷೆಗಳಿವೆ.
- ಕೋಳಿ, ಜನ ನಿನ್ನನ್ನು ಬದುಕಲು ಏಕೆ ಬಿಡರು?
ಕೋಳಿ: ಯಾರು ಜನರನ್ನು ಎಚ್ಚರಿಸುತ್ತಾರೋ ಅವರಿಗೆ ಇದೇ ಶಿಕ್ಷೆ.
- ದೇರ್ ಆರ್ ಟು ವೇಸ್ ಟು ಲರ್ನ್: ಒನ್ ಈಸ್ ಫ್ರಂ ಯುವರ್ ಮಿಸ್ಟೇಕ್ಸ್. ದಿ ಅದರ್ ಈಸ್ ಫ್ರಂ ಅದರ್ಸ್ ಮಿಸ್ಟೇಕ್ಸ್. ದಿ ಫಸ್ಟ್ ಈಸ್ ಕಾಸ್ಟ್ಲಿ, ದಿ ಸೆಕೆಂಡ್ ಈಸ್ ಫ್ರೀ.
- ಯಾರು ತಮ್ಮ ಲಾಭಕ್ಕಾಗಿ ಇತರರನ್ನು ಬಳಸಿಕೊಳ್ಳುತ್ತಾರೋ ಒಂದಲ್ಲಾ ಒಂದು ದಿನ ಒಂದಲ್ಲಾ ಒಂದು ಕಡೆ ಅವರೂ ಕೂಡ ಇನ್ಯಾರದೋ ಲಾಭಕ್ಕೆ ಬಳಕೆ ಆಗೇ ಆಗುತ್ತಾರೆ.

ನಾದೋಪಾಸಕರ ಉದರೋಪಾಸನೆ-2

ಸಂಜಯ ಹಾವನೂರ, ಕ್ಯಾಲಿಫೋರ್ನಿಯಾ

ಭೋಜನ ರಸಿಕತೆಯಲ್ಲಿ ಕರ್ನಾಟಕ ಸಂಗೀತಗಾರರೂ ಕಡಿಮೆಯಲ್ಲ. ಸಾ.. ಪಾ.. ಸಾ.. ಪಾಡುವಷ್ಟೇ ಶ್ರದ್ಧೆಯಿಂದ ಸಾಪಾಡುಗಳನ್ನೂ ಆಸ್ವಾದಿಸುತ್ತಾರೆ. ಹಿಂದಿನ ಕಾಲದಲ್ಲಿ, ನೂರು ವರ್ಷಗಳಷ್ಟು ಮುಂಚೆ, ಕಲಾವಿದರು ಊರಿಂದೂರಿಗೆ ರೈಲಿನಲ್ಲಿ ಪ್ರವಾಸ ಮಾಡುವುದು ಅನಿವಾರ್ಯವಾಗಿತ್ತು. ಅದರ ಸುಳಿವನ್ನು ಪಡೆದುಕೊಂಡ ಅಭಿಮಾನಿಗಳು ಮಧ್ಯದ ಊರುಗಳಲ್ಲಿ ಸ್ಟೇಶನ್ನಿಗೆ ಬಂದು ಅವರಿಗೆ ಇಷ್ಟವಾದ ಊಟ ತಿಂಡಿಗಳನ್ನು ಕೊಟ್ಟು ಸತ್ಕರಿಸುತ್ತಿದ್ದರಂತೆ. ಈಗಲೂ ಇಬ್ಬರು ವಿದ್ವಾಂಸರು ಸೇರಿದರೆ ಮಾತು ಬಲು ಬೇಗ ಊಟ ತಿಂಡಿಗಳ ಕಡೆಗೆ ತಿರುಗುತ್ತದೆ ಎಂಬ ಪ್ರತೀತಿ ಇದೆ. ಆದರೆ ಅವರಲ್ಲಿ ಹೆಚ್ಚಿನವರು ಬಡಪಾಯಿ ಶಾಕಾಹಾರಿಗಳು. ಕೂಟು ಕೊಳಂಬುಗಳ ಹೊರತಾಗಿ ಹೆಚ್ಚಿನ ಆಸೆಗಳನ್ನು ಹೊತ್ತವರಲ್ಲ. ತಮ್ಮ ಮೆಚ್ಚಿನ ತಿಂಡಿ ತೀರ್ಥಗಳನ್ನು ಕೃತಿಗಳಲ್ಲಿ ವರ್ಣಿಸಿ ದೇವರುಗಳೊಡನೆ ಭಕ್ತಿಯಿಂದ ಹಂಚಿಕೊಂಡಿದ್ದಾರೆ. ಶುದ್ಧ ತುಪ್ಪದಲ್ಲಿ ಪೊಂಗಲು, ಪಾಯಸ, ಮೃಷ್ಟಾನ್ನಗಳ ಜೊತೆಗೆ ಅಪ್ಪಮ್, ಹಪ್ಪಳಗಳನ್ನು ಮಾಡುವ ರೆಸಿಪಿಗಳು ಹಳೆಯ ಕೃತಿಗಳಲ್ಲಿ ಧಾರಾಳವಾಗಿ ಸಿಗುತ್ತವೆ. ಪೊಂಗಲನ್ನು ಸೇವಿಸುವಾಗ ಅದರಿಂದ ಜಿನುಗುವ ತುಪ್ಪ ಮೊಳಕೈ ತನಕ ಹರಿಯಬೇಕಂತೆ. ಯಾವ ದೇವರ ಪ್ರೀತಿಗಾಗಿ ಎಂದು ಕೇಳಬೇಡಿ. ತ್ಯಾಗರಾಜರು ತೋಡಿ ರಾಗದ ಅರಗಿಂಪವೇ ಎಂಬ ಕೃತಿಯಲ್ಲಿ ಹಾಲು ಬೆಣ್ಣೆ ಮತ್ತು ಷಡ್ರಸೋಪೇತ ದಿವ್ಯಾನ್ನಗಳನ್ನು ಸ್ವೀಕರಿಸಿ ಭಕ್ಷಿಸು ಎಂದು ಶ್ರೀರಾಮನನ್ನು ಬೇಡಿಕೊಂಡಿದ್ದಾರೆ. ಮುತ್ತುಸ್ವಾಮಿ ದೀಕ್ಷಿತರ ಪೂರ್ಣಚಂದ್ರಿಕಾ ರಾಗದ “ಶಂಖ ಚಕ್ರ ಗದಾಪಾಣಿ” ಕೃತಿಯಲ್ಲಿ ತಿರುಪತಿ ತಿಮ್ಮಪ್ಪನ ಗುಣಗಾನದ ಜೊತೆಗೆ ಅಮೃತಸಾರವೆಂಬ ಭಕ್ಷ್ಯದ ಪ್ರಸ್ತಾಪವಿದೆ. ಇದು ಅಂದಿನ ತಿರುಪತಿ ಪ್ರಸಾದವೇ ಇರಬೇಕು ಎಂದು ವಿದ್ವಾಂಸರು ಗುಮಾನಿಸಿದ್ದಾರೆ. ಅಂದರೆ ಇನ್ನೂರು ವರ್ಷಗಳಷ್ಟು ಹಿಂದೆಯೂ, ತಿರುಪ್ರಸಾದ ಭಕ್ತರನ್ನು ಆಕರ್ಷಿಸುತ್ತಿರಬೇಕು!

ಇವರಿಬ್ಬರಿಗಿಂತ ಮುನ್ನೂರು ವರ್ಷ ಮುಂಚೆ ಇದ್ದ ನಮ್ಮ ಪುರಂದರದಾಸರೂ ಕರ್ನಾಟಕ ಸಂಗೀತಗಾರರೇ ತಾನೆ? ಅವರ “ರಾಮನಾಮ ಪಾಯಸ” ಪ್ರಸಿದ್ಧವಾದದ್ದೇ. ಆದರೆ ನೈವೇದ್ಯ ಕೊಳ್ಳೊ ನಾರಾಯಣಸ್ವಾಮಿ ಎಂಬ ಆನಂದಭೈರವಿ ಕೃತಿಯಲ್ಲಿ ಪಾಯಸ ಮಾತ್ರವಲ್ಲ ಪೂರ್ತಿ ಮಾಧ್ವ ಬಫೆಯನ್ನೇ ಬಡಿಸಿದ್ದಾರೆ.

ಘಮ ಘಮಿಸುವ ಶಾಲ್ಯನ್ನ ಪಂಚ ಭಕ್ಷ್ಯ ಅಮೃತ ದಿವ್ಯ ಪರಮಾನ್ನವೋ
ಅರವತ್ತು ಶಾಕ ಲವಣ ಶಾಕ ಮೊದಲಾದ ಸರಸ ಮೊಸರು ಬುತ್ತಿ ಚಿತ್ರಾನ್ನವೋ
ಪರಮ ಮಂಗಳ ಅಪ್ಪಾವು ಅತಿರಸ ಹರುಷದಿಂದಲಿ ಇಟ್ಟ ಹೊಸ ತುಪ್ಪವೋ

ಇಷ್ಟು ಭಕ್ಷಗಳು ಸಾಕಾಗದೆಂದು ಕೊನೆಯಲ್ಲಿ ದಿವ್ಯ ಷಡ್ರಸಾನ್ನ, ಒಡೆಯಂಬೊಡೆ ದಧಿವಡೆಗಳ ತಿಂಥಿಣಿ(ರಾಶಿ) ಯನ್ನೂ ಪೇರಿಸಿದ್ದಾರೆ. ಇಲ್ಲಿ ನೈವೇದ್ಯ ನೆಪ ಮಾತ್ರಕ್ಕೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ, ಮಂಗಳಾರತಿ ಆದ ಮೇಲೆ ಎಲ್ಲವೂ ತಮ್ಮ ಊಟಕ್ಕೇ ಅಲ್ಲವೇ? ಓದಿ ಚಪ್ಪರಿಸುವಾಗ ಇತರರಲ್ಲಿ ಉದರ ವೈರಾಗ್ಯವನ್ನು ಹೀಯಾಳಿಸಿದ ದಾಸರೇ ಇದನ್ನೂ ಬರೆದಿದ್ದಾರೆಯೇ ಎಂದು ಯಾರಿಗೂ ಅನುಮಾನ ಬರಬೇಕು!

19ನೆಯ ಶತಮಾನದ ಕೊನೆಯ ಭಾಗದಲ್ಲಿ ತಿರುವೈಯ್ಯಾರಿನಲ್ಲಿ ಇಬ್ಬರು ಘಟಾನುಘಟಿ ಗಾಯಕರು ನೆಲೆಸಿದ್ದರು. ಒಬ್ಬರು ಪಟ್ಟಣಂ ಸುಬ್ರಹ್ಮಣ್ಯ ಐಯ್ಯರ್, ಇನ್ನೊಬ್ಬರು ಮಹಾ

ವೈದ್ಯನಾಥಯ್ಯರ್. ಇಬ್ಬರೂ ದಾಕ್ಷಿಣಾತ್ಯರೇ, ಆದರೆ ಸಂಗೀತದಲ್ಲಿ ಒಬ್ಬರು ಪೂರ್ವವಾದರೆ ಇನ್ನೊಬ್ಬರು ಪಶ್ಚಿಮ. ಅವರ ವೃತ್ತಿಕಲಹದಲ್ಲಿ ನಮ್ಮ ನಾಡಿನ ಖ್ಯಾತ ವಾಗ್ಗೇಯಕಾರ ಮೈಸೂರು ವಾಸುದೇವಾಚಾರ್ಯರು ಸಿಕ್ಕಿ ಒದ್ದಾಡಿದ್ದಾರೆ! ತಮ್ಮ ಆತ್ಮ ಚರಿತ್ರೆಯಲ್ಲಿ, ವೈದ್ಯನಾಥಯ್ಯರರ ಗಾಯನ ಜೂಜು ಕುದುರೆಯಂತೆ ನಾಗಾಲೋಟದಲ್ಲಿ ಓಡುತ್ತಿತ್ತು, ನಾಲ್ಕು ಕಾಲಗಳಲ್ಲಿ, ಮೂರು ಸ್ಥಾಯಿಗಳಲ್ಲಿ ಲೀಲಾಜಾಲವಾಗಿ ಸಂಚರಿಸುವ ಸಾಮರ್ಥ್ಯ ಎಂದು ವರ್ಣಿಸಿದ್ದಾರೆ. ತಮ್ಮ ಕಂಠದ ರಕ್ಷಣೆಗಾಗಿ ವೈದ್ಯನಾಥಯ್ಯರರು ವಿರಕ್ತ ಜೀವನವನ್ನು ಅಳವಡಿಸಿಕೊಂಡಿದ್ದರು. ಊಟದಲ್ಲಿ ಎಣ್ಣೆ ಮಸಾಲೆಗಳು ವರ್ಜ್ಯ. ಬದಲಿಗೆ ಅನ್ನ, ಮೆಣಸಿನ ಸಾರು, ಮಜ್ಜಿಗೆ ಮಾತ್ರ. ಮಧ್ಯಾಹ್ನ ನಿದ್ರೆ ಮಾಡುತ್ತಿರಲಿಲ್ಲ. ತದ್ವಿರುದ್ಧವಾಗಿ ಆಚಾರ್ಯರ ಗುರುಗಳು ಪಟ್ಟಣಂ ಅವರದು ಮಧ್ಯಮ ಕಾಲದಲ್ಲಿ ಗಾಂಭೀರ್ಯದ ಗಾಯನ. ಕೇಳುವವರಿಗೆ ಗಜರಾಜನ ಸಂಚಾರವನ್ನು ಕಂಡ ಅನುಭವ. ಅವರ ದಿನಚರಿ ಇನ್ನೊಂದು ಪರಿ. "ಹೊಟ್ಟೆಗಿಲ್ಲದೇ ಉಪವಾಸ ಬಿದ್ದು ಕಲಿತ ಸಂಗೀತದಿಂದ ಏನು ಸಾಧಿಸಿದಂತಾಯಿತು?" ಎಂಬ ತತ್ತ್ವ, ಮಧ್ಯಾಹ್ನ ಸ್ವೇಚ್ಛೆಯಾಗಿ ಎಣ್ಣೆ ತುಪ್ಪಗಳಿಂದ ಘಮಘಮಿಸುವ ಭರ್ಜರಿ ಹಬ್ಬದೂಟವನ್ನು ಮುಗಿಸಿ, ನಾಲ್ಕು ತಾಸು ಮಲಗಿ ಎದ್ದವರು ಸಾಯಂಕಾಲ ಆರು ತಾಸು ಕಚೇರಿ ಮಾಡಿ ಜಯಭೇರಿ ಹೊಡೆದು ಬರುತ್ತಿದ್ದರು. "ವಾಸು, ನಮ್ಮ ಶಾರೀರ ನಾವು ಹೇಳಿದಂತೆ ಕೇಳಬೇಕೋ, ನಾವು ಅದಕ್ಕೆ ಅಧೀನವಾಗಿರಬೇಕೋ?" ಎಂದು ಕೇಳುತ್ತಿದ್ದರಂತೆ. ಗುರುಗಳಿಂದ ಕಲಿತಿದ್ದರಲ್ಲಿ ಇದನ್ನಂತೂ ಶ್ರದ್ಧೆಯಿಂದ ಪಾಲಿಸಿದ್ದೇನೆ ಎಂದು ವಾಸುದೇವಾಚಾರ್ಯರು ಬರೆದಿದ್ದಾರೆ.

ಪಟ್ಟಣಂ ಅವರ ಶಿಷ್ಯ ಪರಂಪರೆಯಲ್ಲಿ ವಾಸುದೇವಾಚಾರ್ಯರು ಕೊನೆಯವರು. ಮೊದಲಿನವರು ರಾಮನಾಡ ಶ್ರೀನಿವಾಸ ಅಯ್ಯಂಗಾರರು. "ಪೂಚಿ" ಎಂಬ ವಿಶೇಷಣದಿಂದ ಪ್ರಸಿದ್ಧರಾಗಿದ್ದರು. ವಯಸ್ಸಿನಲ್ಲಿ ಕಿರಿಯರಾಗಿದ್ದರೂ ವಾಸುದೇವಾಚಾರ್ಯರ ಸಂಗೀತ ಸಾಧನೆ ಮತ್ತು ಕೃತಿರಚನೆಯ ಪ್ರತಿಭೆಯ ಬಗ್ಗೆ ಪಟ್ಟಣಂ ಮತ್ತು ಪೂಚಿಯವರಿಗೆ ಗೌರವ ಭಾವನೆ ಇತ್ತು. ಒಂದು ಸಲ ವಾಸುದೇವಾಚಾರ್ಯರು ರಾಮನಾಡಿನಲ್ಲಿ ಪೂಚಿಯವರ ಮನೆಗೆ ಹೋಗುವ ಸಂದರ್ಭ ಒದಗಿತು. ಬೆಳಿಗ್ಗೆ ಅವರು ಹೋದಾಗ ಪೂಚಿಯವರು ಹಲವಾರು ಶಿಷ್ಯರಿಗೆ ಪಾಠ ಹೇಳುತ್ತಿದ್ದರು. ಗುರುಬಂಧುವನ್ನು ಆದರದಿಂದ ಸ್ವಾಗತಿಸಿ ಶಿಷ್ಯರಿಗೆ ಪರಿಚಯಿಸಿದರು. ಶಿಕ್ಷಣ ಮುಂದುವರೆಯಿತು. ಸ್ವಲ್ಪ ಹೊತ್ತಿಗೆಲ್ಲ ಪಾಠ ಮುಗಿದು ಪೂಚಿಯವರು ಹಿಂದಕ್ಕೆ ಒರಗಿ ಕೂತರು. ಅದಕ್ಕೆ ಕಾಯುತ್ತಿದ್ದ ಶಿಷ್ಯನೊಬ್ಬ ಒಳಗೆ ಹೋಗಿ ಪರಾತದ ತುಂಬ 20–25 ಇಡ್ಲಿಗಳನ್ನು ತಂದಿಟ್ಟ. ಅದಕ್ಕೆ ಒಂದು ಪಾತ್ರೆಯಷ್ಟು ಚಟ್ನಿ, ಇನ್ನೊಂದು ತಪ್ಪಲೆಯ ತುಂಬ ತುಪ್ಪ. ವಾಸುದೇವಾಚಾರ್ಯರು ಬೆರಗಾಗಿ ನೋಡುತ್ತಿದ್ದಂತೆ ತುಪ್ಪವನ್ನು ಇಡ್ಲಿಗಳ ಮೇಲೆ ಸುರಿದುಕೊಂಡು ಪೂಚಿಯವರು ಒಬ್ಬರೇ ಇಡೀ ಪರಾತವನ್ನು ಖಾಲಿ ಮಾಡಿದರು! ಆಮೇಲೆ ಒಂದು ಚೆಂಬಿನ ತುಂಬ ಬಿಸಿಬಿಸಿ ಕಾಫಿ. ಅದನ್ನು ಎತ್ತಿ ತುಟಿಗೆ ತಾಗಿಸದಂತೆ ಬಗ್ಗಿಸಿಕೊಂಡವರು ಒಂದೇ ಗುಟುಕಿಗೆ ಮುಗಿಸಿದ್ದರು. ಇವರು ಮಾಡುವ ರಾಕ್ಷಸ ಸಾಧನೆಗೆ ತಕ್ಕ ದೇಹಪೋಷಣೆ ಎಂದುಕೊಂಡರು ಆಚಾರ್ಯರು.

ಈ ಸಂದರ್ಭದಲ್ಲಿ ಇನ್ನೊಂದು ಸಂವಾದ ನಡೆಯಿತು. "ಇಷ್ಟು ಶಿಷ್ಯರನ್ನು ನೋಡಿದಿರಲ್ಲ, ಇವರಲ್ಲಿ ಯಾರು ನಿಮಗೆ ಅತ್ಯಂತ ಭರವಸೆ ಮೂಡಿಸಿದ್ದಾರೆ?" ಪೂಚಿಯವರು ಕೇಳಿದರು. "ಎಲ್ಲರೂ ಪ್ರತಿಭಾವಂತರೇ. ಆದರೆ ಕೊನೆಯಲ್ಲಿ ಕೂತಿದ್ದನಲ್ಲ ಉತ್ತಮ ಹಾಡುಗಾರಿಕೆ ಅವನದು. ಅವನ ಮೇಲೆ ಹೆಚ್ಚು ಭರವಸೆ ಇಡಬಹುದಾಗಿದೆ" ಎಂದರು ಆಚಾರ್ಯರು.

"ಪ್ರತಿಭಾವಂತನೇ ಇರಬಹುದು. ಆದರೆ ಚುರುಕಿಲ್ಲ, ಏನೋ ಸ್ವಲ್ಪ ಮಂಕು"

"ಆತಂಕ ಪಡಬೇಡಿ. ತುಂಬು ಮನಸ್ಸಿನಿಂದ ಧಾರೆ ಎರೆಯಿರಿ" ವಾಸುದೇವಾಚಾರ್ಯರು ಭರವಸೆ ನೀಡಿದರು. ಆ ಶಿಷ್ಯನೇ ಖ್ಯಾತ ಗಾಯಕ ಅರಿಯಾಕ್ಕುಡಿ ರಾಮಾನುಜ ಅಯ್ಯಂಗಾರರು.

ತಾತನ ತಿಂಡಿಪೋತತನ ಮೊಮ್ಮಕ್ಕಳಿಗೆ ಬರುವುದು ಮಾಮೂಲು ತಾನೇ? ವಾಸುದೇವಾಚಾರ್ಯರ ಮೊಮ್ಮಗ ಎಸ್ ಕೃಷ್ಣಮೂರ್ತಿಯವರೂ ಸಂಗೀತದ ವಾತಾವರಣದಲ್ಲಿ ಬೆಳೆದ ನಾದೋಪಾಸಕರು. ಆಕಾಶವಾಣಿಯಲ್ಲಿ ನಿರ್ದೇಶಕರಾಗಿ 30 ವರ್ಷ ಸಂಗೀತಕಾರರೊಡನೆ ಆತ್ಮೀಯವಾಗಿ ಬೆರೆತು ಅವರ ರಸಿಕತೆಯನ್ನು ಹತ್ತಿರದಿಂದ ಕಂಡಿದ್ದಾರೆ. ಒಮ್ಮೆ ಆರ್ ಕೆ ಶ್ರೀಕಂಠನ್ ಮತ್ತು ಕಲಾವಿದರ ದೊಡ್ಡ ತಂಡದೊಡನೆ ದೆಹಲಿಗೆ ರೈಲು ಪ್ರವಾಸದ ಸಂದರ್ಭ ಒದಗಿ ಬಂತು. ರೈಲು ಹೊರಡುತ್ತಿದ್ದಂತೆ ಶ್ರೀಕಂಠನ್ ಅವರ ಭಾರಿ ಲಗ್ಗೇಜಿನಲ್ಲಿ ಅರ್ಧದಷ್ಟು ತಿಂಡಿಗಳೇ ಇದ್ದವೆಂದು ಕೃಷ್ಣಮೂರ್ತಿಗಳ ಮೂಗಿನ ಗಮನಕ್ಕೆ ಬಂತು. ಪರಿಶುದ್ಧವಾದ ಬೆಣ್ಣೆ ಕಾಯಿಸಿದ ತುಪ್ಪದಲ್ಲಿ ಮಾಡಿದ ಅಪ್ಪಟ ಅಡುಕಲೆ ಅಡುಗೆ. ದ್ರಾಕ್ಷಿ ಬಾದಾಮಿಗಳಿಂದ ಮೈಯುಬ್ಬಿದ ರವೆ ಉಂಡೆಗಳು, ತುಪ್ಪ ಜಿನುಗುತ್ತಿದ್ದ ಬಾದಾಮಿ ಹಲ್ವ, ಗೋಡಂಬಿಗಳಿಂದ ತುಂಬಿ ತುಳುಕುತ್ತಿದ್ದ ಖಾರದವಲಕ್ಕಿ, ಗರಿಗರಿ ಕೋಡುಬಳೆ, ಚಕ್ಕುಲಿಗಳ ವರ್ಣನೆಯನ್ನು ಕೇಳಿಯೇ ಬಾಯಲ್ಲಿ ನೀರೂರಬೇಕು. ಕೃಷ್ಣಮೂರ್ತಿಗಳು ತಕ್ಷಣ ಕಾರ್ಯತತ್ಪರರಾದರು. ಮೊಟ್ಟ ಮೊದಲಿಗೆ, ಜೊತೆಗೆ ಬಂದಿದ್ದ ಸುಮಾರು 35 (!) ಜೂನಿಯರ್ ಕಲಾವಿದರಿಂದ ಕಳಚಿಕೊಂಡು ಮೆಲ್ಲಗೆ ಇನ್ನೊಂದು ಕಂಪಾರ್ಟಮೆಂಟಿಗೆ ವರ್ಗಾಯಿಸಿಕೊಂಡರು. ಮುಂದಿನದನ್ನು ಹೇಳಬೇಕಿಲ್ಲ. ಎರಡು ದಿನ ಇಬ್ಬರೇ ಪಟ್ಟಾಗಿ ಸಂಕೇತಿ ಖಾದ್ಯಗಳನ್ನು ಸವಿಯುತ್ತ ಸಂಗೀತ, ಸರಸ ಸಂಭಾಷಣೆಗಳಲ್ಲಿ ಕಳೆದರು.

ಘನ ವಿದ್ವಾಂಸರು ಊಟ ತಿಂಡಿಗಳ ಬಗ್ಗೆ ಬರೀ ಮಾತನಾಡಿದ್ದರೆ ಅವುಗಳನ್ನು ಇನ್ನೂ ಮೇಲಿನ ಹಂತಕ್ಕೆ ಏರಿಸಿದ ಶ್ರೇಯಸ್ಸು ವಿದುಷಿಯರಿಗೆ ಸಲ್ಲಬೇಕು. ರಾಗ, ರಸಂ ಎರಡರಲ್ಲಿಯೂ ರಸ ತುಂಬುವ ಕಲಾವಂತಿಕೆ ಅವರಿಗೆ ಮಾತ್ರ ಸಾಧಿಸಿದೆ. ಖ್ಯಾತ ಗಾಯಕಿ ಎಂ ಎಲ್ ವಸಂತಕುಮಾರಿಯವರ ದೃಷ್ಟಿಯಲ್ಲಿ ಸಂಗೀತ, ಚಿತ್ರ, ಪಾಕ ಮೂರು ಒಂದೇ ಮಟ್ಟದ ಕಲೆಗಳು. ಸಂಗೀತ, ಚಿತ್ರಗಳಲ್ಲಿ ಸ್ವರ, ವರ್ಣಗಳನ್ನು ಕರಾರುವಾಕ್ಕಾಗಿ, ಆದರೆ ಸೃಜನಶೀಲತೆಯೊಂದಿಗೆ ಸಂಯೋಜಿಸಿ ಕಲಾಕೃತಿಗಳನ್ನು ಸೃಷ್ಟಿಸಬೇಕು. ಕೇಳಲು ಇಂಪು, ನೋಡಲು ತಂಪು. ಪಾಕಕಲೆಯಲ್ಲೂ ಅಷ್ಟೇ, ಪ್ರತಿಯೊಂದು ಭಕ್ಷ್ಯಕ್ಕೂ ಅದರದೇ ಮನೋಧರ್ಮವಿದೆ. ಸರಿಯಾದ ಪ್ರಮಾಣದಲ್ಲಿ ಪರಸ್ಪರ ಪೂರಕವಾಗಿ ಪದಾರ್ಥಗಳನ್ನು ಬೆರೆಸಿದರೆ ಮಾತ್ರ ಅದರ ಕಂಪು ಅರಳುತ್ತದೆ. ಅವರ ಶಿಷ್ಯೆ ಸುಧಾ ರಘುನಾಥನ್ "ಎಂಎಲ್ವಿ ಅಮ್ಮ ನನಗೆ ಸಂಗೀತದಷ್ಟೇ ಉತ್ಸಾಹದಿಂದ ಅಡುಗೆಯ ಪಾಠಗಳನ್ನೂ ಮಾಡುತ್ತಿದ್ದರು. ಖಾದ್ಯಗಳನ್ನು ನನ್ನಿಂದಲೇ ಮಾಡಿಸುತ್ತಿದ್ದರು. ಎರಡೂ ಶಾಸ್ತ್ರಗಳನ್ನು ಒಟ್ಟಿಗೆ ಅವರಿಂದ ಕಲಿತಿದ್ದೇನೆ" ಎಂದು ಹೇಳುತ್ತಾರೆ. ಆದರೆ ಸುಧಾ ಗುರುವಿಕಿ ಮಿಂಚಿನ ಶಿಷ್ಯರಾಲು. ಎಂಎಲ್ವಿ ಅವರಿಂದ ಕಲಿತ ಸ್ವರ, ಸ್ವಾದಗಳನ್ನು ತಮ್ಮದೇ ಶೈಲಿಯಲ್ಲಿ ಮೇಳೈಸಿದ್ದಾರೆ ಅವರ ಯೂಟ್ಯೂಬಿನ ಚಾನೆಲ್ಲಿನಲ್ಲಿ ಪಾಕಶಾಸ್ತ್ರಕ್ಕೆ ಒಂದು ಪ್ರತ್ಯೇಕ ಭಾಗವೇ ಇದೆ. ತಮ್ಮ ತಾಯಿ ಚೂಡಾಮಣಿಯ ಹೆಸರಿನ ಹಿಂದೆ ತಮ್ಮ ಮೊದಲಕ್ಷರವನ್ನು ಸೇರಿಸಿ ಅದಕ್ಕೆ ಸೂಡಾಸ್ ಕಿಚನ್ ಎಂದು ಕರೆದಿದ್ದಾರೆ. ಕೇವಲ ದಕ್ಷಿಣಾದಿ ಅಥವಾ ಸಾಂಪ್ರದಾಯಿಕ ಅಡುಗೆಯಲ್ಲ, ಪನೀರ್, ಪರೋಟ, ಅಣಬೆ, ಸಾಬೂದಾಣೆ ಎಂದು ಹಲವಾರು ಖಾದ್ಯಗಳನ್ನು ತಾವೇ ನಿಂತು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಅವರ ನಿರೂಪಣೆ ಅಂದರೆ ಬರಿ ಹಿಟ್ಟು ಕಲಸಿ ಸೌಟು ಆಡಿಸುವುದಲ್ಲ.

ಬೇಗಡಾ, ಮಂದಾರಿ ರಾಗಗಳಿಗೂ ಗೋಡಂಬಿ ಬಜ್ಜಿಗೂ ಏನು ಸಂಬಂಧ? ಸೂಡಾ

ಕಿಚನ್ನಿನ ವೈಶಿಷ್ಟ್ಯವೆಂದರೆ ಖಾದ್ಯಗಳನ್ನು ಮಾಡುವುದು ಮಾತ್ರವಲ್ಲ ಹಾಡಿಯೂ ತೋರಿಸುವುದು. ಪ್ರತಿಯೊಂದು ಪದಾರ್ಥಕ್ಕೂ ಒಂದು ರಾಗ ಅಥವಾ ಕೃತಿಯೊಡನೆ ಸಂಬಂಧ ಕಲ್ಪಿಸಿದ್ದಾರೆ. ಅದಕ್ಕೆ ಶಾಸ್ತ್ರೀಯ ಆಧಾರವೇನೂ ಇಲ್ಲ. ನಾಮಸಾಮ್ಯ ಧ್ವನಿಸಾಮ್ಯಗಳನ್ನು ಹೊಂದಿಸಿದರಾಯಿತು. ಗೋಡಂಬಿಯ ತಮಿಳು ರೂಪ ಮುಂದ್ರಿ, ಪಕೋಡಕ್ಕೆ ಹತ್ತಿರವಾದದ್ದು ಬೇಗಡ. ಮುಂದ್ರಿ ಪಕೋಡವನ್ನು ಮಾಡುತ್ತಿರುವಾಗ ಮಂದಾರಿ, ಬೇಗಡ ರಾಗದ ಝುಲಕುಗಳನ್ನೂ ಸುಧಾ ತೋರಿಸುತ್ತಾರೆ. ಮೂಲಂಗಿ ಪರೋಟ ಮಾಡುವ ಸಂದರ್ಭದಲ್ಲಿ ಲತಾಂಗಿ ರಾಗವನ್ನು ಪರಿಚಯಿಸುತ್ತಾರೆ. ಏಳು ತರಕಾರಿಗಳನ್ನು ಕಲಸಿ ಕರಿದ ಕಟ್ಲೆಟ್ಟಿಗೆ "ಸಪ್ತಸ್ವರ ಕಟ್ಲೆಟ್"ಗಿಂತ ಸೂಕ್ತವಾದ ಹೆಸರು ಯಾವುದಿದೆ? ಮಾಡುವಾಗ ಜಗನ್ಮೋಹಿನಿ ರಾಗದಲ್ಲಿ ತ್ಯಾಗರಾಜರ "ಶೋಭಿಲ್ಲು ಸಪ್ತಸ್ವರ" ಹಾಡುತ್ತಿದ್ದರೆ ಇನ್ನಷ್ಟು ರುಚಿ ಬರುತ್ತದೆ. ಸಾಬುದಾನ ವಡೆಗೆ ಹತ್ತಿರದ ಕೃತಿಗಳು "ಸಾಮದಾನ" ಮತ್ತು "ವಡವರ್ರೈಯ್ಯೈ". ಹಿಟ್ಟು ಕಲಸುವಾಗ ತ್ಯಾಗರಾಜರ ಕಾಪಿನಾರಾಯಣಿ "ಸರಸ ಸಾಮದಾನ ಚತುರ", ನಂತರ ಕರಿಯುವಾಗ "ವಡವರ್ರೈಯ್ಯೈ ಮತ್ತಾಕ್ಕಿ" ರಾಗಮಾಲಿಕೆಯನ್ನು ಹಾಡಿದರೆ ವಡೆ ಇನ್ನಷ್ಟು ಗರಿಗರಿಯಾಗುತ್ತದಲ್ಲವೇ? ಹಿನ್ನೆಲೆಯಲ್ಲಿ, ಕಾದೆಣ್ಣೆಗೆ ಹಾಕಿದ ಹಿಟ್ಟು ಲಯಬದ್ಧವಾಗಿ ಚಟಪಟಗುಟ್ಟುತ ಸಿಡಿಯುತ್ತಿರುತ್ತದೆ. ರಾಗಬದ್ಧ ಖಾದ್ಯಕ್ಕೆ ತಕ್ಕ ಪಕ್ಕವಾದ್ಯ!

***

ಧಾರವಾಡದ ಒಬ್ಬ ಮಹಾನ್ ಗಾಯಕರಿಂದ ಆರಂಭಿಸಿದ ಉದರೋಪಾಸನೆಯ ಆಖ್ಯಾನಗಳನ್ನು ಅದೇ ಊರಿನ ಇನ್ನೊಬ್ಬ ಮಹಾನ್ ಗಾಯಕರಿಂದ ಮುಗಿಸೋಣ. ಪಂಡಿತ ಬಸವರಾಜ ರಾಜಗುರು ಗಾಯಕಿ ಮಾತ್ರವಲ್ಲ ಎಲ್ಲ ವಿಷಯಗಳಲ್ಲಿಯೂ ರಸಿಕರ ರಾಜರು. ತಮ್ಮ ವಿಶಿಷ್ಟ ಶೈಲಿಯಿಂದ ಸಂಗೀತ ಪ್ರೇಮಿಗಳನ್ನು ಸೂರೆಗೊಂಡರೂ ಪ್ರಸಿದ್ಧಿಗೆ ಹಪಾಪಿಸಿದವರಲ್ಲ. ಅಧ್ಯಾತ್ಮಿಕ ಆಡಂಬರಗಳ ಸೋಗು ಹಾಕಿದವರಲ್ಲ. "ಹಾಡುವುದು ತಿನ್ನುವುದು ಮಲಗುವುದು ಇಷ್ಟೇ ನನ್ನ ಜೀವನ" ಎಂದು ಸರಳವಾಗಿ ಹೇಳಿಕೊಳ್ಳುತ್ತಿದ್ದರಂತೆ. ತಾರುಣ್ಯದಲ್ಲಿ ಅವರೂ ಗುರುಗಳನ್ನು ಅರಸಿಕೊಂಡು ಉತ್ತರ ಭಾರತದ ಪರ್ಯಟನ ಮಾಡಿದವರು. ಅದೃಷ್ಟಕ್ಕೆ ಅವರಿಗೆ ಸಿಕ್ಕ ಗುರುಗಳೂ ಭೋಜನಪ್ರಿಯರೇ. ಆಗಿನ ಸಿಂಧ ಪ್ರಾಂತದಲ್ಲಿ ಒಬ್ಬ ಮುಸ್ಲಿಮ್ ಗುರುಗಳು ಗಾಯಕಿಯಲ್ಲಿ ಮಾತ್ರವಲ್ಲ ಗರಡಿ ಮನೆಯ ಉಸ್ತಾದರೂ ಆಗಿದ್ದರು. ಮನೆಯ ಅಂಗಳದಲ್ಲಿ ಮಲ್ಲಖಂಬದ ಖಾಸಗೀ ಆಖಾಡ. ದಿನ ಬೆಳಗಾದರೆ ಮೊದಲಿಗೆ ದಂಡವನ್ನು ತಿರುಗಿಸುವ ಕಸರತ್ತುಗಳು. ಅನಂತರ ರಿಯಾಝು, ಅಂದರೆ ಸ್ವರಗಳನ್ನು ತಿರುವುವ ಕಸರತ್ತುಗಳ ಅಭ್ಯಾಸ. ಎರಡಕ್ಕೂ ಪೋಷಕವಾಗಿ ಪರೋಟ, ಜಿಲೇಬಿ, ಮಲಾಯಿದಾರ ಹಾಲಿನ ಉಪಹಾರ!

ಒಂದು ಕಾಲಕ್ಕೆ ಭಾರತದ ಉದ್ದಕ್ಕೂ ಸಂಚರಿಸಿ ಸಂಗೀತ ಕಾರ್ಯಕ್ರಮಗಳನ್ನು ಮಾಡಿ ಖ್ಯಾತರಾಗಿದ್ದರು ರಾಜಗುರು. ಹಲವು ಹತ್ತು ರಾಗಗಳಲ್ಲಿ ನೂರಾರು ಅಪರೂಪದ ಬಂದೀಶುಗಳ ಸಂಗ್ರಹವೇ ಅವರಲ್ಲಿತ್ತು. ಜೊತೆಗೆ, ಯಾವ ಊರಿನಲ್ಲಿ ಏನು ರಸಕವಳ ಸಿಗುತ್ತದೆ ಎಂಬ ಮಾಹಿತಿ ಸಹ! ಕೊಲ್ಕತ್ತದ ಬಂಗಾಲಿ ಮಿಠಾಯಿ, ಪುಣೆಯ ಲಕ್ಷ್ಮಿನಾರಾಯಣ ಚಿವಡಾ, ಯಲ್ಲಾಪುರದ ರಸಬಾಳೆಯಿಂದ ದಾವಣಗೇರಿ ಒರಿಜಿನಲ್ ಬೆಣ್ಣೆ ದೋಸೆಯ ವರೆಗೆ ಎಲ್ಲವನ್ನೂ ಸವಿದು ಬಲ್ಲವರು. ತಾರುಣ್ಯದಲ್ಲಿ, ಜಿದ್ದು ಕಟ್ಟಿ ಉದ್ದಿನ ವಡೆ ಕರಿಗಡುಬುಗಳನ್ನು ತಿಂದು ಗೆಲ್ಲುವುದು, ಹತ್ತು ಹೋಳಿಗೆಗಳ ಮೇಲೆ ಸೇರು ತುಪ್ಪ ಹಾಕಿಕೊಂಡು ತಿಂದು ಬಹುಮಾನ ಗಳಿಸುವುದು ಅವರ ಮಾಮೂಲಿ ಹವ್ಯಾಸಗಳಾಗಿದ್ದವು. ಸ್ವಾತಂತ್ರ್ಯದ ನಂತರ ಮದುವೆಯಾಗಿ ಧಾರವಾಡದಲ್ಲಿ ನೆಲೆಸಿದ ಮೇಲೆ ಉತ್ತರದ ಕಾರ್ಯಕ್ರಮಗಳನ್ನು ಕಡಿಮೆ ಮಾಡಿದರು. ಬದಲಿಗೆ ಗಟ್ಟಿಯಾಗಿ ತಮ್ಮ

ಮಣ್ಣಿನಲ್ಲಿ ಬೇರೂರಿ ಉತ್ತರ ಕರ್ನಾಟಕ, ಮಹಾರಾಷ್ಟ್ರ ಹೈದರಾಬಾದು ಪ್ರಾಂತಗಳಲ್ಲಿ ನಿರಂತರ ಸಂಚಾರ, ಸಂಗೀತ ಪ್ರಚಾರ ನಡೆಸಿದರು. ಈ ಪ್ರಾಂತಗಳಲ್ಲಿ ಅವರಷ್ಟು ಪ್ರವಾಸ ಕೈಗೊಂಡ ಗಾಯಕರು ಇನ್ನೊಬ್ಬರಿಲ್ಲ.

ಪ್ರವಾಸದ ವೈಖರಿಯೂ ರಸವತ್ತಾದುದು. ತಮ್ಮ ಕಂಠದ ಜೋಪಾನ, ನಾಲಿಗೆಯ ಚಪಲ

ಎರಡನ್ನೂ ತೂಗಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಪ್ರವಾಸಕ್ಕೆ ಹೊರಟರೆ ಜೊತೆಯಲ್ಲಿ ಒಂದು ಹೊರೆ ಲಗೇಜು. ಅವುಗಳಲ್ಲಿ ಬೇರೆ ಯಾವ ವಸ್ತುಗಳಿಗಿಂತ ಖಾದ್ಯಗಳೇ ಜಾಸ್ತಿ. ತಾವು ತಿನ್ನುವುದು ಮಾತ್ರವಲ್ಲ, ಜೊತೆಗೆ ಬರುವ ಶಿಷ್ಯಂದಿರು ಸಾಥಿದಾ-ರರಿಗೆಲ್ಲ ಕೊಟ್ಟು ಸಂಭ್ರಮಿ-ಸುತ್ತಿದ್ದರು. ರೈಲಿನಲ್ಲಿದ್ದರೆ ಇತರ ಪ್ರವಾಸಿಗಳಿಗೂ ಒತ್ತಾಯ ಮಾಡಿ ತಿನಿಸುತ್ತಿದ್ದರು.

ಅವರ ಗಂಟಿನಲ್ಲಿ ಒಂದು ಪದಾರ್ಥವನ್ನು ಮಾತ್ರ ಯಾರೊಂದಿಗೂ ಹಂಚಿಕೊಳ್ಳುತ್ತಿದ್ದಿಲ್ಲ– ಕುಡಿಯುವ ನೀರು! ಬೇರೆ ಕಡೆ ನೀರು ಕುಡಿದರೆ ಗಂಟಲು ಕೆಟ್ಟೀತೆಂದು ಎಲ್ಲ ಕಡೆಗೂ ತಮ್ಮ ಧಾರವಾಡದ ಮನೆಯ ಹಿತ್ತಲ ಭಾವಿಯ ನೀರನ್ನು ತಿರುಪಣಿ ತಂಬಿಗೆಗಳಲ್ಲಿ ತುಂಬಿ ಒಯ್ಯುತ್ತಿದ್ದರು. ಕಟ್ಟಿಕೊಟ್ಟ ತಿಂಡಿ, ತುಂಬಿಕೊಂಡ ನೀರು ಎಷ್ಟು ದಿನ ಬಂದೀತು? ಎಂಥ ದೀರ್ಘ ಪ್ರವಾಸದ ನಡುವೆಯೂ ಒಂದು ದಿನ ಊರಿಗೆ ಬರುವ ವ್ಯವಸ್ಥೆ ಮಾಡಿಕೊಂಡು ನೀರು, ತಿಂಡಿಗಳ ಸರಬರಾಜನ್ನು ರಿಫಿಲ್ ಮಾಡಿಕೊಂಡು ಮುಂದುವರೆಸುತ್ತಿದ್ದರು.

ಬೆಂಗಳೂರು ಮೈಸೂರುಗಳ ಕಡೆ ಪ್ರವಾಸದಲ್ಲಿ ಊಟಕ್ಕೆ ಇನ್ನೊಂದು ಸಮಸ್ಯೆ. 70, 80ರ ದಶಕದ ಕಾಲ. ಈಗಿನಂತೆ ಓಣಿಗೆರಡು ಜೋಳದ ರೊಟ್ಟಿ ಖಾನಾವಳಿಗಳ ಹಾವಳಿ ಇರಲಿಲ್ಲ. ದಿನಕ್ಕೆ ಮೂರು ಹೊತ್ತು ಹೋಟಲಿನವರು ಕೊಡುತ್ತಿದ್ದ ಚಿತ್ರಾನ್ನಗಳು ಅವರಿಗೆ ಒಗ್ಗುತ್ತಿರಲಿಲ್ಲ. ಬದಲಿಗೆ ಭಕ್ಕರಿ ಪಲ್ಲೆ ಮಾಡಿಕೊಳ್ಳಲು ಬೇಕಾದ ಕಾಳು ಕಡಿ ಜಿನಸಿಗಳು ಮಾತ್ರವಲ್ಲ, ಒಂದು ಚಿಮಣಿ ಎಣ್ಣೆಯ ಸ್ಟೋವನ್ನೂ ಊರೂರಿಗೆ ಒಯ್ಯುತ್ತಿದ್ದರು. ದಿನವೂ ಶಿಷ್ಯರಿಂದ ಗುರುಪಾಕ. ರೂಮಿನಲ್ಲಿ ಚಿಮಣಿ ಸ್ಟೋವಿನ ಭರ್ ಭರ್ ಭರಾಟೆ ಕೇಳಿ ಹೋಟಲಿನವರು ತಕರಾರು ಮಾಡಬಾರದೆಂದು, ಅಡುಗೆ ನಡೆದಾಗ ಒಬ್ಬರು ಸತತ ಹಾರ್ಮೋನಿಯಂ ನುಡಿಸುತ್ತಿದ್ದರೆ, ಭಕ್ಕರಿ ಬಡಿಯುವ ಸದ್ದನ್ನು ಅಡಗಿಸಲು ಇನ್ನೊಬ್ಬರು ತಬಲಾ ಬಾರಿಸುತ್ತಿದ್ದರು. ಇದರಲ್ಲಿ ಉತ್ಪ್ರೇಕ್ಷೆ ಎಳ್ಳಷ್ಟೂ ಇಲ್ಲ. ಒಂದು ಸಲ ಬೆಂಗಳೂರ ಹೊಟೆಲ್ಲಿನಲ್ಲಿ ಅವರನ್ನು ಭೆಟ್ಟಿಯಾಗಲು ಹೋದಾಗ ನಾನೇ ಕಣ್ಣಾರೆ ಕಂಡಿದ್ದೇನೆ.

ಕೊನೆಯ ವರೆಗೂ ರಾಜಗುರು ಅವರಿಗೆ ಅದೇಕೊ ವಿಮಾನ ಪ್ರವಾಸ ಒಗ್ಗಲಿಲ್ಲ. ಎಷ್ಟು ದೂರವಿದ್ದರೂ ಅವರು ಹೋಗುತ್ತಿದ್ದುದು ರೈಲಿನಲ್ಲೇ. ಪದ್ಮಭೂಷಣ ಪ್ರಶಸ್ತಿ ಬಂದಾಗಲೂ ದಿಲ್ಲಿಗೆ ರೈಲಿನಲ್ಲಿಯೇ ಹೋಗಿ ಬಂದಿದ್ದಾರೆ. ಆದರೆ 60, 70ರ ದಶಕಗಳಲ್ಲಿ ದಿಲ್ಲಿಯ ಯಾತ್ರೆ ಸಣ್ಣ ಸಾಹಸವೇ ಆಗಿತ್ತು. ಧಾರವಾಡದಿಂದ ಒಂದು ದಿನ ಪುಣೆಯ ವರೆಗೆ ಪ್ರವಾಸ ಮಾಡಬೇಕು,

ಅಲ್ಲಿಂದ ಇನ್ನೊಂದು ದಿನ ಪುಣೆ–ದಿಲ್ಲಿ ಎಕ್ಸಪ್ರೆಸ್ ರೈಲಿನ ಯಾತ್ರೆ. ನಡುವೆ ಊಟ? ಮನೆಯಿಂದ ಒಂದು ದಿನಕ್ಕಾಗುವಷ್ಟು ಪದಾರ್ಥಗಳನ್ನು ಕಟ್ಟಿಕೊಂಡು ಹೋಗಬಹುದು. ಅದು ಮುಗಿದ ಮೇಲೆ ಕಂಡ ಕಂಡ ಸ್ಟೇಶನ್ನುಗಳಲ್ಲಿ ಇಳಿದು ಪಕೋಡ ಪಲಾವು ತಿನ್ನುವುದಂತೂ ಸಾಧ್ಯವಿರಲಿಲ್ಲ. ಅದಕ್ಕೆ ಇನ್ನೊಂದು ವ್ಯವಸ್ಥೆ ಮಾಡಿಕೊಂಡಿದ್ದರು. ತಾವು ಹೋಗುವುದಕ್ಕೆ ಒಂದೆರಡು ದಿನ ಮುಂಚಿತ ಶಿಷ್ಯನನ್ನೋ ಮಗನನ್ನೋ ಪುಣೆಗೆ ಕಳಿಸುತ್ತಿದ್ದರು. ಅವನು ಪುಣೆಯಲ್ಲಿ ಅವರಿಗೆ ಇಷ್ಟವಾದ ಹೋಟಲಿನಿಂದ ಊಟ ತಿಂಡಿಗಳನ್ನು ಕಟ್ಟಿಸಿಕೊಂಡು ಸ್ಟೇಶನ್ನಿಗೆ ಬಂದು ಅವರೊಡನೆ ರೈಲು ಹತ್ತಬೇಕು. ಅಲ್ಲಿಂದ ದಿಲ್ಲಿಯ ವರೆಗೆ ಚಿಂತೆಯಿರಲಿಲ್ಲ. ವಾಪಸ್ಸು ಬರುವಾಗಲೂ ಅದೇ ವ್ಯವಸ್ಥೆ, ತಿರುಗು ಮುರುಗಾಗಿ.

ಮುಂಬಯಿ ಪುಣೆಗಳಲ್ಲಿ ಸುಮಾರು ವರ್ಷ ಇದ್ದ ಪ್ರಯುಕ್ತ ರಾಜಗುರು ಅವರಿಗೆ ಅಲ್ಲಿ ಊಟದ ಸಮಸ್ಯೆ ಇರಲಿಲ್ಲ. ಬದಲಿಗೆ ಒಳ್ಳೊಳ್ಳೆಯ ಜಾಗಗಳೆಲ್ಲ ಗೊತ್ತಿದ್ದವು. ಹೆಚ್ಚಿನ ಸಂಗೀತಗಾರಂತೆ ಅವರಿಗೂ ಕೆನೆಗಟ್ಟಿದ ಬಿಸಿ ಹಾಲಿನ ಖಯಾಲಿ. ಒಮ್ಮೆ ಮುಂಬಯಿಯಲ್ಲಿ ಕ್ಯಾಂಪು ಮಾಡಿದಾಗ ರಾತ್ರಿ ಊಟವಾದ ಮೇಲೆ ಹಾಲು ಕುಡಿಯುವ ಲಹರಿ ಬಂತು ತಕ್ಷಣ ಮಗನೊಡನೆ ಹೊರ ಬಿದ್ದರು. ಅವರಿದ್ದ ಹೋಟಲಿನ ಎದುರಿಗೇ ಒಂದು ಅಂಗಡಿ, ಜೊತೆಗಿದ್ದ ಮಗ ನಿಜಗುಣರು ಅತ್ತ ಹೆಜ್ಜೆ ಹಾಕುತ್ತಿದ್ದಂತೆ ತಡೆದು "ಇದಲ್ಲ ನಾ ಹೇಳಿದ್ದು. ಒಳ್ಳೇ ಹಾಲು ಇನ್ನೊಂದು ಕಡೆ ಬನಾರಸಿ ಭೈಯ್ಯಾನ ಅಂಗಡಿಯಲ್ಲಿ ಸಿಗುತ್ತದೆ. ಕುಡಿದರೆ ಅಲ್ಲಿ ಕುಡಿಯಬೇಕು" ಇನ್ನೊಂದು ಕಡೆ ಹೋಗಿ ಬರಲಿಕ್ಕೆ ರಾತ್ರಿ ಟ್ಯಾಕ್ಸಿಯ ಖರ್ಚು ಆಗಿನ ಕಾಲದಲ್ಲಿ ಅರವತ್ತು ರೂಪಾಯಿ, ಒಂದು ಲೋಟ ಹಾಲಿಗೆ ಮೂರು ರೂಪಾಯಿ. ರಾಜಗುರು ಅವರನ್ನು ಬಲ್ಲವರಿಗೆ ಇದರಲ್ಲಿ ವಿಶೇಷವೇನೂ ಕಾಣುವುದಿಲ್ಲ!

ಪ್ರತಿಷ್ಠಿತ ಸಭಾಂಗಣದಲ್ಲಿ ಎತ್ತರದ ಕಟ್ಟೆಯ ಆಢ್ಯತೆಗಿಂತ ಜಮಖಾನೆಯ ಮೇಲೆ, ರಸಿಕರ ನಡುವೆ ಕುಳಿತು ನಡುನಡುವೆ ಚಟಾಕಿ ಹಾರಿಸುತ್ತ ಹಾಡುವುದು ಅವರಿಗೆ ಆಪ್ಯಾಯಮಾನವಾಗಿತ್ತು. ಮುಂಬಯಿಯ ಉಪನಗರದಲ್ಲಿ ಅಂಥದೊಂದು ರಾತ್ರಿ ಕಚೇರಿ ಏರ್ಪಾಡಾಗಿತ್ತು. ಕೇಳಿ ಆನಂದಿಸಲು ಅಭಿಮಾನಿಗಳು ನೆರೆದಿದ್ದರು. ಸುಮಾರು ಹೊತ್ತು ಹಾಡಿ ರಂಜಿಸಿ ಮಧ್ಯಂತರದ ವಿಶ್ರಾಮವನ್ನು ಘೋಷಿಸಿದರು. ಒಳಗೆ ಗ್ರೀನರೂಮಿನಲ್ಲಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು "ಈಗ ಬರುತ್ತೇನೆ" ಎಂದು ಹೋದವರು ನಾಪತ್ತೆ! ಇಪ್ಪತ್ತು ನಿಮಿಷವಾದರೂ ಸುಳಿವಿಲ್ಲ. ರಾತ್ರಿ ಹನ್ನೊಂದರ ಮೇಲಾಗಿತ್ತು. ಗಾಬರಿಯಾದ ವ್ಯವಸ್ಥಾಪಕರು ಸ್ಕೂಟರು ಸಾಯಕಲ್ಲುಗಳನ್ನು ಹತ್ತಿ ಸುತ್ತ ಮುತ್ತ ಹುಡುಕಲು ಹೊರಟರು. ಇತ್ತ ಶ್ರೋತೃಗಳಲ್ಲಿ ಗುಜುಗುಜು ಆರಂಭವಾಗಿತ್ತು. ಅರ್ಧ ಗಂಟೆಯ ನಂತರ ಇನ್ನೇನು ಕಾರ್ಯಕ್ರಮವನ್ನು ರದ್ದು ಮಾಡಬೇಕು, ಸವಾರಿ ಆಗಮಿಸಿತು.

"ಎಲ್ಲಿ ಹೋಗಿದ್ದಿರಿ ಸಾಹೇಬರೆ? ನಮಗೆಲ್ಲ ಚಿಂತೆಯಾಗಿತ್ತು"

"ಏನಿಲ್ಲ, ಸ್ವಲ್ಪ ಹಾಲು ಕುಡಿಯಬೇಕನಿಸಿತು. ಅಂಗಡಿ ಹುಡುಕಿಕೊಂಡು ಹೋಗಿದ್ದೆ"

"ನಮಗೆ ಹೇಳಿದ್ದರೆ ಮನೆಯಿಂದ ತರಿಸಿ ಕೊಡುತ್ತಿದ್ದೆವಲ್ಲ. ಈ ನಡುರಾತ್ರಿಯಲ್ಲಿ ಯಾವ ಗವಳಿ ಸಿಗುತ್ತಾನೆ ನಿಮಗೆ?"

"ನೀವು ಹೇಳೋದು ಖರೆ. ಯಾವ ಹಾಲಿನ ಅಂಗಡೀನೂ ಕಾಣಲಿಲ್ಲ. ಮೂಲ್ಯಾಗ ಒಂದು ಕಬ್ಬಿನ ಹಾಲಿನ ಭಂಡಿ ಕಾಣಿಸಿತು. ಅದನ್ನೇ ಕುಡಿದು ಬಂದೆ!" ಕಚೇರಿ ಮುಂದುವರೆಯಿತು...

■

ವ್ಯಾನು ಬಾರದೆ

(ಪ್ರೇರಣೆ: ಕುವೆಂಪು ಅವರ ದೋಣಿ ಸಾಗಲಿ)

ಎಚ್. ಡುಂಡಿರಾಜ್

ವ್ಯಾನು ಬಾರದೆ ಕಸವ ಒಯ್ಯದೆ
ಒಂದು ವಾರವೆ ಕಳೆದಿದೆ
ತ್ಯಾಜ್ಯ ಸಂಗ್ರಹ ಕೊಳೆತು ನಾರುತ
ಮನೆಯ ಒಳಗೆ ಉಳಿದಿದೆ ॥ ಪ ॥

ಕಸದ ಡಬ್ಬಿಯು ತುಂಬಿ ತುಳುಕಿದೆ
ಮುತ್ತಿಕೊಂಡಿವೆ ನೊಣಗಳು
ವ್ಯಾನು ಬರುವ ದಾರಿ ಕಾಯುತ
ಕಳೆದು ಹೋಗಿವೆ ದಿನಗಳು
ಕಸದ ನಡುವೆ ನಿಂತುಕೊಂಡು
ಸೀಟಿ ಊದುವ ಮೋಹನ
ಎಲ್ಲಿ ಇರುವನೊ? ಎಂದು ಬರುವುದೊ
ನಗರ ಸಭೆಯ ವಾಹನ?॥ ವ್ಯಾನು ॥

©Ashok Hemmige

ನಿನ್ನೆ ಇಲ್ಲಾ, ಇಂದೂ ಚಕ್ಕರು
ನಾಳೆಯಾದರೂ ಬರುವುದೆ?
ಮೂಗು ಮುಚ್ಚಿ ಕಾಯುತಿರುವ
ನಮಗೆ ಮುಕ್ತಿಯ ತರುವುದೆ?
ಎಲ್ಲೆ ಇದ್ದರೂ ಬೇಗ ಬರಲಿ
ವ್ಯಾನು ನಮ್ಮಯ ಬೀದಿಗೆ
ಸ್ವಚ್ಛ ಭಾರತಕಾಗಿ ನಮ್ಮೀ
ಮೊರೆಯು ಕೇಳಲಿ ಮೋದಿಗೆ ॥ ವ್ಯಾನು॥

ಹಾದಿಯಲ್ಲಿ ಕೇಳಿಸಿದ್ದು.

"ಅಡಿಗೇ ಮನೇಲಿ ಮಾತ್ರ ಜಿರಲೆ ಕಾಟ ಅಂತ ಅಂದ್ಕೊಂಡಿದ್ದೆ.
ಈಗ ಅದು ಜಂತರ್ ಮಂತರ್ ಗೆ ಕೂಡಾ ಹರಡ್ತಾ ಇದೆಯಂತಲ್ಲಾ ರೀ"

ಕೈಲಾಶ್.....ಹಿಡಿದ ಕೇಸ್ ಮಟಾಶ್

ಜ್ಯೋತಿ ರಾಜೇಶ್

ಪತ್ತೇದಾರಿ ಕೈಲಾಶ್ ತಲೆ ಮೇಲೆ ಕೈಹೊತ್ತು ಕುಳಿತಿದ್ದ. ಎಷ್ಟೆಲ್ಲ ತಲೆ ಕೆಡಿಸಿಕೊಂಡರೂ, ಎಷ್ಟು ಯೋಚನೆ ಮಾಡಿದರೂ ಒಂದು ಸುಳಿವೂ ಸಿಗ್ತಿಲ್ಲ. ಏನ್ಮಾಡೋದು ಅಂತ ಗೊತ್ತಾಗ್ತಿಲ್ಲ. ಎಂತೆಂಥಹ ಕೇಸ್‌ಗಳನ್ನು ತನ್ನ ಬುದ್ಧಿವಂತಿಕೆಯಿಂದ ಸಾಲ್ವ್ ಮಾಡಿದವನಿಗೆ ಯಕಃಶ್ಚಿತ್ ಎನಿಸುವಂತ ಈ ಸವಾಲು ತಲೆ ತಗ್ಗಿಸುವಂತೆ ಮಾಡಿತ್ತು. ಆ ಮನೆಯಲ್ಲಿ ಎಲ್ಲರೂ ಎಷ್ಟು ಜಾಗ್ರತೆಯಿಂದಿದ್ದರೂ, ಚುರುಕಾಗಿದ್ದರೂ ಒಂದಲ್ಲ ಎರೆಡಲ್ಲ, ನಾಲ್ಕು ಬಾರಿ ಕಳ್ಳತನವಾಗಿತ್ತು.

ಬೆಳಿಗ್ಗೆ ಇಡೀ ಪ್ರಶಾಂತವಾಗಿರುತ್ತಿದ್ದ ಆ ಮನೆ ಕತ್ತಲಾದರೆ ಸಾಕು ಪೂರ್ತಿ ಚಟುವಟಿಕೆಯ ಆಗರವಾಗಿಬಿಡುತ್ತಿತ್ತು. ಆ ಮನೆಯ ಪ್ರತಿ ಸದಸ್ಯರಿಗೂ ಹೇಗಾದ್ರೂ ಮಾಡಿ ಈ ಬಾರಿ ಕಳ್ಳನನ್ನು ಹಿಡಿಯಲೇ ಬೇಕೆಂಬ ಹಟ. ಕೈಲಾಶ್ ಗಂತೂ ಕಳ್ಳನ ಕಾಟಕ್ಕಿಂತ ಕೈಹಿಡಿದ ಹೆಂಡತಿಯ ಕಾಟವೇ ಜಾಸ್ತಿಯಾಗಿತ್ತು. ಮನೆಗೆ ಬರುವ ಕಳ್ಳನನ್ನೇ ಹಿಡಿಯಕ್ಕಾಗದಿದ್ದವರು ಇನ್ನೆಂತ ಡಿಟೆಕ್ಟಿವ್ ಅಂತ ಮಾತು ಮಾತಿಗೂ ಟಾಂಟ್ ಕೊಡ್ತನೇ ಇದ್ಲು. ಇವನೂ ತನಗೆ ತಿಳಿದ ಉಪಾಯಗಳೆಲ್ಲವನ್ನೂ ಮಾಡಿದ್ದ. ಆ ಕಳ್ಳ ಎಲ್ಲಿಂದ ಒಳಬರುತ್ತಾನೆಂದು ನೋಡಲು ರಾತ್ರಿ ಎಲ್ಲ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕಾದಿದ್ದೇ ಬಂತು, ಆ ದಿನ ಅವನು ಬರ್ಲೇ ಇಲ್ಲ. ಹೀಗೆ ದಿನ ಕಳೆಯುತ್ತಿದ್ದವು. ಎಂಥ ಬಲೆ ಬೀಸಿದರೂ ಸಿಗ್ತಿರ್ಲಿಲ್ಲ ಕಳ್ಳ......ಆ ದಿನ ಹಲವು ದಿನಗಳಿಂದ ನಿದ್ದೆ ಕೆಡಿಸಿದ್ದ.

ಒಂದು ಕೊಲೆ ಕೇಸ್ ಸಾಲ್ವ್ ಮಾಡಿ ಬಂದ ಕೈಲಾಶ್ ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದ. ಅರ್ಧ ರಾತ್ರಿ ದಾಟಿತ್ತು. ಪೂರ್ತಿ ನಿಶ್ಯಬ್ದ.......ಮನೆಯಲ್ಲಿ ಎಲ್ಲರೂ ಗಾಢ ನಿದ್ರೆಯಲ್ಲಿರುವ ಸಮಯ......ಆ ನೀರವ ಮೌನದಲ್ಲಿ ಖಟ್ ಖಟ್ ಅಂತ ಸಣ್ಣಗೆ ಒಂದು ಶಬ್ದ. ಕೈಲಾಶ್ ಗೆ ಥಟ್ ಅಂತ ಎಚ್ಚರವಾಯ್ತು. ಎಷ್ಟಾದ್ರೂ ಡಿಟೆಕ್ಟಿವ್ ಅಲ್ವಾ.....ಸಿಕ್ತ್ಸ್ ಸೆನ್ಸ್ ತುಂಬಾ ಚುರುಕು.... ಎದ್ದವನೇ ಬೆಕ್ಕಿನ ಹೆಜ್ಜೆಯನ್ನಿಡುತ್ತ ಶಬ್ದ ಬರುತ್ತಿದ್ದ ಕಡೆ ಬಂದ...... ಟಕ್.... ದೀಪ ಬೆಳಗಿಸಿದ...... ಅಲ್ಲೇನೂ ಇಲ್ಲ..... ತನಗೆ ಭ್ರಮೆ ಎನಿಸಿತು. ಲೈಟ್ ಆರಿಸಿ ಮಲಗಲು ಹೊರಟವನ ಸಿಕ್ತ್ಸ್ ಸೆನ್ಸ್ ಅಲ್ಲೇ ಇರಲು ಹೇಳಿತು......ಹಾಗೇ ಕಾಯುತ್ತ ನಿಂತವನಿಗೆ, ಮತ್ತೊಂದು ಹತ್ತು ನಿಮಿಷವಾಗಿರಬೇಕು ಮತ್ತೆ ಏನೋ ಸರಿದಾಡಿದ ಶಬ್ದ......ಥಟ್ಟನೆ ತನ್ನ ಕೈಲಿದ್ದ ಆಯುಧವನ್ನು ಗಟ್ಟಿಯಾಗಿ ಹಿಡಿದು ಲೈಟ್ ಹಾಕಿದ.....ಅಲ್ಲಿನ ದೃಶ್ಯ ನೋಡಿ ಸ್ತಂಭಿತನಾದ. ಅಲ್ಲಿ ಇದ್ದದ್ದು ಒಬ್ಬ ಕಳ್ಳನಲ್ಲ....ಮೂವರು. ಇಬ್ಬರು ದೊಡ್ಡ ಕಳ್ಳರು ಬಾಗಿಲು ಮುಚ್ಚಿಕೊಳ್ಳದಂತೆ ಅದರ ಹ್ಯಾಂಡಲ್ಲನ್ನು ಬಿಗಿಯಾಗಿ ಹಿಡಿದಿದ್ದರೆ ಸಣ್ಣವನೊಬ್ಬ ಲುಟು~ಪುಟು ಅಂತ ಓಡಾಡ್ತಾ ಒಳಗಿದ್ದ ಬೋಂಡ, ಒಣ ಕಾಯಿಯ ತುಂಡುಗಳನ್ನು ಒಂದೊಂದಾಗಿ ತಂದು ತನ್ನ ವಾಸಸ್ಥಾನದೆಡೆ ಸಾಗಿಸುತ್ತಿದ್ದಾನೆ.

ಗೊತ್ತಾಯ್ತಲ್ವಾ? ಕಳ್ಳರ್ಯಾರಿರು ಅಂತ. ಗಣೇಶನ ವಾಹನ ಮಾರಾಯ್ರೆ...... ಎಷ್ಟು ದಿನದಿಂದ ಮನೆಯ ಒಳ ಸೇರಿದ್ದನ್ನ ಹಿಡಿಯಲು ಡಿಟೆಕ್ಟಿವ್ ಕೈಲಾಶ್ ಕಾಯ್ತಿದ್ದ. ಇಲಿ ಬೋನ್ ನಲ್ಲಿ ಇಟ್ಟ ತಿಂಡಿ ಮಾತ್ರ ಕಳ್ಳತನವಾಗುತ್ತಿತ್ತು. ಕಳ್ಳ ಮಾತ್ರ ಸಿಕ್ಕಿರ್ಲಿಲ್ಲ. ನಂತರ ಕಳ್ಳರು ಸಿಕ್ಕರೂ ಅವುಗಳ ಜಾಣತನ, ಮುದ್ದಾದ ಮುಖ ಕಂಡ ಕೈಲಾಶ್ ಗೆ ಅವುಗಳನ್ನು ಹಿಡಿಯಲು ಮನಸ್ಸೇ ಬರ್ಲಿಲ್ವಂತೆ.........ಈಗ ಇವರ ಸಂಸಾರದ ಜೊತೆ ಅವುಗಳ ಸಂಸಾರವೂ ಕುಚಿಕು~ಕುಚಿಕು ಥರ ಜೊತೆಯಲ್ಲೇ ಇವೆಯಂತೆ.......

■

ವೈದ್ಯರಲ್ಲಿ ರಸನಿಮಿಷಗಳು

ಡಾ. ಓಂಪ್ರಕಾಶ್

ಮಲ್ಲೇಶ್ವರಂ ಹೈಸ್ಕೂಲಿನಲ್ಲಿ ನಾವೆಲ್ಲ ಓದಿದ್ದು. ಹಲವಾರು ಉಪಾಧ್ಯಾಯರುಗಳು ನಮ್ಮ ವಿದ್ಯಾಭ್ಯಾಸಕ್ಕೆ ಭದ್ರ ತಳಹದಿ ಹಾಕಿದ್ದರೂ, ನನ್ನ ನೆನಪಿನಲ್ಲಿ ಉಳಿದವರು ಇಬ್ಬರು. ಚರಿತ್ರೆ ಮೇಷ್ಟರಾದ ಶಿವರಾಮಯ್ಯ ಮತ್ತು ಇಂಗ್ಲೀಷ್ ಟೀಚರ್ ಆಗಿದ್ದ ಮಹಮದ್ ಖುದ್ದೂಸ್. ಆಗಿನ ಕಾಲದಲ್ಲಿ ಒಂದು ಕ್ಲಾಸಿಗೆ ಮೂವತ್ತು ನಲವತ್ತು ವಿದ್ಯಾರ್ಥಿಗಳಿದ್ದರೆ ಹೆಚ್ಚು. ವಿಷಯಗಳು ವೈವಿಧ್ಯಮಯವಾಗಿದ್ದರೂ ಅವುಗಳ ಪ್ರಾಮುಖ್ಯತೆ, ಅದರಿಂದ ನಾವು ಜೀವನದ ಕಲೆಯನ್ನು ರೂಪಿಸಿಕೊಳ್ಳುವ ವಿಧಾನ ಇವನ್ನೆಲ್ಲಾ ಮನಮುಟ್ಟುವ ಹಾಗೆ ಉದಾಹರಣೆ ಸಹಿತ ಈ ಉಪಾಧ್ಯಾಯರುಗಳು ಚಿತ್ರಿಸುತ್ತಿದ್ದದ್ದು ನಮ್ಮ ಸೌಭಾಗ್ಯ. ಖುದ್ದೂಸ್ ರವರಂತೂ ಸ್ವಲ್ಪ ಕಷ್ಟಪಟ್ಟು ಓದುವ ಹುಡುಗರಿಗೆಂದೇ ಕ್ಲಾಸ್ ಮುಗಿದ ಮೇಲೆ ಗದ್ಯಭಾಗಗಳನ್ನ ಇಬ್ಬರ ನಡುವಣ ಸಂಭಾಷಣೆಯಂತೆ ಮಾಡುವ ಪ್ರಾಜೆಕ್ಟ್ ನೀಡುತ್ತಿದ್ದರು. ಇದೆಲ್ಲಾ ನಡೆದದ್ದು ನಮ್ಮ 1955ರ ಎಸ್.ಎಸ್.ಎಲ್.ಸಿ ಕ್ಲಾಸಿನಲ್ಲಿ.

ಕಾಲ ಚಕ್ರ ಉರುಳಿ, ಸ್ಕೂಲ್ ಆದಮೇಲೆ ಕಾಲೇಜ್, ಅನಂತರ ವೈದ್ಯಕೀಯ ಪದವಿ ಪಡೆದೆ. ನನ್ನ ಕ್ಲಿನಿಕ್ಕಿನ ಕೆಲಸವೂ ಪ್ರಾರಂಭವಾಯಿತು. ಒಂದು ಸಂಜೆ, ಒಬ್ಬರು ವೃದ್ಧರನ್ನು ಕರೆದುಕೊಂಡು ಒಬ್ಬ ಯುವಕ ಬಂದ. ಇಬ್ಬರೂ ಕುಳಿತರು. ಮನಸ್ಸಿನ ಯಾವುದೋ ಆಳದಲ್ಲಿ ಇವರನ್ನ ಎಲ್ಲೋ ನೋಡಿದಂತೆ ಅನ್ನಿಸಿತು .ಅವರು ಹೆಸರು ಹೇಳುಕ್ಕೆ ಮುಂಚೆ ಶಿವರಾಮಯ್ಯ! ಅಂತ ನಾನೇ ನಗುತ್ತಾ ಹೇಳಿದೆ. "ಮೇಷ್ಟರೇ ಹೋಮ್ ವರ್ಕ್ ಕೊಡಬೇಡಿ !" ಅಂತಲೂ ಸೇರಿಸಿದೆ. ಆತ, "ಡಾಕ್ಟ್ರೇ ನಿಮ್ಮ ಜ್ಞಾಪಕಶಕ್ತಿ ಚೆನ್ನಾಗಿದೆ !" ಅನ್ನುತ್ತಾ ಕಣ್ಣೀರು ಹಾಕಿದರು. ಅವರಿಗೆ ಟಿ.ಬಿ. ಆಗಿದೆ ಅಂತ ಯಾರೋ ತಪ್ಪಾಗಿ ಹೇಳಿದ್ದರಿಂದ ಅವರು ಬಹು ಆತಂಕಪಟ್ಟಿದ್ದರು. ಸೂಕ್ತ ಪರೀಕ್ಷೆಗಳಾದ ಮೇಲೆ ಶಿವರಾಮಯ್ಯ ಗುಣಮುಖರಾದರು.

***

ಆಸ್ಪತ್ರೆ. ಹೊರರೋಗಿ ವಿಭಾಗ. ಬೆಳಗ್ಗೆ ಹತ್ತು ಘಂಟೆ. ಒಬ್ಬರು ರೋಗಿ ಒಳಕ್ಕೆ ಬಂದರು. ಸುಮಾರು ನಲವತ್ತೈದು ವಯಸ್ಸಿರಬಹುದು. ಹೆಸರು ರಾಜಣ್ಣ.

"ಡಾಕಟರೇ, ಈ ಫೈಲ್ ಟ್ರಬಲ್ ಅಂದರೇನು ? ಯಾಕೆ ಬರುತ್ತೆ? ಅದನ್ನ ರಿಪೇರಿ ಹೇಗೆ ಮಾಡೋದು?" ಅಂತಕ ಆತ ನನ್ನನ್ನ ಕೇಳಿದ.

"ಫೈಲ್ ಅಂದರೆ ಯಾವುದೇ ವಿಷಯಗಳನ್ನ ವಿವರಿಸುವ ಕಾಗದಗಳನ್ನ ಒಟ್ಟಿಗೆ ಇಡುವ ಸಾಧನ. ಅದಕ್ಕೆ ರಟ್ಟಿನ ಹೊದಿಕೆ ಇರುತ್ತದೆ." ಎಂದು ಉತ್ತರಿಸಿದೆ.

"ಅಯ್ಯೋ ನಿಮಗೆ ಫೈಲ್ ಅಂದರೆ ಗೊತ್ತಿಲ್ಲವೇ?" ಅಂತ ಅಚ್ಚರಿಯಿಂದ ಕೇಳಿದ.

"ಹೌದು, ನೀವು ಕೇಳಿದ್ದು, ನಾನು ಹೇಳಿದ್ದು ಎಲ್ಲವೂ ಸರಿಯಾಗಿಯೇ ಇದೆ. ಸರ್ಜಿಕಲ್ ಓಪಿಡಿ ಅಂತ ಇರುತ್ತೆ. ಅಲ್ಲಿ ಈ ಕಾರ್ಡ್ ತೋರಿಸಿ " " ಯಾರನ್ನ ನೋಡಬೇಕು?"

"ಗಿರಿಧರ್ ಅಂತ ಸರ್ಜನ್"

ರಾಜಣ್ಣನನ್ನ ಸರ್ಜಿಕಲ್ ಓಪಿಡಿ ನರ್ಸ್ ಒಬ್ಬಳ ಜೊತೆ ಗಿರಿಧರ್ ಹತ್ತಿರ ಕಳಿಸಿದೆ. ಈ ಭೂಪತಿ ಇನ್ನೇನು ಹಾವಳಿ ಮಾಡುತ್ತಾನೋ ಎಂಬ ಭಯ. ಅರ್ಧ ಘಂಟೆ ಆದಮೇಲೆ ನನ್ನ ಮೊಬೈಲ್ ರಿಂಗಾಯಿತು.

"ಸಾರ್ ಗಿರಿ ಮಾತನೋಡೋದು. ನಿಮ್ಮ ಪೇಶಂಟನ್ನ ಅಡ್ಮಿಟ್ ಮಾಡಬೇಕಾಯಿತು. ಇಂಗ್ಲೀಷ್ ಭಾಷೆ ಬಹು ಸೂಕ್ಷ್ಮ. ಒಂದು ಅಕ್ಷರ ವ್ಯತ್ಯಾಸವಾದರೆ ಏನ್ನೆಲ್ಲಾ ಅನಾಹುತ " ಅಂತ ಗಿರಿ ನಗುತ್ತಾ ಹೇಳಿದ.

ಆ ಕಾಲವೊಂದಿತ್ತು

ಶಿವಕುಮಾರ್

ಸ್ವಾತಂತ್ರ್ಯ ಹೋರಾಟ

ನಾವೆಲ್ಲಾ ಚಿಕ್ಕವರಾಗಿದ್ದಾಗ ನಮಗೆಲ್ಲಾ ಮಲಗಲು ಪ್ರತ್ಯೇಕ ಕೋಣೆಗಳಿರಲಿಲ್ಲ. ಛತ್ರಗಳಲ್ಲಿರುವಂತೆ ಒಂದು ದೊಡ್ಡ ಕೋಣೆಯಲ್ಲಿ ಸಾಲಾಗಿ ಒಬ್ಬರ ಪಕ್ಕ ಒಬ್ಬರು ಹಾಸಿಗೆ ಹರಡಿ ಮಲಗುವ ಪದ್ಧತಿ ಇತ್ತು. ಹುಡುಗರಿಗೆಲ್ಲಾ ಒಂದು ಕೋಣೆ. ನಮ್ಮ ಅಕ್ಕಂದಿರು ನಮ್ಮ ತಾಯಿಯವರ ಕೋಣೆಯಲ್ಲಿ ಮಲಗುತ್ತಿದ್ದರು. ರಾತ್ರಿ ಒಂಭತ್ತು ಘಂಟೆಗೆ ನಮ್ಮ ಓದುಗಳನ್ನು ಮುಗಿಸಿದ ನಂತರ ನಾವು ಅಣ್ಣತಮ್ಮಂದಿರು ಸಾಲಾಗಿ ನಮ್ಮ ಅಮ್ಮನ ಕೋಣೆಗೆ ಹೋಗಿ, ಅಲ್ಲಿ ಸುತ್ತಿಟ್ಟಿದ್ದ ನಮ್ಮ ಹಾಸಿಗೆಗಳನ್ನು ಹೊತ್ತು ನಮ್ಮ ಕೋಣೆಗೆ ತರುತ್ತಿದ್ದೆವು ಅಲ್ಲಿ ಹಾಸಿಗೆಗಳನ್ನು ಸುಕ್ಕಿಲ್ಲದಂತೆ ಹರಡಿ, ಅದರ ಮೇಲೆ ಶಾಲನ್ನು ಮಡಿಚಿ ಇರಿಸಿ, ನಮ್ಮ ತಾಯಿಯವರನ್ನು ಕರೆದು ತೋರಿಸಬೇಕಾಗಿತ್ತು. ಅವರ ಶಹಭಾಸ್ ಗಿರಿಯನ್ನು ಪಡೆದನಂತರ ನಾವು ಹಾಸಿಗೆಗಳ ಮೇಲೆ ಕುಳಿತು, ಮಲಗುವ ಮುಂಚೆ "ಚಂದಮಾಮ" ಪತ್ರಿಕೆಯನ್ನು ಓದುವ ಪರಿಪಾಠವಿತ್ತು. ಕೊನೆಯ ರೂಮಿನಲ್ಲಿ ನಮ್ಮ ಚಿಕ್ಕಪ್ಪಂದಿರಾದ ಚಂದು, ಕಿಟ್ಟು ಹಾಗೂ ನಮ್ಮ ಬಂಧುವಾದ ರಮೇಶ ನೆಲೆಸಿದ್ದರು.

ಒಮ್ಮೆ ಒಂದು ನಡುರಾತ್ರಿ ಮನೆಯಲ್ಲಿ ಏನೇನೋ ಶಬ್ದವಾಗತೊಡಗಿದ್ದರಿಂದ ನನಗೆ ಥಕ್ಕನೆ ಎಚ್ಚರವಾಯಿತು. ಮನೆಯ ಹಜಾರದಲ್ಲಿ ಯಾರೋ ಮಾತನಾಡುತ್ತಿದ್ದರು. ಏನಾಗುತ್ತಿದೆ ಎಂದು ನೋಡುವ ಉದ್ದೇಶದಿಂದ ನಾನು ಕೋಣೆಯ ಬಾಗಿಲು ತೆರೆಯಲು ಹೊರಟೆ. ಅಷ್ಟುಹೊತ್ತಿಗೆ ನಮ್ಮ ಅಕ್ಕ ಕಮಲಾ ನಮ್ಮ ಕೋಣೆಯೊಳಗೆ ಬಂದು ಬಾಗಿಲು ಮುಂದೆ ಮಾಡಿದಳು. "ಹೊರಗೆ ಹೋಗಬಾರದು. ಪೋಲೀಸಿನವರು ಬಂದಿದ್ದಾರೆ" ಅಂತ ಕಮಲಕ್ಕ ಪಿಸುಗುಟ್ಟಿದಳು. "ಪೋಲೀಸ್" ಎಂಬ ಪದ ಕೇಳಿಸಿದ ತಕ್ಷಣ ಪ್ರಸಾದ್ ಸಹ ಎದ್ದು ಕುಳಿತ. "ಕಿಟ್ಟುವನ್ನ ಜೈಲಿಗೆ ಕರೆದೊಯ್ಯಲು ಪೋಲೀಸರು ಬಂದಿದ್ದಾರೆ. "ಅಕ್ಕ ವಿವರಣೆ ಮುಂದುವರಿಸಿದಳು. "ಜೈಲಿಗೆ ಯಾಕೆ? ಕಿಟ್ಟು ಏನು ತಪ್ಪು ಮಾಡಿದಾನೆ?" ಅಂತ ನಾನು ಪ್ರಶ್ನಿಸಿದೆ. ತೀವ್ರ ಭಯವಾದರೆ ಹೊಟ್ಟೆಯೊಳಗೆ ಅದರ ಅನುಭವವಾಗುತ್ತದೆ ಅಂತ ಆಗಲೇ ನನಗೆ ಗೊತ್ತಾಗಿದ್ದು.

"ನಡುರಾತ್ರಿಲಿ ಪೋಲೀಸರು ಬಂದು ಬಾಗಿಲು ತಟ್ಟಿದರು. ಅಪ್ಪ ಹೋಗಿ ನೋಡಿದಾಗ," ಕೃಷ್ಣಸ್ವಾಮಿ ಅನ್ನೋರು ಇದ್ದಾರಯೇ ಅಂತ ಅವರು ಕೇಳಿದರು. ಅಪ್ಪ "ಹೌದು" ಅಂತ ಉತ್ತರಿಸಿದ ಮೇಲೆ, "ಅವರನ್ನ ದಸ್ತಗಿರಿ ಮಾಡಲು ಬಂದಿದ್ದೇವೆ. ಅವರನ್ನ ಕರೀರಿ" ಅಂತ ಪೋಲೀಸರು ಅಪ್ಪಣೆಮಾಡಿದರು. ಅಪ್ಪ ಕರೆಯುಕ್ಕೆ ಮುಂಚೇನೇ ಕಿಟ್ಟು ರೂಮಿನಿಂದ ಹೊರಕ್ಕೆ ಬಂದು, "ಬರ್ತೀನಿ ಶಿವು" ಅಂತ ತನ್ನ ಅಣ್ಣನಿಗೆ ವಿದಾಯ ಹೇಳಿ, ಪೋಲೀಸರೊಂದಿಗೆ ಹೊರಟು ಹೋದ. ಅಪ್ಪ ಅಮ್ಮ ಇಬ್ಬರೂ ಆ ವಿಷಯವನ್ನೇ ಮಾತಾಡ್ತಾ ಇದ್ದಾರೆ." ಅಂತ ಕಮಲಕ್ಕ ಎಲ್ಲಾ ಸಂಗತಿಗಳನ್ನೂ ವಿವರಿಸಿದಳು.

"ಕಿಟ್ಟು ಏನು ತಪ್ಪು ಮಾಡ್ದಾ?" ಪ್ರಸಾದ್ ಕೇಳಿದ.

ಕಮಲಕ್ಕನ ಮುಖ ಕೆಂಪೇರಿತು. "ಖಂಡಿತಾ ಕಿಟ್ಟು ಯಾವ ತಪ್ಪೂ ಮಾಡಿಲ್ಲ. ಅವನೊಬ್ಬ ದೇಶಪ್ರೇಮಿ. ಬ್ರಿಟಿಷರನ್ನ ನಮ್ಮ ದೇಶದಿಂದ ಓಡಿಸಲು ಅವನು ಹೋರಾಟ ಮಾಡ್ತಾ ಇದಾನೆ. "

"ಕಮಲಕ್ಕ ನನಗ್ಯಾಕೋ ಹೆದರಿಕೆ ಆಗ್ತಾ ಇದೆ. ಕಿಟ್ಟೂಗೆ ಏನಾಗುಲ್ಲ ತಾನೆ?" ಪ್ರಸಾದನ ದನಿಯಲ್ಲಿ ಆತಂಕ ಕಳವಳ ತುಂಬಿತ್ತು.

"ನಾನು ಹೇಗೆ ಹೇಳಲಿ ಮರಿ. ಅವನ ಜೊತೆ ಬೇರೇ ಹೋರಾಟಗಾರರೂ ಇರ್ತಾರೆ. ಈಗ ನೀವಿಗ್ರೂ ಮಲ್ಕೊಳ್ಳಿ. ಬೆಳಗ್ಗೆ ಸ್ಕೂಲಿಗೆ ಹೋಗಬೇಕು." ಅಂತ ಹೇಳಿ ಕಮಲಕ್ಕ ತನ್ನ ರೂಮಿಗೆ ಹೋದಳು.

"ಈ ಗಲಾಟೇಲಿ ಸ್ಕೂಲು ಯಾರಿಗೆ ಬೇಕು?" ಅಂತ ಅಂದುಕೊಂಡು ನಿದ್ರಿಸಲು ಪ್ರಯತ್ನಿಸಿದೆ. ಮಾರನೆಯ ಬೆಳಗ್ಗೆ ಸ್ಕೂಲಿಗೆ ಹೋದೆ ಅನ್ನಿ.

ಮುಂದಿನ ಎರಡು ದಿನ ಮನೆಯಲ್ಲಿ ನೀರವ ಮೌನ. ಯಾರೂ ಮಾತಾಡುತ್ತಿಲ್ಲಿಲ್ಲ. ಮೂರನೆಯ ದಿನ ತಿಂಡಿ ತಿನ್ನುತ್ತಿದ್ದಾಗ ಕಿಟ್ಟು ಮನೆಗೆ ಬಂದ. ಅವನಿಗೆ ವೀರೋಚಿತ ಸ್ವಾಗತ ದೊರೆಯಿತು . ನಮ್ಮ ಚಿಕ್ಕಮ್ಮ ಗೌರನಿಗಂತೂ ಬಹು ಸಂತೋಷವಾಗಿತ್ತು. ಹೇಗಿದ್ದರೂ ಕಿಟ್ಟು ಅವಳ ಸ್ವಂತ ತಮ್ಮ ತಾನೆ!

ಅವತ್ತು ಸಂಜೆ ಕಮಲಕ್ಕನೊಡನೆ ನಾವೆಲ್ಲ ಕುಳಿತಿದ್ದಾಗ ಅವಳು ಒಂದು ಹೇಳಿಕೆ ನೀಡಿದಳು. "ಕಿಟ್ಟುವನ್ನು ಪೋಲೀಸರು ಎಳೆದುಕೊಂಡು ಹೇದಮೇಲೆ, ನನಗೆ ತುಂಬಾ ಆಘಾತವಾಗಿತ್ತು. ಕಿಟ್ಟು ಒಬ್ಬನೇ ಯಾಕೆ ಹೋರಾಟಮಾಡಬೇಕಾಗಿತ್ತು? ಮನೆಯಲ್ಲಿ ಇನ್ನಾರಿಗೂ ದೇಶಪ್ರೇಮ ಇಲ್ಲವೇ ಅಂತ. ನಾನು ಧೈರ್ಯಮಾಡಿ ಅಪ್ಪನ್ನ ಕೇಳಬಿಟ್ಟೆ."

"ಅಪ್ಪ ಏನಂದ್ರೂ?" ವಿಮಲಕ್ಕ ಕೇಳಿದಳು.

"ಎಲ್ಲರೂ ಹೋರಾಟಕ್ಕೆ ಇಳಿಯಬೇಕು ಅಂತ ಅವರು ಒಪ್ಪಿಕೊಂಡರು. ಅವರು ಹೇಳಿದ್ದು ಇಷ್ಟು." ನೋಡಮ್ಮಾ, ನಾನು ಕೆಲಸ ಮಾಡಿ ಸಂಪಾದಿಸಿ ನಿಮ್ಮನ್ನೆಲ್ಲಾ ಸಾಕಬೇಕು. ಹಾಗಾಗಿ ನಾನು ಬಹಿರಂಗವಾಗಿ ಹೋರಾಡುವುದು ಬೇಜವಾಬ್ದಾರಿತನವಾಗುತ್ತದೆ. ಹಾಗಾಗಿ ಸ್ವಾತಂತ್ರ ಹೋರಾಟಗಾರರ ಆರೋಗ್ಯವನ್ನು ನಾನು ಉಚಿತವಾಗಿ ತಪಾಸಣೆ ಮಾಡುವ ನಿರ್ಧಾರ ಕೈಗೊಂಡೆ. "ಅಂತ ಹೇಳಿದರು.

[ಅನೇಕ ವರ್ಷಗಳ ನಂತರ ಕರ್ನಾಟಕದ ಮಾಜಿ ಮಂತ್ರಿಗಳಾದ ಶ್ರೀ ಟಿ.ಸಿದ್ದಲಿಂಗಯ್ಯ ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯ ಇವರುಗಳು ನಮ್ಮ ತಂದೆಯವರ ಪೇಷಂಟ್ ಗಳಾಗಿದ್ದರೆಂಬ ಅಂಶವನ್ನು ತಿಳಿದೆ.]

"ಅಪ್ಪ ಇನ್ನೇನು ಹೇಳಿದರು" ಲೀಲಕ್ಕ ಕೇಳಿದಳು.

"ದೇಶಕ್ಕಾಗಿ ಹೋರಾಡಲು ನಾನೇನು ಮಾಡಲು ಸಾಧ್ಯ? ಅಂತ ಕೇಳಿದೆ. ಅವರು" ಚೆನ್ನಾಗಿ ಪಾಠ ಓದಿ ಒಳ್ಳೇ ವಿದ್ಯಾವಂತೆ ಆಗು. ನಮಗೆ ಸ್ವಾತಂತ್ರ ಬಂದ ಮೇಲೆ ನಿನಗೆ ದೇಶಸೇವೆ ಮಾಡಲು ಅನೇಕ ಮಾರ್ಗಗಳು ತಾವಾಗಿಯೇ ತೆರೆದುಕೊಳ್ಳುತ್ತವೆ" ಅಂತ ಅಪ್ಪ ಹೇಳಿದರು" ಅಂದಳು ಕಮಲಕ್ಕ.

ಇದಾದ ಸ್ವಲ್ಪ ದಿನಗಳಲ್ಲಿ ವಿಮಲಕ್ಕನಿಗೂ ಈ ಸಂಗ್ರಾಮದಲ್ಲಿ ಪಾಲ್ಗೊಳ್ಳಲು ಸ್ಫೂರ್ತಿ ಬಂತು. ಅವಳು ತನ್ನ ಸ್ನೇಹಿತೆ ಕುಂತಳಾ ಜೊತೆ ಸೇರಿ ಮಲ್ಲೇಶ್ವರದಲ್ಲಿ ನಡೆಯುತ್ತಿದ್ದ ಪ್ರತಿಭಟನೆಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದಳು. ಮನೆ ಹಿಂದಿನ ಕೊಠಡಿಯಲ್ಲಿ ಕುಳಿತು ಈ ಇಬ್ಬರು ಗೆಳೆತಿಯರು ಪೋಸ್ಟರ್ ಗಳನ್ನು ಬರೆಯುತ್ತಿದ್ದ ದೃಶ್ಯ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಕಿಟ್ಟು ತಂದುಕೊಟ್ಟ ನೀಲಿ ಪೇಂಟ್ ಮತ್ತು ಬ್ರಷ್ ಗಳನ್ನು ಬಳಸಿ ಇವರಿಬ್ಬರು ದಿನಪತ್ರಿಕೆಯ ಹಾಳೆಗಳ ಮೇಲೆ ದೊಡ್ಡ ಅಕ್ಷರಗಳಲ್ಲಿ "ಬಹಿರಂಗ ಸಭೆ" ಅಂತೆಲ್ಲಾ ಬರೆದು ದಿನಾಂಕವನ್ನು ನಮೂದಿಸಿ ಕಳಿಸುತ್ತಿದ್ದರು.

ಒಮ್ಮೆ ಕಿಟ್ಟು ಒಂದು ಕಾಂಗ್ರೆಸ್ ಧ್ವಜವನ್ನ ನಮ್ಮ ಮನೆಗೆ ತಂದಿದ್ದ. ರಾಷ್ಟ್ರಧ್ವಜದಂತೆಯೇ

ಇದ್ದ ಆ ಬಾವುಟದ ಮಧ್ಯೆ ಚಕ್ರದ ಬದಲಿಗೆ ಚರಖ ಇತ್ತು. ವಿಮಲ ಮತ್ತು ಕುಂತಳ ಆ ಬಾವುಟವನ್ನು ಮಡಿಕೋಲಿಗೆ ಕಟ್ಟಿ ನಮ್ಮ ಹಿತ್ತಲಲ್ಲಿ ಹಾರಿಸಿದ್ದರು. ನಾವೆಲ್ಲರೂ ಅದರ ಸುತ್ತ ನಿಂತು ನಮ್ಮ ಬಲಗೈಯಿಂದ ಸಲ್ಯೂಟ್ ಮಾಡುತ್ತಾ ವಂದೇ ಮಾತರಮ್ ಹಾಡಿದ್ದ ನೆನಪಿದೆ.

ಪೂರ್ಣೇಂದು ಮೋಹನ್ ಲಾಹಿರಿ

ನನ್ನ ಚಿಕ್ಕಂದಿನ ದಿನಗಳನ್ನು ನೆನಪಿಸಿಕೊಂಡಾಗಲೆಲ್ಲಾ ಲಾಹಿರಿ ಅಂಕಲ್ ನೆನಪಿಗೆ ಬರುತ್ತಾರೆ. ಇವರು ಬಂಗಾಳದವರು. ಕೋಲಾರದ ಬಳಿಯಲ್ಲಿರುವ ಛಾಂಪಿಯನ್ ರೀಫ್ ಚಿನ್ನದ ಗಣಿಯಲ್ಲಿ ಇವರು ಛೀಫ್ ಇಂಜಿನಿಯರ್ ಆಗಿದ್ದರು. ಇವರ ಪತ್ನಿ ಸತ್ಯಪ್ರೇಮ ಸದಾ ನಗುಮುಖದ ತೆಳ್ಳಗಿನ ಮಹಿಳೆ. ಈಕೆ ಯಾವಾಗಲೂ ಕೆಂಪು ಅಂಚಿನ ಬಿಳಿಯ ಸೀರೆಯನ್ನು ಧರಿಸುತ್ತಿದ್ದದ್ದು ಜ್ಞಾಪಕ. ನಾವು ಈಕೆಯನ್ನು ನೋಡಿದಾಗಲೆಲ್ಲಾ ಅವರ ಕೈಗಳಲ್ಲಿ ನಿಟ್ಟಿಂಗ್ ಕಡ್ಡಿಗಳು ಸದಾ ಟಕಟಕ ಶಬ್ದ ಮಾಡುತ್ತಾ ತಮ್ಮ ನೇಯ್ಗೆಯ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದವು. ಇವರಿಗೆ ಐದು ಜನ ಮಕ್ಕಳು. ಎರಡು ಗಂಡು ಮಕ್ಕಳು, ಸೋರಿತ್ ಮತ್ತು ಬಾಬಿ. ಮೂರು ಹೆಣ್ಣು ಮಕ್ಕಳು ಕ್ರಮವಾಗಿ, ದೀಪ್ತಿ (ಡಿಪ್ಪಿ), ರೇವತಿ (ರೇಬತಿ– ರೇಬಾ), ಮತ್ತು ಜಗನ್ಮೋಹಿನಿ (ಮೋಹಿನಿ–ಮೋನಾ)

ಈ ಸಂಸಾರ ನಮ್ಮ ಅಪ್ಪ ಅಮ್ಮಂದಿರಿಗೆ ಹೇಗೆ ಆಪ್ತ ಗೆಳೆಯರಾದರೋ ನನಗೆ ತಿಳಿಯದು. ನನಗೆ ಬುದ್ಧಿ ತಿಳಿಯುವ ವಯಸ್ಸಿಗಾಗಲೇ ಈ ಕುಟುಂಬ ನಮ್ಮ ಮನೆಗೆ ತಿಂಗಳಿಗೆ ಎರಡು ಭಾನುವಾರವಾದರೂ ಬರುವ ಪರಿಪಾಠ ಬೆಳೆದು ಬಂದಿತ್ತು. ಇವರು ಮನೆಗೆ ಬಂದಾಗಲೆಲ್ಲಾ ತಮ್ಮ ಹೆಣ್ಣುಮಕ್ಕಳನ್ನು ಜೊತೆಗೆ ಕರೆತರುತ್ತಿದ್ದರು. ಇದಕ್ಕೆ ಒಂದು ಕಾರಣವಿತ್ತು.

ನಮ್ಮಪ್ಪ ನಮ್ಮ ಅಕ್ಕಂದಿರನ್ನು "ಕಮಲಾಬಾಯಿ'ಸ್ ಸ್ಕೂಲ್" ಎಂಬ ಇಂಗ್ಲೀಷ್ ಶಾಲೆಯೊಂದಕ್ಕೆ ಸೇರಿಸಿದ್ದರು. ಹಾಗಾಗಿ ಅವರು ಇಂಗ್ಲೀಷ್ ಭಾಷೆಯನ್ನು ಅರಳು ಹುರಿದಂತೆ ಮಾತನಾಡಬಲ್ಲವರಾಗಿದ್ದರು. ಲಾಹಿರಿ ಹೆಣ್ಣುಮಕ್ಕಳು ನಮ್ಮ ಮನೆಗೆ ಬರಲು ಆಸಕ್ತರಾಗಿದ್ದು ತಮ್ಮ ಗೆಳತಿಯರನ್ನು ಭೇಟಿಮಾಡುವ ಸಲುವಾಗಿ. ನಾನು ಮತ್ತು ನನ್ನ ತಮ್ಮಂದಿರು ಕನ್ನಡ ಶಾಲೆಯಲ್ಲಿ ಓದುತ್ತಿದ್ದುದರಿಂದ ನಮಗೆ ಇಂಗ್ಲೀಷ್ ಗಂಧವೇ ಇರಲಿಲ್ಲ. ಸಹಜವಾಗಿಯೇ ಲಾಹಿರಿ ಹುಡುಗರಿಗೆ ಇಲ್ಲಿಗೆ ಬರಲು ಯಾವ ಕಾರಣವೂ ಇರಲಿಲ್ಲ. ಸತ್ಯಪ್ರೇಮರಿಗೆ ತಮಿಳು ಚೆನ್ನಾಗಿ ಬರುತ್ತಿತ್ತು. ನಮ್ಮ ಮನೆಯಲ್ಲಿ ತಮಿಳು ಕೆಲಸಗಾರನಿದ್ದುದರಿಂದ ನಮ್ಮ ತಾಯಿಯವರು ಅವರೊಂದಿಗೆ ತಮಿಳಿನಲ್ಲಿ ಸಂಭಾಷಿಸಬಲ್ಲವರಾಗಿದ್ದರು.

ಈ ಎಲ್ಲ ಕಾರಣಗಳಿಂದ ಲಾಹಿರಿ ಸಂಸಾರ ನಮ್ಮ ಮನೆಗೆ ಭೇಟಿಕೊಟ್ಟಾಗ, ನಾನು ಮತ್ತು ನನ್ನ ತಮ್ಮಂದಿರನ್ನು ಬಿಟ್ಟು ಮಿಕ್ಕವರಿಗೆಲ್ಲಾ ಅದೊಂದು ಬಹು ಸಂತಸದ ಸಮಯವಾಗಿತ್ತು. ತಮ್ಮ ಗೆಳತಿಯರು ಬಂದ ತಕ್ಷಣವೇ ನಮ್ಮ ಅಕ್ಕಂದಿರು ಅವರನ್ನು ನಮ್ಮ ರೂಮಿನಲ್ಲಿ ಸೇರಿಸಿಕೊಂಡು ಹರಟೆ ಹೊಡೆಯುವುದೇನು!, ಆಟವಾಡುವುದೇನು! ನಾವು ಹುಡುಗರು ನಿರಾಶ್ರಿತರಾಗಿ ಹೊರಗಿನ ಕಾಂಪೌಂಡ್ ಸೇರಿ, ಸೀಬೆ ಮರಹತ್ತಿ ಚೇಪೇಕಾಯಿ ತಿನ್ನುತ್ತಾ ನಮ್ಮ ಕರ್ಮವನ್ನು ಹಳಿದುಕೊಳ್ಳುವುದರಲ್ಲಿ ನಿರತರಾಗಿರುತ್ತಿದೆವು. ಸಂಜೆ ಅವರೆಲ್ಲಾ ಹೊರಟು ನಿಂತಾಗ ನಮಗಾಗುತ್ತಿದ್ದ ಸಂತೋಷ ಅಷ್ಟಿಷ್ಟಲ್ಲ.

ಅನೇಕ ದಿನಗಳ ನಂತರ ಒಂದು ಗುರುವಾರ ನಾನು ಶಾಲೆಯಿಂದ ಹನ್ನೆರಡಕ್ಕೆ ಮನೆಗೆ ಹಿಂತಿರುಗಿದ್ದೆ. ಲಾಹಿರಿ ಅಂಕಲ್ ಮತ್ತು ಅವರ ಪತ್ನಿ ಮನೆಗೆ ಬಂದಿದ್ದರು. ಮಕ್ಕಳು ಬಂದಿರಲಿಲ್ಲ. ರೇಡಿಯೋದಿಂದ ಯಾವುದೇ ಸುದ್ದಿ ಪ್ರಸಾರವಾಗುತ್ತಿತ್ತು. ಲಾಹಿರಿ ಅಂಕಲ್ ಮತ್ತು ನಮ್ಮ ತಂದೆ ರೇಡಿಯೋ ಸುದ್ದಿಯನ್ನು ಬಹು ಗಮನವಿಟ್ಟು ಕೇಳುತ್ತಿದ್ದರು. ಎಲ್ಲರ ಮುಖದಲ್ಲೂ ಆತಂಕ

ಕಳವಳ. ನಾನು ಕಮಲಕ್ಕನ ಹತ್ತಿರ ಓಡಿಹೋಗಿ ವಿಷಯ ಏನೆಂದು ಕೇಳಿದೆ.

"ಗಾಂಧಿಜೀ ಆಮರಣಾಂತ ಉಪವಾಸ ವ್ರತ ಮಾಡುತ್ತಿದ್ದಾರೆ. ಪ್ರೇಮ ಆಂಟಿ, ಗಾಂಧಿಜೀ ಉಪವಾಸ ನಿಲ್ಲಿಸುವವರೆಗೂ ಒಂದು ಹನಿ ನೀರನ್ನೂ ಮುಟ್ಟುವುದಿಲ್ಲ ಅಂತ ಹಟ ಹಿಡಿದಿದ್ದಾರೆ. ಮೂರು ದಿನಗಳಿಂದ ಅವರು ಊಟಮಾಡಿಲ್ಲವಂತೆ. ಅದಕ್ಕೇ ಲಾಹಿರಿ ಅಂಕಲ್ ಅವರನ್ನು ಡಾಕ್ಟರ್ ಹತ್ತಿರ ಇರಲಿ ಅಂತ ಇಲ್ಲಿಗೆ ಕರೆತಂದಿದ್ದಾರೆ." ಅಂತ ಕಮಲಕ್ಕ ಪರಿಸ್ಥಿತಿಯನ್ನು ವಿವರಿಸಿದಳು.

ನಾನು ಅಡಿಗೆ ಮನೆಗೆ ಹೋದೆ. ಗೌರ ನನಗೆ ಕಲಸಿದ ಅನ್ನವನ್ನು ಕೈತುತ್ತು ಹಾಕಿದಳು. ಸುಮಾರು ಮಧ್ಯಾಹ್ನ ಮೂರುಘಂಟೆಯ ಹೊತ್ತಿಗೆ ಗಾಂಧಿಜೀಯವರು ತಮ್ಮ ಉಪವಾಸವನ್ನು ನಿಲ್ಲಿಸಿದರೆಂಬ ವಾರ್ತೆ ಬಂದಿತು. ನಮ್ಮ ತಾಯಿ, ಸತ್ಯಪ್ರೇಮರಿಗೆ ಪಾನಕವನ್ನು ಕುಡಿಯಲು ಕೊಟ್ಟರು. ಗೌರ ಬಂದು "ಎಲೆ ಹಾಕಿದೆ" ಎಂದ ನಂತರ ಎಲ್ಲರೂ ಊಟಕ್ಕೆದ್ದರು.

ಬೆಳ್ಳಗಾದ ಕೂದಲು, ಬಣ್ಣದ ಬದುಕು

ಎಸ್.ವಿ.ರಘುರಾಮ್

ಬೆಳಗಿನ ಮುಸುಕಿನಲ್ಲಿ ಪತ್ರಿಕೆ ಎಸೆಯುವ ಸದ್ದು ಕೇಳದಿದ್ದರೆ ಸಾಕು, ಒಳಗಿರುವ ಕಾಲಿಗೆ ಚಡಪಡಿಕೆ ಶುರುವಾಗುತ್ತದೆ. ಕೈಯಲ್ಲೊಂದು 'ಸ್ಮಾರ್ಟ್ಫೋನ್' ಇಟ್ಟುಕೊಂಡು ಪ್ರಪಂಚದ ಅಷ್ಟೂ ವಿದ್ಯಮಾನಗಳನ್ನು ಕ್ಷಣಾರ್ಧದಲ್ಲಿ ಬೆರಳ ತುದಿಯಲ್ಲೇ ನೋಡಬಹುದಾದ ಕಾಲವಿದು ನಿಜ. ಆದರೂ ಮುಂಜಾನೆಯ ತಂಗಾಳಿಯಲ್ಲಿ ಎರಡನೇ ಮಹಡಿಯ ಬಾಲ್ಕನಿಯಲ್ಲಿ ನಿಂತು, ರಸ್ತೆಯ ತಿರುವಿನಲ್ಲಿ ಸ್ಕೂಟಿಯಲ್ಲಿ ಸವಾರ ದಿನಪತ್ರಿಕೆ ತರುತ್ತಿದ್ದಾನಾ ಎಂದು ಕಣ್ಣರಳಿಸಿ ಕಾಯುವ ರುಚಿಯೇ ಬೇರೆ. ಕೈಗೆ ಬಂದ ಪತ್ರಿಕೆಯ ಮುಖಪುಟಕ್ಕಿಂತ ಹೆಚ್ಚಾಗಿ, ಪರಿಚಿತರ ಮುಖಗಳು ಯಾವುದಾದರೂ ಸನ್ಮಾನದ ಸಣ್ಣ ಚೌಕಟ್ಟಿನಲ್ಲಿ ಏನಾದ್ರು ಆಕಸ್ಮಿಕವಾಗಿ ಕಾಣಸಿಗುತ್ತವೆಯೇ ಎಂದು ಹುಡುಕುವ ಕುತೂಹಲ ನಿವೃತ್ತಿಯ ದಿನಗಳಲ್ಲೇ ಮೈದಳೆಯುವುದು.

ಆಮೇಲೆ ಬರುವ ಮೊಬೈಲ್ ಸಂದೇಶಗಳ ಲೋಕ ಮತ್ತೊಂದು ತಮಾಷೆ. ಅರಳುವ ಗುಲಾಬಿ ಹೂವಿನ ಮೇಲೆ ಮಿಂಚುವ ಅಕ್ಷರಗಳಲ್ಲಿ ಬರುವ "ಶುಭೋದಯ"ಗಳಿಗೆ ಆದ್ಯತೆ. ಅದರಲ್ಲೂ ಬೆಳಿಗ್ಗೆ ನನ್ನನ್ನು ನೆನಪಿಸಿಕೊಂಡು ವೈಯಕ್ತಿಕವಾಗಿ ಸಂದೇಶಗಳನ್ನು ಕಳುಹಿಸಿದವರಿಗೆ ಮೊದಲ ಮಣೆ. ಸೋಮವಾರದ ದಿನ ಶಿವ, ಮಂಗಳವಾರ ಸುಬ್ರಹ್ಮಣ್ಯ...... ಹೀಗೆ ಆಯಾಯ ದಿನದ ದೇವರ ಫೋಟೋ ಕಳುಹಿಸಿದವರ ಸಂದೇಶಗಳಲ್ಲಿ ದೇವರುಗಳಿಗೆ ಕೈ ಮುಗಿಯುವ ಭಾವ ಚಿನ್ಹೆ (ಇಮೋಜಿ) ಹಾಕುವಾಗ, ಕಾಲಿನ ಮೇಲೆ ಕಾಲು ಹಾಕಿಕೊಂಡು ಕೂತಿದ್ದ ನಾನು ಬಲಗಾಲನ್ನು ಎಡಗಾಲಿನ ಮೇಲಿನಿಂದ ಕೆಳಗಿಳಿಸಿ ಚಿನ್ಹೆಯ ಮೇಲೆ 'ಸೆಂಡ್' ಒತ್ತುತ್ತೇನೆ. ನಂತರ ಜನ್ಮ ದಿನ, ಮದುವೆಯ ವಾರ್ಷಿಕೋತ್ಸವಗಳನ್ನು ಆಚರಿಸಿಕೊಳ್ಳುವವರ ಸರದಿ. ಬೇಕಾದಷ್ಟು ಸಮೂಹದಲ್ಲಿ ನಾನು ಇರುವುದರಿಂದ ದಿನವೂ ಒಂದಲ್ಲ ಒಂದು ವಿಶೇಷ ಇದ್ದೇ ಇರುತ್ತದೆ. ಗೀತೆಯ ಸಂದೇಶದಿಂದ ಹಿಡಿದು ಇತ್ತೀಚಿನ ದುಂಡಿರಾಜ್ ರವರ ಚುಟುಕುಗಳವರೆಗೆ ಬರುವ ಎಲ್ಲಾ ಸಂದೇಶಗಳನ್ನು 'ಸ್ಕ್ರೋಲ್' ಮಾಡುತ್ತಾ, ಭಾವ ಚಿನ್ಹೆಗಳನ್ನು ತೇಲಿ ಬಿಡುತ್ತಾ ಎಲ್ಲವನ್ನೂ ಮುಗಿಸಿದರೆ ಏನೋ ಒಂದು ಸಂತೃಪ್ತಿ. 'ನಮ್ಮ ರಘು ಎಲ್ಲದಕ್ಕೂ ಉತ್ತರಿಸುತ್ತಾನಪ್ಪ, ಈ ವಯಸ್ಸಿನಲ್ಲೂ ಅವನ ಉತ್ಸಾಹ ಮೆಚ್ಚ ಬೇಕು' ಎಂದು ಮೊನ್ನೆ ಸಂಬಂಧಿಕರ ಮನೆ ಮದುವೆಗೆ ಹೋದಾಗ ಮಾತನಾಡುತ್ತಿದ್ದರು ಎಂದು ನನ್ನಾಕೆಯಿಂದ ತಿಳಿದು ಸಂತೋಷವಾಗಿದ್ದು ಆಶ್ಚರ್ಯವೇನಿಲ್ಲ.

ಆದರೆ ನಿಜಕ್ಕೂ ನಾನೇನೂ ಮಾಡುವುದಿಲ್ಲವೇ? ಬೆಳಿಗ್ಗೆ ತುಳಸಿಯ ಗಿಡಕ್ಕೆ ನೀರು ಹಾಕುತ್ತೇನೆ. ಗುಲಾಬಿ ಗಿಡದಲ್ಲಿ ಹೊಸದಾಗಿ ಇಣುಕಿದ ಎಲೆಗಳನ್ನು ಎಣಿಸುತ್ತೇನೆ, ನೀರಿನ ಬಿಲ್ ಕಟ್ಟಲು ಆನ್ಲೈನ್ ಸೌಕರ್ಯವಿದ್ದರೂ ನಡಿಗೆಯ ನೆಪದಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಕಚೇರಿಯತ್ತ ಮುಖ ಮಾಡುತ್ತೇನೆ. ಅಲ್ಲಿ ಚಿಲ್ಲರೆ ಇಲ್ಲವೆಂದು 'ಫೋನ್ ಪೇ' ಮಾಡಿ ಬರುತ್ತೇನೆ! ಯಾರಾದ್ರು ನೆಂಟರಿಷ್ಟರು ಫೋನ್ ಮಾಡಿ ಬಿಟ್ಟರಂತೂ ಕನಿಷ್ಠ ಅರ್ಧ ಗಂಟೆ ಮಾತನಾಡುತ್ತೇನೆ. ಇವೆಲ್ಲಾ ಕೆಲಸಗಳಲ್ಲವೇ?

ತರಕಾರಿ ಅಂಗಡಿಯಲ್ಲಿ, ಬದನೆಕಾಯಿ ತೂಕ ಹಾಕುವ ಹೊತ್ತಿಗೆ ಅಂಗಡಿಯವನ ಮನೆಯ ಕಷ್ಟಸುಖ ವಿಚಾರಿಸಿ, ರಸ್ತೆಯಲ್ಲಿ ಸಿಕ್ಕ ಹಳೆಯ ಸಹೋದ್ಯೋಗಿಯೊಡನೆ ರಾಜಕೀಯದ ಚರ್ಚೆ ನಡೆಸಿ ಜಗತ್ತಿನ ಸಮಸ್ತ ಸಮಸ್ಯೆಗಳಿಗೂ ಅಲ್ಲೇ ಪರಿಹಾರ ಸೂಚಿಸಿ ಬರುವಾಗ ಮನೆಗೆ ತಲುಪುದು ತಡವಾಗುತ್ತದೆ. "ಒಂದು ಕೊತ್ತಂಬರಿ ಸೊಪ್ಪು ತರಲು ಇಷ್ಟೊಂದು ಹೊತ್ತಾ?" ಎಂದು ಮಡದಿ

ಕೇಳಿದಾಗ, ಚೀಲದಿಂದ ಬದನೇಕಾಯಿ ತೆಗೆದಿಡುತ್ತೇನೆ. "ಓ,.. ಸರಿ ಹೋಯ್ತು! ದಾರಿಯಲ್ಲಿ ಸಮಾಜೋದ್ಧಾರ ಮಾಡುವ ಭರದಲ್ಲಿ ಅಂಗಡಿಗೆ ಹೋಗಿದ್ದು ಯಾಕೆಂದು ಹೇಗೆ ನೆನಪಿರಲು ಸಾಧ್ಯ ನಮ್ಮ ಸಾಹೇಬ್ರಿಗೆ" ಎಂದು ನಗುತ್ತಾ ಅಡುಗೆ ಮನೆಗೆ ಹೋಗುವ ಹೆಂಡತಿಯ ಕಡೆ ನೋಡುತ್ತಾ ತಲೆ ಕೆರೆದುಕೊಳ್ಳುತ್ತಾ ನಿಲ್ಲುವ ದೃಶ್ಯ ಸಾಮಾನ್ಯವೇ ಸರಿ.

ಕಚೇರಿಯ ಕಡತಗಳ ಗಡಿಬಿಡಿ ಮುಗಿದಿರಬಹುದು, ಆದರೆ ಬದುಕಿನ ಪುಟಗಳನ್ನು ಪ್ರೀತಿಯಿಂದ ತಿರುವಿ ಹಾಕುವ ಉತ್ಸಾಹ ಎಂದಿಗೂ ಮುಗಿಯುವುದಿಲ್ಲ, ಅಲ್ಲವೇ? ಅದರಲ್ಲೂ ಬಂಧು ಮಿತ್ರರ ಮನೆಯಲ್ಲಿ ನಡೆಯುವ ಯಾವುದಾದರೂ ಮದುವೆ, ಸೀಮಂತ, ನಾಮಕರಣ ಇತ್ಯಾದಿ ಸಮಾರಂಭಗಳಿಗೆ ಕರೆ ಬಂದರಂತೂ ಸ್ವರ್ಗಕ್ಕೆ ಮೂರೇ ಗೇಣು! ಹೋದ ಸಾರಿ ಅವರ ಮನೆಗೆ ಹೋದಾಗ ಯಾವ ಶರ್ಟ್ ಧರಿಸಿದ್ದೆ ಎಂದು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿ, ಈ ಸಾರಿ ಹೊಸ ಜುಬ್ಬಾ ಧರಿಸಿ ಹೊರಡುತ್ತೇನೆ. ಅಲ್ಲಿ 'ಅಂಕಲ್', 'ತಾತ' ಪದಗಳು ಕೇಳಿದರೂ ಮನಸ್ಸು ಬೇಸರಗೊಳ್ಳುವುದಿಲ್ಲ. ಆದರೆ ಕೆಲವರು ಕಾಲಿಗೆ ನಮಸ್ಕರಿಸಲು ಬಂದಾಗ, "ಅಯ್ಯೋ... ನಾನಿನ್ನೂ ಅಷ್ಟು ದೊಡ್ಡವನಲ್ಲ" ಎನ್ನುತ್ತಾ ದೊಡ್ಡ 'ಹಗ್' ಕೊಡಲು ಪ್ರಯತ್ನಿಸುತ್ತೇನೆ! ಹೊಸ ಜನಾಂಗದವರ ಹತ್ತಿರ ಹೋಗಿ, ಬಾಯಿ ತುಂಬಾ ಮಾತನಾಡಿಸಿ, ಅವರ ಫೋನ್ ನಂಬರ್ ತೆಗೆದುಕೊಂಡು ಖುಷಿಯಾಗಿ 'ಸೇವ್' ಮಾಡಿಕೊಳ್ಳುತ್ತೇನೆ. ನನ್ನ ಸ್ಟೇಟಸ್ ನೋಡುವವರಲ್ಲಿ ಅವರೂ ಒಬ್ಬರಾಗಬಹುದು ಎಂಬ ಆಸೆ ನನಸಾದಾಗ ಖುಷಿಯಾಗುವುದರಲ್ಲಿ ಏನು ಆಶ್ಚರ್ಯ?

ಇನ್ನೂ ಬುಧವಾರ ಬಂದರೆ, ಸಿನಿಮಾ ಟಿಕೆಟ್ ಬೆಲೆ ಕಡಿಮೆ ಎಂದು ಹೋಗುವುದು ಮತ್ತು ಉಳಿಸಿದ ಎರಡರಷ್ಟು ದುಡ್ಡನ್ನು ಪಾಪ್ ಕಾರ್ನ್ ಮೇಲೆ ಖರ್ಚು ಮಾಡುವುದು ಸಾಮಾನ್ಯ. ಇನ್ನು ಒ.ಟಿ.ಟಿ.ಯಲ್ಲಿ "ನಾಗರಹಾವು" ಸಿನಿಮಾದಿಂದ ಹಿಡಿದು "ಮುಂಗಾರು ಮಳೆ"ಯವರೆಗೆ ಎಲ್ಲಾ "ಲವ್ ಸ್ಟೋರಿ" ಸಿನಿಮಾಗಳನ್ನು ನೋಡಿದರೂ, ಕೊನೆಯ ಹದಿನೈದು ನಿಮಿಷಗಳಲ್ಲಿರುವ ಕಣ್ಣೀರಿನ ದೃಶ್ಯಗಳನ್ನು ನೋಡದೆ ಮುಂದಿನ ಸಿನಿಮಾಗೆ ಹಾರುತ್ತೇನೆ!

ಮನಸ್ಸಿನ ಎಲ್ಲಾ ಕೀಲುಗಳಿಗೆ ಸಂತೋಷದ ಎಣ್ಣೆ ಹಚ್ಚಿ ಏಮಾರಿಸಿದಷ್ಟು ಸುಲಭವಾಗಿ ದೇಹದ ಕೀಲುಗಳಿಗೆ ಸಮಾಧಾನ ಮಾಡಲು ಸಾಧ್ಯವಿಲ್ಲ. ಆಗಾಗ ನೋವು ಕೊಟ್ಟು "ಸ್ವಲ್ಪ ನಿಧಾನ" ಎಂದು ಎಚ್ಚರಿಸುತ್ತವೆ. ಕಿವಿಯ ಹತ್ತಿರ ಬಿಳಿ ಕೂದಲು ಮೊದಲು ಬಂದು "ವಯಸ್ಸಾಗುತ್ತಿದೆ, ನಿಧಾನಿಸು" ಎಂದು ಪಿಸುಗುಟ್ಟುತ್ತದೆ ಎಂದು ಎಲ್ಲೋ ಓದಿದ್ದು ನೆನಪಾಗುತ್ತದೆ. ಅದಕ್ಕೆ ತಕ್ಷಣ ಅದರ ಬಣ್ಣವನ್ನು ಕಪ್ಪಾಗಿಸಿ, ಆ ಕೂದಲಿಗೂ ಗೊಂದಲ ಮೂಡಿಸುತ್ತೇನೆ! ಕೂದಲು ಬೆಳ್ಳಗಾಗಲು ಪ್ರಾರಂಭವಾಗಿರಬಹುದು;ಆದರೆ ಮನಸ್ಸು ಮಾತ್ರ ಬೆಳಗಿನ ಕಾಫಿಯ ಘಮಲಿನಂತೆ, ಗಿಡದಲ್ಲಿ ಆಗ ತಾನೇ ಅರಳಿದ ಹೂವಿನಂತೆ ಸದಾ ತಾಜಾ.

"ಇಳಿ ವಯಸ್ಸಿನಲ್ಲಿ ಏನು ಉತ್ಸಾಹ!" ಎಂದು ಯಾರಾದರೂ ಉದ್ಗರಿಸಿದರೆ ದೃಷ್ಟಿ ಹಾಕುತ್ತಾರೆ ಎಂದುಕೊಳ್ಳ ಬೇಡಿ. ಅದು ಬದುಕಿನ ಸಣ್ಣ ಸಣ್ಣ ಕ್ಷಣಗಳನ್ನು ಇನ್ನೂ ಮಗುವಿನ ಕುತೂಹಲದಿಂದ ನೋಡುವ, ಬಂಧುಮಿತ್ರರ ಕರೆಗೆ ಓಡಿ ಹೋಗುವ, ಹೊಸ ಪರಿಚಯವನ್ನು ಖುಷಿಯಿಂದ ಸ್ವೀಕರಿಸುವ ಮನಸ್ಸಿಗೆ ಸಿಗುವ ಒಂದು ಸಾರ್ಥಕ ನಮನ.

ವಯಸ್ಸಾಗುವುದು ಬೆಳ್ಳಗಾಗುವ ಕೂದಲಿಗೆ ಮಾತ್ರ; ಎಂದಿಗೂ ಬಾಡದ ಉತ್ಸಾಹದ ಮನಸ್ಸಿಗಲ್ಲ. ಅಲ್ಲವಾ?

■

ನನ್ನ ದೇಶದ ಪ್ರಜಾಪ್ರಭುತ್ವದ ಸೊಬಗು

✍ ಹಳದೀಪುರ ವಾಸುದೇವರಾವ್

ಸಾವಿರದ ಒಂಬೈನೂರ ನಲವತ್ತೇಳರ ಅಗಸ್ಟ್ ತಿಂಗಳ ಹದಿನೈದರಂದು ನನ್ನ ದೇಶಕ್ಕೆ ಸ್ವಾತಂತ್ರ್ಯ ಬಂತು. ಪ್ರಜಾಪ್ರಭುತ್ವ ಆಯಿತು, ಅಂದರೆ ಪ್ರಜೆಗಳೇ ಪ್ರಭುಗಳಾದರು. ಆದರೆ ನನಗಾಗ ಹದಿನಾಲ್ಕು ವರ್ಷ ವಯಸ್ಸು. ಅಂದು ನನಗೆ ಸ್ವಾತಂತ್ರ್ಯ ಎಂದರೆ ಏನು? ಪ್ರಜಾಪ್ರಭುತ್ವ ಎಂದರೆ ಏನು? ಅದರ ಮಹತ್ವ ಏನು ಎಂದು ತಿಳಿದಿರಲಿಲ್ಲ. ನನಗೇನೇ ಏನು? ನನ್ನ ದೇಶದ ಬಹತೇಕ ಜನರಿಗೆ ತಿಳಿದಿರಲಿಲ್ಲ. ಹೀಗೇ ಪ್ರಜಾಪ್ರಭುತ್ವದ ಅರಿವೆಯೇ ಇಲ್ಲದವರು ಪ್ರಭುಗಳಾದೆವು. ಇದೇ ಪ್ರಜಾಪ್ರಭುತ್ವದ ಸೊಬಗು.

ಮುಂದೆ ಪ್ರಜಾಪ್ರತಿನಿಧಿಗಳನ್ನು ಆರಿಸುವುದಕ್ಕೆ ಚುನಾವಣೆ ನಡೆಯಿತು. ನಾವು ಎಷ್ಟೋ ಜನ ಮತ ಚಲಾಯಿಸಲು ಹೋಗಲೇ ಇಲ್ಲ ಆದರೂ, ಚುನಾವಣೆಗೆ ನಿಂತವರು ಆರಿಸಿ ಬಂದರು, ಆಳಿದರು. ಇದೂ ಒಂದು ಪ್ರಜಾಪ್ರಭುತ್ವದ ಸೊಬಗು. ಹಾಗೆ ಒಂದುವೇಳೆ ಮತ ಚಲಾಯಿಸಲು ನಾನು ಹೋದರೂ ಅಭ್ಯರ್ಥಿಯ ಗುಣಾವಗಳನ್ನು ನೋಡುವುದಿಲ್ಲ. ಅವನು ಯೋಗ್ಯನೋ ಇಲ್ಲವೋ ನೋಡುವುದಿಲ್ಲ, ಬದಲಾಗಿ ಅವನು ಯಾವ ಜಾತಿಯವನು, ನನಗೇನು ಸಂಬಂಧ ಎನ್ನುವುದನ್ನು ನೋಡುತ್ತೇನೆ. ಅಂದರೆ, ನನಗೆ ನನ್ನ ದೇಶದ ಹಿತಕ್ಕಿಂತ ನನ್ನ ಸ್ವಾರ್ಥ ಮುಖ್ಯ. ಚುನಾವಣೆಗೆ ನಿಂತ ಅಭ್ಯರ್ಥಿ ನನಗೇನು ಕೊಟ್ಟ ಎನ್ನುವುದನ್ನು ನಾನು ನೋಡುತ್ತೇನೆ. ಅವನು ಹಣ ಕೊಟ್ಟನೋ, ಹೆಂಡ ಕೊಟ್ಟನೋ, ವಸ್ತ್ರ ಕೊಟ್ಟನೋ ಎನ್ನುವುದನ್ನು ಪರಿಗಣಿಸುತ್ತೇನೆಯೇ ಹೊರತು, ಆ ವ್ಯಕ್ತಿ ಎಂಥವನು? ಇದನ್ನೆಲ್ಲಾ ನನಗೆ ಕೊಟ್ಟು ಆರಿಸಿ ಬರಲು ಬಯಸುವ ವ್ಯಕ್ತಿಯಲ್ಲಿ ಇರುವ ಸ್ವಾರ್ಥ ನೋಡುವುದಿಲ್ಲ, ಇದೇ ಪ್ರಜಾಪ್ರಭುತ್ವದ ಸೊಬಗು.

ನನಗೆ ಉಚಿತವಾಗಿ ಸಿಗುವ ಅಕ್ಕಿ, ದವಸ ಧಾನ್ಯ ಬಸ್ಸಿನ ಪ್ರಯಾಣ, , ವಿದ್ಯುಚ್ಛಕ್ತಿ ಸ್ವೀಕರಿಸುವ ನಾನು, ಅದನ್ನು ನನ್ನ ದೇಶದ ಸ್ವತ್ತು, ತೆರಿಗೆದಾರರು ಕೊಟ್ಟ ತೆರಿಗೆಯಿಂದ ಇದನ್ನೆಲ್ಲ ನನಗೆ ಕೊಡುತ್ತಿದ್ದಾನೆ ಎನ್ನುವುದನ್ನು ನಾನು ಅರಿಯಲು ಪ್ರಯತ್ನಪಡುವುದಿಲ್ಲ. ಸದ್ಯಕ್ಕೆ ನನಗಾದ ಲಾಭ ನೋಡುತ್ತೇನೆ. ಇದನ್ನೆಲ್ಲಾ ಸ್ವೀಕರಿಸಲು ನಾನೇನು ಭಿಕ್ಷುಕನೇ? ಎನ್ನುವುದನ್ನು ಒಂದು ಕ್ಷಣವೂ ಯೋಚಿಸುವುದಿಲ್ಲ. ನನ್ನ ದುರಾಸೆಯಿಂದ, ನನ್ನ ಬೇಜವಾಬ್ದಾರಿತನದಿಂದ ಯೋಗ್ಯರಲ್ಲದವರು ಪ್ರಜಾಪ್ರತಿನಿಧಿಗಳಾಗಿ ಆರಿಸಿ ಬರುವುದು ಪ್ರಜಾಪ್ರಭುತ್ವದ ಒಂದು ಸೊಬಗು. ಏಕೆಂದರೆ, ಎಂಥವರಿಂದ ಯಾವ ರೀತಿಯಿಂದ ಅವನು ಆರಿಸಿ ಬಂದ ಎಂದು ಪರಾಮರ್ಶೆ ಮಾಡುವಂತಿಲ್ಲದಿರುವುದೇ ಪ್ರಜಾಪ್ರಭುತ್ವದ ಸೊಬಗು.

ಹಾಗೆ ನೋಡಿದರೆ, ನಾನು ಚುನಾವಣೆಗೆ ನಿಲ್ಲಬಹುದು, ಸಾಧ್ಯವಾದರೆ, ವಿಧಾನ ಸಭೆಗೋ, ವಿಧಾನ ಪರಿಷತ್ತಿಗೋ, ಲೋಕಸಭೆಗೋ, ರಾಜ್ಯ ಸಭೆಗೋ ಸ್ಪರ್ಧಿಸಬಹುದು, ಆರಿಸಿಯೂ ಬರಬಹುದು. ಅದಕ್ಕೆ ಪ್ರತಿಯೊಬ್ಬರಿಗೂ ಅವಕಾಶವಿದೆ. ಅದಕ್ಕೆ ಯಾವುದೇ ವಿದ್ಯಾರ್ಹತೆ ಇರಬೇಕಾಗಿಲ್ಲ. ಹಾಗೆ ನೋಡಿದರೆ ಒಂದು ಇಲಾಖೆಯ ಅಧಿಕಾರಿಯಾಗಬೇಕಾದರೆ ಐಎಎಸ್, ಐಪಿಎಸ್, ಕೆಎಎಸ್ ಮೊದಲಾದ ಪರೀಕ್ಷೆ ಪಾಸಾಗಬೇಕು. ಒಂದು ಪ್ರಾಥಮಿಕ ಶಾಲೆಯ ಉಪಾಧ್ಯಾಯನಾಗಲು ಪಿಯುಸಿ, ಟಿಸಿಹೆಚ್ ಪಾಸಾಗಿರಬೇಕು. ಪ್ರೌಢಶಾಲೆಗೆ ಉಪಾಧ್ಯಾಯನಾಗಲು ಬಿಎ, ಬಿಎಸ್ಸಿ, ಬಿಎಡ್ ಆಗಿರಬೇಕು. ಆದರೆ ಪ್ರಜಾಪ್ರತಿನಿಧಿಯಾಗುವುದಕ್ಕೆ ವಿದ್ಯಾರ್ಹತೆ ಇರಬೇಕಿಲ್ಲ, ಇದೇ ಪ್ರಜಾಪ್ರಭುತ್ವದ ಸೊಬಗು.

ಹೀಗೆ ಚುನಾವಣೆಗೆ ನಿಂತ ನಾನು ಆರಿಸಿ ಬಂದರೆ, ಮುಂದೆ ಅಧಿಕಾರ ಪಡೆದು ಮಂತ್ರಿಯೂ



ಆಗಬಹುದು, ಹಾಗೆ ಮಂತ್ರಿಯಾದ ನಾನು, ಆಡಳಿತದ ಗಂಧ ಗಾಳಿ ಗೊತ್ತಿಲ್ಲದಿದ್ದರೂ, ಮುಖ್ಯ ಮಂತ್ರಿಯಾಗ–ಬಹುದು, ಪ್ರಧಾನ ಮಂತ್ರಿಯಾಗಬಹುದು. ಇದೇ ಪ್ರಜಾಪ್ರಭುತ್ವದ ಸೊಬಗು.

ಒಂದು ಅಣೆಕಟ್ಟು ಹೇಗೆ ಕಟ್ಟುತ್ತಾರೆ, ಅದರಲ್ಲಿ ಏನೇನು ಇರುತ್ತದೆ, ತೂಬು ಎಂದರೆ ಏನು? ಏತಕ್ಕೆ? ಎಡದಂಡೆ ಕಾಲುವೆ, ಬಲದಂಡೆ ಕಾಲುವೆ ಎಂದರೆ ಏನು? ಸಿಲ್ಕಟ್ರಾಪ್ ಎಂದರೆ ಏನು? ಏಕೆ? ಎನ್ನುವ ಪ್ರಥಮ ಜ್ಞಾನವಿಲ್ಲದಿರುವ ನಾನು, ಬೃಹತ್ ನೀರಾವರಿ ಮಂತ್ರಿಯಾಗಬಹುದು. ಪೆವಿಂಗ್ ಅಂದರೆ ಏನು? ಸೊಲಿಂಗ್ ಅಂದರೆ ಏನು? ಬ್ಲಾಕ್ ಟಾಪಿಂಗ್ ಅಂದರೆ ಏನು? ಒಂದು ಮೋರಿ ಎಲ್ಲಿ ಕಟ್ಟಬೇಕು? ಹೇಗೆ ಕಟ್ಟಬೇಕು? ಒಂದು ಸೇತುವೆ ಹೇಗಿರಬೇಕು ಎನ್ನುವ ಸಾಮಾನ್ಯ ಜ್ಞಾನ ಇಲ್ಲದಿರುವ ನಾನು ಲೋಕೋಪಯೋಗಿ ಮಂತ್ರಿಯಾಗಬಹುದು, ಇದು ಪ್ರಜಾಪ್ರಭುತ್ವದ ಸೊಬಗು.

ನನ್ನ ಜೀವನದಲ್ಲಿ ಎಂದೂ ಒಂದು ಸ್ಪಾನರ್ ಹಿಡಿಯದೇ ಇರುವ ನಾನು, ಸ್ಕ್ರೂ ಡ್ರೈವರ್ ಹಿಡಿಯದೇ ಇದ್ದ ನಾನು, ಕೈಗಾರಿಕಾ ಮಂತ್ರಿಯಾಗಬಹುದು ಇದು ಪ್ರಜಾಪ್ರಭುತ್ವದ ಸೊಬಗು. ನಾಡ ಭಾಷೆ ಸರಿಯಾಗಿ ಮಾತಾಡಲು ಬಾರದವನು, ವಿದ್ಯೆಯ ಗಂಧಗಾಳಿ ಇಲ್ಲದವನು ಅಂತಹ ನಾನು, ಶಿಕ್ಷಣ ಮಂತ್ರಿಯಾಗಬಹುದು, ಇದೂ ಪ್ರಜಾಪ್ರಭುತ್ವದ ಸೊಬಗು. ಒಬ್ಬ ವೈದ್ಯನಾಗಲು ಕನಿಷ್ಠ ಒಂದು ವೈದ್ಯಕೀಯ ಪದವಿ ಬೇಕು, ಹಾಗಿಲ್ಲದಿದ್ದರೆ, ಅವನು ವೈದ್ಯನಾಗಿ ಕೆಲಸ ಮಾಡುತ್ತಿದ್ದರೆ ಅವನನ್ನು ಜೈಲಿಗೆ ಕಳುಹಿಸಲಾಗುವುದು. ಆದರೆ ವೈದ್ಯಕೀಯ ಮಂತ್ರಿಯಾಗಲು ನನಗೆ ಅಂತಹ ಯಾವುದೇ ನಿರ್ಬಂಧವಿಲ್ಲ. ಒಂದೊಮ್ಮೆ ಪೋಲಿಸ್ ಮ್ಯಾನ್ಯುವೆಲ್ ಓದದೇ ಇರುವ ನಾನು, ಅವಕಾಶ ಸಿಕ್ಕರೆ ಗೃಹ ಮಂತ್ರಿಯೂ ಆಗಬಹುದು. ಇದನ್ನೆಲ್ಲಾ ಹೇಳಿದರೆ ಪ್ರಾಜ್ಞರಾದ ನನ್ನ ಸ್ನೇಹಿತರು ಸಚಿವನಾದವನು ಕೆಲಸ ಮಾಡಿಸಬೇಕೇ ಹೊರತು ಕೆಲಸ ಮಾಡುವುದಲ್ಲ, ಬೇಕಾಗಿಯೂ ಇಲ್ಲ. ಆದರೆ, ವಹಿಸಿಕೊಂಡ ಕೆಲಸದ ಪ್ರಾಥಮಿಕ ಜ್ಞಾನವಿದ್ದರೆ ಕೆಲಸ ಮಾಡಿಸುವುದು ಸುಲಭ. ಕೈ ಕೆಳಗಿನವರು ಗೌರವಿಸುತ್ತಾರೆ ಹಾಗೂ ಅವರು ಮಾಡಿದ ಕೆಲಸ ಸಮರ್ಪಕವಾಗಿದೆಯೋ ಇಲ್ಲವೋ ಎನ್ನುವುದನ್ನು ಗುರುತಿಸಬಹುದು ಎನ್ನುವುದು ನನ್ನ ಅಭಿಪ್ರಾಯ.

ಹಲವು ಬಲಿದಾನದಿಂದ ಕಷ್ಟಪಟ್ಟು ಸಂಪಾದಿಸಿದ ಸ್ವಾತಂತ್ರ್ಯ ತನ್ಮೂಲಕ ಬಂದ ಪ್ರಜಾಪ್ರಭುತ್ವ ನನ್ನ ಹೊಣೆಗೇಡಿತನದಿಂದ ದುರ್ಬಳಕೆ ಆಗಬಾರದು, ದುರುಪಯೋಗವಾಗಬಾರದು. ಅದರ ಎಚ್ಚರ ನನಗಿರಬೇಕು. ದೇಶದ ಹಣ ಪೋಲಾಗದಂತೆ, ದೇಶದ ಸರ್ವತೋಮುಖ ಅಭಿವೃದ್ಧಿ ಕುಂಠಿತವಾಗದಂತೆ ನೋಡಿಕೊಳ್ಳುವುದು ನನ್ನ ಹೊಣೆ ಎಂದು ನಾನು ತಿಳಿದಿರಬೇಕು. ನನ್ನ ನಾಡಿನ, ದೇಶದ ಜನ ಒಳ್ಳೆಯ ಶಿಕ್ಷಣ ಪಡೆಯಬೇಕು, ಕಾಯಿಲೆಯಿಂದ ನರಳುತ್ತಿರುವವರು ಒಳ್ಳೆಯ ಚಿಕಿತ್ಸೆ ಪಡೆಯಬೇಕು. ಎಲ್ಲರೂ ಸುಖ ಸಮೃದ್ಧಿಯಿಂದ ಬಾಳಬೇಕು ಎನ್ನುವ ಮನೋಭಾವ ನನ್ನದಾಗಿರಬೇಕು. ಸ್ವಾರ್ಥ ಮರೆತು ದೇಶದ ಹಿತವನ್ನು ನಾನು ನೋಡಬೇಕು. ಹಾಗಾದಾಗಲೇ ನಿಜವಾದ ಪ್ರಜಾಪ್ರಭುತ್ವದ ಸೊಬಗನ್ನು ನಾವು ನೋಡಬಹುದು, ಆನಂದಿಸಬಹುದು, ಹಾಗಾಗಲೆಂದು ಹಾರೈಸೋಣ. ■

ಮೂಖರ್ಜಿಯ ಕಥೆ

ಪುಷ್ಪಲತಾ ಟಿ ಜಿ

ಸುರಿಯುವ ಮಳೆ ನಿಂತು ಆಗತಾನೆ ಊರಿನತ್ತ ಸೂರ್ಯ ತನ್ನ ವಿಶಾಲ ಕಿರಣ ಹರಡುತ್ತಿದ್ದ. ಮಳೆ ಬಿಸಿಲು ಒಟ್ಟಾಗಿ ಕಾಮನಬಿಲ್ಲು ಮಲೆನಾಡಿನ ಮರದಿಂದ ಮರಕ್ಕೆ ಉಯ್ಯಾಲೆ ಆಡುತ್ತಿತ್ತು. ಇತ್ತ ಪುಟ್ಟಿಯ ಸಿಂಬ ಮರಿ ಹಾಕಿದ್ದು ಅಂಗಳದ ತುಂಬೆಲ್ಲ ಆರ್ಭಟ ಶುರು ಮಾಡಿದ್ದವು.

ಮರಿ ಕೇಳಿದವರಿಗೆಲ್ಲ ನೋಡೋಣ ಎಂದೇ ಹೇಳಿಕೊಂಡು ಬಂದಿದ್ದ ಪುಟ್ಟಿ ಅವರು ಸಾಕುವ ಅಳತೆಗೋಲನ್ನು ಗುಟ್ಟಾಗಿ ಅಳೆಯುತ್ತಿದ್ದಳು. ಅಷ್ಟು ಹೊತ್ತಿಗೆ ಗೇಟನ್ನು ಯಾರೋ ತೆಗೆಯುತ್ತಿರುವ ದೃಶ್ಯ. ಸಿಂಬ ಮರಿ ಹುಟ್ಟಿದ ನಂತರ ಸೋಮಾರಿಯಂತೆ ಮಲಗಿಯೆ ಇರುತಿತ್ತು. ಈಗಲೂ ಹಾಗೆ ಮಲಗಿದ್ದ ಜಾಗದಲ್ಲೇ ಬಾಲ ಆಡಿಸುತಿತ್ತು. ಎದ್ದು ನೋಡುವ ಸಾಹಸಕ್ಕೆ ಹೋಗಲಿಲ್ಲ. ಮರಿಗಳು ಒಂದಿಷ್ಟು ಬೇಸರ ಆಗುವವರೆಗೆ ಕೂಗಿ ಓಡಿ ಬಂದವು. ನೋಡಿದರೆ ಸಣ್ಣಮ್ಮ ಮೊಳಕಾಲಿನ ವರೆಗೂ ಸೀರೆಯನ್ನು ಎತ್ತಿಕಟ್ಟಿ ಮೆಟ್ಟಿಲು ಇಳಿದು ಬರುತ್ತಿದ್ದರು. ಪುಟ್ಟಿಗೆ ಅವರನ್ನು ನೋಡಿ ಸಣ್ಣ ತಲೆನೋವು ಆರಂಭವಾಯಿತು ಸಣ್ಣಮ್ಮ ಮರಿ ಹುಟ್ಟುವ ಮೊದಲೇ ತನ್ನ ಹೆಸರಿಗೆ ಒಂದನ್ನು ಬರೆದುಕೊಂಡಿದ್ದೇನೋ ನಿಜ ಆದರೆ ಪುಟ್ಟಿಯ ಲೆಕ್ಕದಲ್ಲಿ ಅವರು ಕೊನೆಯ ಸಾಲಿನಲ್ಲಿಯೂ ಇರಲಿಲ್ಲ ಸಣ್ಣಮ್ಮನಿಗೆ ಮರಿ ಹೆಣ್ಣಾದರೂ ಆಕ್ಷೇಪವಿಲ್ಲ ಗಂಡಾದರು ಹಿರಿಮೆಯಿಲ್ಲ. ಅಂದ ಮಾತ್ರಕ್ಕೆ ಅವರೇನು ಸ್ತ್ರೀವಾದಿಯೋ....ಸಮ ಸಮಾಜ ನಿರ್ಮಾಪಕರೋ ಅಲ್ಲ. ಅವರಿಗೆ ಬೇಕಿರುವುದು ನಾಯಿ ಮಾತ್ರ. ಬೆಳಿಗ್ಗೆ ಆದರೆ ಸಾಕು ಊರ ಸಂಚಾರಕ್ಕೆ ಸಾಗುವ ಅವರಿಗೆ ಈಗ ಕಡಿಯದೆ ಬಿಟ್ಟ ಕಬ್ಬಿನ ಚಿಂತೆ. ಸಣ್ಣಮ್ಮನ ದಿನಚರಿ ಗೊತ್ತಿದ್ದ ಮಂಗಗಳು ಅವರಷ್ಟೇ ಚುರುಕಾಗಿದ್ದವು. ಮೊದಲು ಹಳೆ ರೇಡಿಯೋ ಇಲ್ಲವೇ ರೆಕಾರ್ಡ್ ಹಾಕಿ ಮಂಗಗಳನ್ನು ಮೋಸ ಮಾಡುತಿದ್ದ ಚಾಣಕ್ಯ ಅಜ್ಜಿಯ ಆಟ ಹೆಚ್ಚು ದಿನ ನಡೆಯಲಿಲ್ಲ. ಕೇಳಿದ್ದೆ ಕೇಳಿ ಅವಕ್ಕೆ ಬೇಜಾರಾಯಿತೋ ಇಲ್ಲವೇ ಸಣ್ಣಮ್ಮನ ಚುರುಕುತನ ಅರಿವಾಯಿತೋ ಒಟ್ಟಾರೆ ಯಥಾ ಪ್ರಕಾರ ಸಣ್ಣಮ್ಮ ಅತ್ತ ಹೊರಡುತ್ತಿದ್ದಂತೆ ಇತ್ತ ಮಂಗಗಳು ಕಬ್ಬು ಸೀಳುವುದರಲ್ಲಿ ಮೈ ಮರೆಯುತ್ತಿದ್ದವು. ಮಂಗಗಳ ಉಪಟಳದಿಂದ ಬೇಸೆತ್ತ ಸಣ್ಣಮ್ಮ ಒಂದು ದಿನ ಬೀದಿ ನಾಯಿಯನ್ನು ರೊಟ್ಟಿ ಆಸೆ ತೋರಿಸಿ ಎಳೆದು ತಂದಿದ್ದರು. ತಂದವರು ಒಂದು ಹೊತ್ತಿನ ಊಟ ಹಾಕಿ ತೋಟದಲ್ಲಿ ಕಟ್ಟಿದವರು ಅತ್ತ ತಿರುಗಿಯು ನೋಡಿಲ್ಲ. ನಾಯಿ ಹಸಿವಿಗೆ ಅರಚುತ್ತಾ ಮಲಗಿ ಒದ್ದಾಡಿದ್ದರಿಂದ ಎರಡು ದಿನ ಮಂಗಗಳು ಜಾಗ ಖಾಲಿ ಮಾಡಿದವು ಮೂರನೆಯ ದಿನಕ್ಕೆ ನಾಯಿಯ ಶಕ್ತಿ ಮಲಗಿ ಬಾಲ ಆಡಿಸುವುದಕ್ಕೆ ಸೀಮಿತವಾಗಿದ್ದೆ ತಮ್ಮ ಕಾರುಬಾರು ಶುರು ಮಾಡಿದವು ಸಿಟ್ಟಿಗೆದ್ದ ಸಣ್ಣಮ್ಮ ನಾಯಿಗೆ ಹಾಕಿದ ಒಂದು ರೊಟ್ಟಿ ವ್ಯರ್ಥವಾಯಿತೆಂದು ಕಟ್ಟಿದ್ದನ್ನು ಬಿಚ್ಚಿದ್ದೆ ನಾಯಿ ಹಿಂದಿರುಗಿ ನೋಡದಂತೆ ಪಲಾಯನ ಮಾಡಿತು. ಸಣ್ಣಮ್ಮ ನಾಯಿಯನ್ನು ಬೊಗಳುವ ಯಂತ್ರ ಎಂದು ತಿಳಿದಂತಿತ್ತು. ಹೀಗಾಗಿ ಅವರಿಗೆ ಕೊಟ್ಟರೆ ಗೌರಿ ಮನೆಯಲ್ಲಿರುವ ಮೂರು ಮರಿಗಳೂ ಬೇಕಿತ್ತು. ಒಂದೊಂದು ದಿಕ್ಕಿಗೆ ಒಂದೊಂದು ಕಟ್ಟಿ ತನ್ನ ಕೆಲಸ ಸುಲಭ ಮಾಡಿಕೊಳ್ಳುವ ಯೋಚನೆ ಇದ್ದರೂ ಗೌರಿ ಮಗಳು ಸೊಕ್ಕಿನ ಹುಡುಗಿ. ಅದೇನು ನಾಯಿ ಮರಿ ಇಟ್ಟುಕೊಂಡು ನಾಯಿಫಾಮ್ ಮಾಡ್ತಾಳೋ ಏನೋ ಎಂದು ಮನಸೋ ಇಚ್ಚೆ ಬಯ್ದು ಕೊಂಡೆ ಒಂದು ಮರಿ ಕೇಳಿದ್ದರು.

ತಮ್ಮ ಕಾಲಿನತ್ತ ಬಂದ ಮರಿಯನ್ನು ಕಾಲಿನಲ್ಲಿ ಸವರುತ್ತ ನನ್ನ ಮರಿ ಇಷ್ಟು ದೊಡ್ಡ ಆಗಿಬಿಟ್ಟಿದೆ ಎಂದರು. ನಿಮ್ಮ ಕೈಗೆ ತಲುಪಿದರೆ ಅದು ದೊಡ್ಡ ಆಗುವುದೇ ಇಷ್ಟು ....ಮುಗಿತು ಅದರ ಕಥೆ ಎಂದು ಮನದಲ್ಲೇ ಬೇಡಿಕೊಂಡರು ಏನು ಹೇಳಲು ತೋಚದೆ ನಗುತ್ತಾ ಪುಟ್ಟಿ

ಅಲ್ಲಿಂದ ಒಳ ಜಿಗಿದಳು.

ಒಳಗಿನಿಂದ ಗೌರಿ ಅತಿಥಿ ಸತ್ಕಾರಕ್ಕೆ ತಯಾರಾಗಿ ಹೊರ ಬಂದಳು. ಅಷ್ಟರಲ್ಲಿ ದಾಕಪ್ಪ ಪ್ರತ್ಯಕ್ಷನಾದ.ದನ ಹುಡುಕ್ತಾ ಬಂದೆ ಅಂತ ಪೀಠಿಕೆ ಆರಂಭಿಸಿ ಕುಳಿತವ ಸಣ್ಣಮ್ಮನ ಜೊತೆ ಮಾತು ಕಥೆ ಆರಂಭಿಸಿದ. ಅವರಿಬ್ಬರ ನಡುವೆ ಕೆಲ ಹೊತ್ತಿನಲ್ಲೇ ರಾಜಕೀಯ, ಧಾರ್ಮಿಕ ಆರ್ಥಿಕ ಎಲ್ಲ ಚರ್ಚೆಗಳು ದೇಶ ಮಟ್ಟದಿಂದ ಅಂತರಾಷ್ಟ್ರೀಯ ಮಟ್ಟದ ವರೆಗೆ ನಡೆದವು. ಕತ್ತಲಾಗುವ ಹೊತ್ತಿಗು ದಾಕಪ್ಪನಿಗೆ ದನ ಹುಡುಕುವ ಕಾರ್ಯ ನೆನಪಾದಂತಿರಲಿಲ್ಲ. ದೇಶದ ಕುರಿತು ಇಬ್ಬರೂ ಸುದೀರ್ಘ ಚರ್ಚೆಗೆ ಇಳಿದಿದ್ದರು. ಸಣ್ಣಮ್ಮ ತನ್ನ ತೋಟದ ಮಂಗನ ಹಿಂಡಿಗೆ ಬಯ್ಯುವುದನ್ನೇ ಮುಖ್ಯ ವಿಷಯ ಮಾಡಿಕೊಂಡಿದ್ದರು. ದಾಕಪ್ಪ ಅದಕ್ಕೆಲ್ಲ ಬಿಜೆಪಿ, ಮೋದಿಯೇ ಕಾರಣ ಎಂದು ಸಣ್ಣಮ್ಮನ ಸಾಂಸಾರಿಕ ವಿಷಯವನ್ನು ರಾಜಕೀಯಕ್ಕೆ ಕೊಂಡೊಯ್ಯುತ್ತಿದ್ದ. ಸಣ್ಣಮ್ಮನ ತೋಟದ ಮಂಗಗಳ ಕಾಟಕ್ಕೂ ಮೋದಿಗೂ ಏನು ಸಂಬಂಧ ತಿಳಿಯದೆ ಪುಟ್ಟಿ ಗೊಂದಲಕ್ಕೆ ಒಳಗಾದಳು. ಅಲ್ಲಿದ್ದ ವಿಷಯ ಇಷ್ಟೇ ದಾಕಪ್ಪನಿಗೆ ರಾಜಕೀಯ ಮಾತಾಡಲು ಯಾರಾದರೂ ಬೇಕಿತ್ತು ಯಾರು ಸಿಗದೆ ಸಣ್ಣಮ್ಮ ಕಂಡಿದ್ದರು. ಅವರು ತಮ್ಮ ಮನೆ ಹಾಗೂ ತಿರುಗಾಡಿದ ಊರಿನ ಕಥೆ ಹೊರತು ಪಂಚಾಯಿತಿಯ ಮೆಟ್ಟಿಲು ತುಳಿದವರಲ್ಲ, ವಾರ್ತೆಯ ಹೆಸರು ಕೇಳಿದವರಲ್ಲ. ಅವರ ಪ್ರಕಾರ ಅವರು ಮನೆ ಮನೆ ತಿರುಗಿ ಸಂಗ್ರಹಿಸುವ ಸುದ್ದಿ ವಾರ್ತೆ. ಅದನ್ನು ಅಲ್ಲಿಂದ ಇಲ್ಲಿಗೆ ತಲುಪಿಸುವ ಅಗೋಶಿತ ಪೋಸ್ಟ್ ಮ್ಯಾನ್ ಅವರು. ಅವರು ಊರೂರ ಕಥೆ ಹೇಳಲು ಶುರು ಮಾಡುತ್ತಿದ್ದಂತೆ ದಾಕಪ್ಪ ಅವರ ಕಥೆಗೆ ತಿಲಾಂಜಲಿ ಇಟ್ಟು ಹೇಗಾದರೂ ಅದಕ್ಕೆ ರಾಜಕೀಯದ ಸಂಬಂಧ ಕಲ್ಪಿಸಿ ದೇಶ ಮಟ್ಟದ ಚರ್ಚೆ ಮಾಡುತಿದ್ದ.ಇವರಿಬ್ಬರ ಸಹವಾಸ ಬೇಡ ಎಂಬಂತೆ ಗೌರಿ ಅಕ್ಕಿ ಕೇರುವುದರಲ್ಲಿ ಪುಟ್ಟಿ ಅಡುಗೆ ಮಾಡುವುದರಲ್ಲಿ ನಿರತರಾದರು.

ಅಷ್ಟರಲ್ಲಿ ದಾಕಪ್ಪನ ಬಾಯಿಯಲ್ಲಿ ಕೇಳಿದ ಮೂಖರ್ಜಿ ಎಂಬ ಪದ ಕೇಳಿ ಪುಟ್ಟಿ ಹೊರ ಬಂದಳು.ಎಂದು ಕೇಳಿರದ ಪದವೊಂದು ಇಬ್ಬರ ನಡುವೆ ಚರ್ಚೆ ಆಗುತಿತ್ತು. ಅವನಿಗೆ ಮೂಖರ್ಜಿ ಬರೆಯೋದೇ ಸೈ...ಪಾಠ ಕಲಿಸಬೇಕು ಬಡ್ಡಿ ಮಗಗೆ, ನಾನು ಮೊನ್ನೆ ಮೊನ್ನೆ ಪುಟ್ಟಿ ದಾಖಲೆ ತರೋಕೆ ಹೋಗಿದ್ದೆ ಬಡ್ಡಿ ಮಗ ಇವತ್ತು ಆಗಲ್ಲ. ಅಂತ ಕಳಿಸಿದ್ದ. ಮೂರು ದಿನ ಮಾತ್ರ ಬರದಂತೆ ಅವನು ಅವನೆಲ್ಲಿ ಹಿಡಿಯದು. ದುಡ್ಡು ಕೇಳ್ತಾನೆ ಏನು ಬರ್ಸೋಕ್ ಹೋದ್ರು....ಇಂತ ಹಳ್ಳಿ ಶಾಲೆಗೆ ಇಂತವರು ಬಂದ್ರೆ ಬಡೋರ ಕಥೆ ಹೆಂಗೆ....ಇಷ್ಟು ವರ್ಷದಲ್ಲಿ ಇವನೇ ನೋಡು ಇಂಥವನು ಯಾರು ದೊಡ್ಡಪ್ಪ ಎಂದ ಪುಟ್ಟಿಯ ಪ್ರಶ್ನೆಗೆ ನಿಮ್ಮ ಇಸ್ಕೂಲ್ ಮೇಸ್ಟ್ರು...ಅವನಿಗೆ ಒಂದು ಕಥೆ ಮಾಡಬೇಕು ನೋಡ್ಕ ನಾಳೆ ನಾಡಿದ್ದು ಮುಖರ್ಜಿ ಬರೀತೀನಿ ಹಾಗಂದ್ರೆ ಏನು.....ಪುಟ್ಟಿ ಮತ್ತೆ ನಡುವೆ ಪ್ರವೇಶಿಸಿ ಕೇಳಿದಳು.

ಪಡ್ಡು (ಪುಟ್ಟಿಯನ್ನು ದೊಡ್ಡಪ್ಪನ ಮನೆಯಲ್ಲಿ ಕರೆಯುವ ಹೆಸರು) ಅದು ಯಾರು ದಸ್ತಗಿರಿ ಮಾಡ್ತಾರೆ..ಅಂತವರಿಗೆ ಬರೆಯೋ ಅರ್ಜಿ. ಲಂಚ ಕೇಳೋದು, ಹೆಂಗಸರ ಜೊತೆ ಕೆಟ್ಟದಾಗಿ ನಡ್ಕೊಳೋದು ಎಲ್ಲ ಮಾಡ್ತಿದ್ರು ಹಿಂದೆ ಅಧಿಕಾರ ಐತಿ ಅಂತ ಆಗ ಮೇಲಧಿಕಾರಿಗೆ ಅರ್ಜಿ ಬರೆದು ಹಾಕದು ಅಡ್ರೆಸ್ ನಂದು ಹಾಕ್ದೆ ಇದ್ರೆ ಸೈ. ಅವನ ಎತ್ತಿ ಬೇರೆ ಕಡೆ ಹಾಕೋರು. ನಮ್ಮ ಸಮಸ್ಯೆ ಹೋಗೋದು ಈಗ ಅದೆಲ್ಲ ಇಲ್ಲ ದೊಡ್ಡಪ್ಪ. ಮಾಹಿತಿ ಹಕ್ಕಿನಂತಹ ಕಾಯ್ದೆ ಕಟ್ಟಳೆ ಇದೆ.ಕಾನೂನು ಬಿಗಿ ಇದೆ. ನೀನು ಹಣ ಕೇಳಿದ್ರೆ ಒಂದು ರೆಕಾರ್ಡ್ ಮಾಡಿದ್ರೆ ಸಾಕು ಕೇಳಿದವರು ಕಂಬಿ ಹಿಂದೆ ಇರ್ತಾರೆ. ಈ ಡಿಜಿಟಲ್ ಯುಗ ಭ್ರಷ್ಟಾಚಾರ ಇಲ್ಲವಾಗಿಸತ್ತೆ ನೋಡ್ತಿರಿ. ಎಂದ ಪುಟ್ಟಿ ಮಾತಿಗೆ ಹೌದೌದು ಈಗಿನ ಸರ್ಕಾರ ಅದಕ್ಕೆಲ್ಲ ಒಳ್ಳೆ ವ್ಯವಸ್ಥೆ ಮಾಡಿದೆ ಎಂದು ಪುನಃ ರಾಜಕೀಯಕ್ಕೆ ವಿಷಯವನ್ನು ತಿರುಗಿಸಲು ಪುಟ್ಟಿ ಅಲ್ಲಿಂದ ಪರಾರಿಯಾದಳು. ■

ಜೂನ್ 1954ರ ಕೊರವಂಜಿಯಿಂದ

ಅರಾಸೆಯ ಒಸಗೆ

ಅ.ರಾ.ಸೇ.

ಸೂರ್ಯನುದಿಸಿಹನು ನೋಡು ನಿದ್ದೆಯನು ಕೊನೆಮಾಡು
ಏಳೆನ್ನ ಮನದನ್ನೆ ಗಂಟೆ ಎಂಟಾಯ್ತು
ಕಣ್ತೆರೆದು ದಯಮಾಡು ಕಾಫಿ ಒಲೆಯನು ಹೂಡು
ಆಳಿಂಡಿಯಾಕಾಶ ವಾಣಿ ಒರಲುತಿದೆ – 1

ಹಾ ! ತುಂಬು ಬಟ್ಟಲನು ಕಾಲವದು ತಾನೋಡಿ
ಕೈಗೆ ದೊರಕದೆ ಪರಿವ ಪೇಯ ವಿವರಿಸಲೇ
ಮೂವತ್ತು ಮುಗಿದಿತ್ತು : ಒಂದಿಂದು ಬಂದಿಹುದು
ಸಂಬಳದ ದಿವಸವೂ ಕಂಬನಿಯದೇಕೆ ? – 2

ಟೆಹ್ರಾನ ಮುಸದಿಕ್ಕ, ದೆಹಲಿಯಾ ವೈಸ್ರಾಯ
ಟ್ರೂಮನ್ ಫರೂಕರೆಲ್ಲರೂ ವಿಂಡ ಜೊತೆಗೆ
ಹಾರಿಹೋದರು ! ಆದರೇನು? ಮಲೆನಾಡಿನಲಿ
ಕಾಫಿ ಬೆಳೆವುದು ಟೀಯು ಅಸ್ಸಾಮಿನಲ್ಲಿ – 3

ನೆಲ್ಲಿ ಮರದಡಿ ನವ್ಯಕಾವ್ಯವದಿರಲು ;
ತಾಲಿಪಿಟ್ಟೆಂಟು ; ಕೊಳಗದಲಿ ಕಾಫಿ
ಮೇಣ್ ಪ್ಲೇಯರ್ಸ್ ; ಜೊತೆಗೆ ನಿನ್ನ ಸಂಗೀತವಿರೆ
ಎಲ್ಲಿದ್ದರೇನಂತೆ ಅದೆ ಸಗ್ಗವಲ್ತೆ – 4

ವಿಜ್ಞಾನಿ ರಾಜಕಾರಣಿಗಳೆಲ್ಲರು ಸೇರಿ
ಯೂನೋದಲಿ ಶಾಂತಿ ಸಮ್ಮೇಲನ ನಡೆಸೆ
ನಾ ಪೋಗಿ ಎಚ್ ಬಾಂಬ ಕಂಡು ಭಯದಿಂನಡುಗಿ
ಹೋದ ದಾರಿಯಲೆ ಬೆಪ್ಪಾಗಿ ಹಿಂಬರಿದೆ – 5

ಅದರಿಂದಲಾ ಕಾಫಿಯಧಿ ದೇವತೆಯು ಬಂದು
ಹೋಟಲಿನ ಬಾಗಿಲಿನಲಿ ಮುಗುಳು ನಗೆಯಿಂದ

ಮುದದಿಂದ ನಿನ್ನಾತ್ಮ ವನುಕರೆದು ಬಟ್ಟಲಲಿ
ಸುಧೆಯ ನೀಡಲು ಬೆದರದದನು ಕುಡಿ ನೀನು – 6

ಹೈಡ್ರೋಜನ್ನಿನಲಿ ಬಾಂಬಿನ ಬೀಜವಿರಿಸಿದನೆ
ಹಾಲಿವುಡ್ಡಿನಲಿ ತ್ರೀಡೀಯ ತರಿಸಿದನೆ
ನರನ ಕುರಿಯೆನ್ನಿಸಿದ ಆಶೆಗಳ ಹೊರೆಗಾಗಿ
ಅವನೊಳ್ ಕ್ಷಮಾರವ ನೀಡು ಮೇಣ್ ಬೇಡು – 7

ಅಳಿವೆನ್ನ ಬಾಳಿದನು ಕಾಫಿಯಿಂ ಬೆಳಗಿಸೀ
ತನುವಳಿದ ಬಳಿಕೆನ್ನ ಕಾಫಿಯಲಿ ತೊಳೆದು
ಸಿನಿಮ ಥೇಟರಿನ ಪಕ್ಕದಲೆನ್ನ ಸುಟ್ಟು
ಬೂದಿಯನಿರಿಸು ಕಾಂಗ್ರೇಸ್ಸಿ ನೆಗ್ಸಿಬಿಷನಲ್ಲಿ – 7

ಮೊನ್ನೆ ಬೀದಿಯಲಿ 'ಹಿಂಡೂ' ಹುಡುಗ ಕೂಗಿದನು
'ದೇಶಮುಖ ನಾಲ್ಕನೆಯ ಬಡ್ಜೆಟ್ಟನಿಟ್ಟ'
ಮನುಪುತ್ರ ರೊಬ್ಬ ರೊಬ್ಬರ ಕಂಡು ಪೇಳಿದರು
'ಬಂತು ತೆರಿಗೆಯ ಭಾರ ಬೆನ್ನ ಬಗ್ಗಿಸಿರಿ' – 9